ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಹಸಿವನ್ನು ಹಿಂಗಿಸಿ ದೇಹಕ್ಕೆ ಕಸುವನ್ನು ಕೊಡುವ ಎಲ್ಲವೂ ಅನ್ನವೇ; ಗಾಳಿ, ನೀರು, ಬೆಳಕು, ಪಂಚೇಂದ್ರಿಯಗಳ ಮೂಲಕ ದೇಹವನ್ನು ಸೇರುವ ಎಲ್ಲವೂ ಅನ್ನವೇ



ಆಳ-ಅಗಲ
ಭಾರತ-ಜಪಾನ್ ನಂಟು ಏಳು ದಶಕಗಳ ಬಾಂಧವ್ಯ
ವೈದ್ಯರ ವಿರುದ್ಧ ವೃಥಾ ಆರೋಪ: ಹೈಕೋರ್ಟ್ ಕಳವಳ 8
ಮಕ್ಕಳ ಶಿಕ್ಷಣ ವೆಚ್ಚ ನಿಭಾಯಿಸಲು ಸಾಕು 10 ಸಿರಿವಂತರ ಸಂಪತ್ತು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,309 ▲	18,308 ▲	₹49,670 (ಬೆಂಗಳೂರು)	₹63,400 (ಬೆಂಗಳೂರು)	74.25 ▼

ಲಾಕ್‌ಡೌನ್, ಕಠಿಣ ನಿಯಮ ಇಲ್ಲ • ವಾರಾಂತ್ಯ ಕರ್ಫ್ಯೂ ಮುಂದುವರಿಕೆ ಶುಕ್ರವಾರ ನಿರ್ಧಾರ

ತಿಂಗಳಾಂತ್ಯಕ್ಕೆ ಕೋವಿಡ್ ಉಲ್ಬಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಮಾಸಾಂತ್ಯದ ವೇಳೆಗೆ ಗರಿಷ್ಠಮಟ್ಟವನ್ನು ತಲುಪಲಿವೆ ಎಂದು ಆರೋಗ್ಯ ತಜ್ಞರು ಎಚ್ಚರಿಕೆ ನೀಡಿರುವ ಬೆನ್ನಲ್ಲೇ, ಸಂಭಾವ್ಯ ಪರಿಸ್ಥಿತಿ ನಿಭಾಯಿಸಲು ನಡೆದಿರುವ ಸಿದ್ಧತೆಗಳ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯ ಸಭೆ ಸೋಮವಾರ ಸಂಜೆ ಪರಿಶೀಲನೆ ನಡೆಸಿತು.



ಆರ್. ಅಶೋಕ

ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ಕೋವಿಡ್ ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಬಹುತೇಕ ಜ. 25 ರ ವೇಳೆಗೆ ಕೋವಿಡ್ ಪ್ರಕರಣಗಳು ತಾರಕಕ್ಕೆ ಹೋಗಬಹುದು. ಬಳಿಕ ಇಳಿಕೆ ಆಗಬಹುದು ಎಂದು ತಜ್ಞರು ತಿಳಿಸಿದ್ದಾರೆ ಎಂದು ಸಭೆಯ ಬಳಿಕ ಕಂದಾಯ ಸಚಿವ ಆರ್. ಅಶೋಕ ಸುದ್ದಿಗಾರರಿಗೆ ಹೇಳಿದರು.

ಎಲ್ಲ ಬೆಳವಣಿಗೆಗಳನ್ನು ಗಮನಿಸಿ ಕೋವಿಡ್ ನಿಯಮಗಳ ಬಗ್ಗೆ ಮುಂದಿನ ತೀರ್ಮಾನಿಸಬೇಕಿದೆ. ಇದಕ್ಕಾಗಿ ಶುಕ್ರವಾರ ತುರ್ತುಸಭೆ ಕರೆಯಲಾಗಿದೆ. ಪ್ರಕರಣಗಳು ಇಳಿಕೆಯಾದರೆ ನಿಯಮಗಳನ್ನು ಸಡಿಲಿಸುವ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.


ಆದರೆ, ರಾಜ್ಯದಲ್ಲಿ ಲಾಕ್‌ಡೌನ್ ಅಥವಾ ಇನ್ನಷ್ಟು ಕಠಿಣ ನಿಯಮ ಜಾರಿಗೆ ತರುವ ಉದ್ದೇಶವಿಲ್ಲ. ವಾರಾಂತ್ಯ ಕರ್ಫ್ಯೂ ಮುಂದುವರಿಸಬೇಕೆ ಅಥವಾ ಸಡಿಲಗೊಳಿಸಬೇಕೇ ಎಂಬುದನ್ನೂ ಶುಕ್ರವಾರದ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದರು.

ಬೆಂಗಳೂರು ಸೇರಿ ರಾಜ್ಯದ ಎಲ್ಲೆಡೆ ಶುಕ್ರವಾರದವರೆಗೆ ಶಾಲಾ–ಕಾಲೇಜುಗಳು ಯಥಾಸ್ಥಿತಿ ಮುಂದುವರೆಯಲಿವೆ. ಬಳಿಕ ಆ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಅಶೋಕ ಹೇಳಿದರು.

ರಾಜ್ಯದಲ್ಲಿ ಕೋವಿಡ್ ಪರೀಕ್ಷೆಯನ್ನು ಹೆಚ್ಚು ಮಾಡಲಾಗುತ್ತಿದೆ. ಅಷ್ಟು ಅಗತ್ಯವಿಲ್ಲ. ರಾಜ್ಯದಲ್ಲಿ ಒಟ್ಟು 1.50 ಲಕ್ಷ ಪರೀಕ್ಷೆ ಮಾಡಿದರೆ ಸಾಕು. ಲಸಿಕೆ ಪಡೆಯದೇ ಇರುವವರಿಗೆ ಲಸಿಕೆ ನೀಡುವತ್ತ ಗಮನಹರಿಸಬೇಕು ಎಂಬುದಾಗಿ ತಜ್ಞರು ಸಭೆಯಲ್ಲಿ ತಿಳಿಸಿದ್ದಾರೆ ಎಂದು ಹೇಳಿದರು.


ಇನ್ನಷ್ಟು ಸುದ್ದಿಗಳು 4

ಪರಿಸ್ಥಿತಿ ನಿಭಾವಣೆ: ಬೊಮ್ಮಾಯಿ ಸೂಚನೆ



ಕೋವಿಡ್ ಉಲ್ಬಣಗೊಂಡು ಪರಿಸ್ಥಿತಿ ಬಿಗಡಾಯಿಸದಂತೆ ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

- ಕೋವಿಡ್ ದೃಢಪಟ್ಟವರು ಮನೆಗಳಲ್ಲಿ ಪ್ರತ್ಯೇಕವಾಗಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಮೇಲೆ ಹೆಚ್ಚು ನಿಗಾ ಇಡಬೇಕು. ಟೆಲಿ ಟ್ರಯಾಜಿಂಗ್ ಮೂಲಕ ಮುಂದಿನ 7 ದಿನಗಳವರೆಗೆ ಪ್ರತಿ ದಿನ 2ರಿಂದ 3 ಬಾರಿ ಕರೆ ಮಾಡಿ ಮಾರ್ಗದರ್ಶನ ನೀಡಬೇಕು.
- ಬೆಂಗಳೂರಿನಲ್ಲಿ ಒಪಿಡಿಗಳಿಗೆ ಹೆಚ್ಚಿಗೆ ಗಮನ ಕೊಡುವುದರ ಜತೆಗೆ ಹೆಚ್ಚು ಸಿಬ್ಬಂದಿ ನಿಯೋಜಿಸುವುದು.
- ಮನೆಗಳಲ್ಲಿ ಪ್ರತ್ಯೇಕವಾಗಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಔಷಧದ ಕಿಟ್‌ಗಳನ್ನು ಬೇಗನೇ ತಲುಪಿಸಲು ವ್ಯವಸ್ಥೆ. ಇದಕ್ಕಾಗಿ ಸೇವಾ ಸಂಸ್ಥೆಗಳ ನೆರವು.
- ಸೋಂಕಿತ ಮಕ್ಕಳ ಕುರಿತು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು. ಪೋಷಕರಿಗೆ ಧೈರ್ಯ ತುಂಬುವುದರ ಜತೆಗೆ ಔಷಧ ಕಿಟ್‌ಗಳನ್ನು ನೀಡಬೇಕು. ಮಕ್ಕಳಿಗೆ ಪ್ರತ್ಯೇಕ ಕಿಟ್ ಸಿದ್ಧಪಡಿಸಬೇಕು.
- ಆಮ್ಲಜನಕ ತಯಾರಿಕ ಘಟಕಗಳನ್ನು ಸನ್ನದ್ಧಗೊಳಿಸಬೇಕು. ಅಗತ್ಯ ಸಿಬ್ಬಂದಿ ಮತ್ತು ಇಂಧನ ಸೇರಿ ಅಗತ್ಯ ಪರಿಕರಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಆಸ್ಪತ್ರೆಗಳಲ್ಲಿ ಜನರೇಟರ್ ವ್ಯವಸ್ಥೆ ಮಾಡಿಕೊಳ್ಳಬೇಕು.
- ಮಕ್ಕಳು ಮತ್ತು 60 ವರ್ಷ ಮೇಲ್ಪಟ್ಟವರ ಮೇಲೆ ಹೆಚ್ಚಿನ ನಿಗಾ ಇಡಬೇಕು. ಲಸಿಕೆ ಸಿಗದವರಿಗೆ ಆದಷ್ಟು ಬೇಗ ಲಸಿಕೆ ನೀಡಬೇಕು.
- ಮಾಸ್ಕ್ ಧರಿಸುವುದು ಮತ್ತು ಜನರು ಕೋವಿಡ್ ಸೂಕ್ತ ನಡವಳಿಕೆ ಅನುಸರಿಸುವ ಬಗ್ಗೆ ಮಾಧ್ಯಮಗಳಲ್ಲಿ ಜಾಗೃತಿ ಮೂಡಿಸಬೇಕು.
- ಎರಡನೇ ಡೋಸ್ ಲಸಿಕೆ ಪಡೆದವರ ಸಂಖ್ಯೆ ಕಡಿಮೆ ಇರುವ ಜಿಲ್ಲೆಗಳ ಜಿಲ್ಲಾಧಿಕಾರಿ ಹಾಗೂ ಸಿಇಒಗಳೊಂದಿಗೆ ವಿಡಿಯೊ ಸಂವಾದ ನಡೆಸಿ ನಿರ್ದೇಶನ
- 15 ರಿಂದ 18 ವರ್ಷದವರಿಗೆ ಲಸಿಕೆ ನೀಡುವ ಪ್ರಕ್ರಿಯೆ ಇನ್ನಷ್ಟು ತೀವ್ರಗೊಳಿಸಬೇಕು





ರಥೋತ್ಸವ ಬಾದಾಮಿ ಸಮೀಪದ ಬನಶಂಕರಿಯಲ್ಲಿ ಸೋಮವಾರ ಸಂಜೆ ಜರುಗಿದ ದೇವಿಯ ರಥೋತ್ಸವದಲ್ಲಿ ಸಾವಿರಾರು ಭಕ್ತರು ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿ ಪಾಲ್ಗೊಂಡಿದ್ದರು

ಸುದ್ದಿ 8

12–14 ವರ್ಷದವರಿಗೆ ಮಾರ್ಚ್‌ನಿಂದ ಲಸಿಕೆ ಸಾಧ್ಯತೆ

ನವದೆಹಲಿ(ಪಿಟಿಐ): ದೇಶದಲ್ಲಿ 12 ರಿಂದ 14 ವರ್ಷ ವಯೋಮಾನದವರಿಗೆ ಮಾರ್ಚ್ ತಿಂಗಳಿಂದ ಕೋವಿಡ್ ಲಸಿಕೆ ಹಾಕುವ ಸಾಧ್ಯತೆ ಇದೆ ಎಂದು ಕೋವಿಡ್–19 ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ (ಎನ್‌ಟಿಎಜಿಐ) ಅಧ್ಯಕ್ಷ ಡಾ. ಎನ್.ಕೆ ಅರೋರಾ ಸೋಮವಾರ ಹೇಳಿದ್ದಾರೆ.



15ರಿಂದ 18 ವರ್ಷ ವಯೋಮಾನದವರಿಗೆ ಲಸಿಕೆ ನೀಡಿಕೆ ಪೂರ್ಣಗೊಂಡ ಬಳಿಕ 12ರಿಂದ 14 ವರ್ಷ ವಯೋಮಾನದವರಿಗೆ ಲಸಿಕೆ ನೀಡುವ ಅಭಿಯಾನ ಆರಂಭಿಸುವ ಕುರಿತು ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದೂ ಅವರು ತಿಳಿಸಿದ್ದಾರೆ.

15–18 ವರ್ಷ ವಯೋಮಾನದ ಅಂದಾಜು 7.4 ಕೋಟಿ ಮಕ್ಕಳಲ್ಲಿ, ಈಗಾಗಲೇ 3.45 ಕೋಟಿಗೂ ಅಧಿಕ ಮಕ್ಕಳು ಕೋವ್ಯಾಕ್ಸಿನ್‌ನ ಮೊದಲ ಡೋಸ್ ಪಡೆದುಕೊಂಡಿದ್ದಾರೆ. 28 ದಿನಗಳಲ್ಲಿ ಇವರು ಎರಡನೇ ಡೋಸ್ ಪಡೆದುಕೊಳ್ಳಲಿದ್ದಾರೆ ಎಂದು ವಿವರಿಸಿದ್ದಾರೆ.

15–18 ವರ್ಷ ವಯೋಮಾನದವರು ಲಸಿಕೆ ಹಾಕಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಿದ್ದಾರೆ. ಲಸಿಕೆ ನೀಡಿಕೆಯ ವೇಗವನ್ನು ಅನುಸರಿಸಿ ಈ ವಯೋಮಾನದ ಇನ್ನುಳಿದವರು ಜನವರಿ ಅಂತ್ಯದ ವೇಳೆಗೆ ಮತ್ತು ನಂತರದಲ್ಲಿ ಮೊದಲ ಡೋಸ್ ಪಡೆದುಕೊಳ್ಳುವ ಸಾಧ್ಯತೆ ಇದೆ. ಫೆಬ್ರುವರಿ ಅಂತ್ಯಕ್ಕೆ ಅವರ ಎರಡನೇ ಡೋಸ್ ಕೂಡ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅರೋರಾ ತಿಳಿಸಿದ್ದಾರೆ.

‘100 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಹೊಸದಾಗಿ ನೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರಂಭಿಸುವ ಉದ್ದೇಶ ಇದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

‘ಪ್ರಜಾವಾಣಿ’ ಕಚೇರಿಯಲ್ಲಿ ಸೋಮವಾರ ನಡೆದ ‘ಫೋನ್ ಇನ್’ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ‘ದಕ್ಷಿಣ ರಾಜ್ಯಗಳಲ್ಲಿ ಕರ್ನಾಟಕದಲ್ಲೇ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಆದರೆ, ಕೆಲವು ಜಿಲ್ಲೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಆರೋಗ್ಯ ಕೇಂದ್ರಗಳು ಇಲ್ಲ. ಮಲೆನಾಡು ಪ್ರದೇಶಗಳಲ್ಲಿ ಪರಿಸ್ಥಿತಿ ವಿಭಿನ್ನವಾಗಿದೆ. ಹೀಗಾಗಿ, ಸಮಗ್ರವಾಗಿ ವಿಶ್ಲೇಷಣೆ ನಡೆಸಿ ಕನಿಷ್ಠ 40 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರುವ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಲಾಗಿದೆ’ ಎಂದು ವಿವರ ನೀಡಿದರು.

‘ಕೋವಿಡ್ ಕಾರಣದಿಂದ ಆರ್ಥಿಕ ಸಂಕಷ್ಟ ಎದುರಾಗಿದೆ. ಹೀಗಾಗಿ, ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾತಿ ದೊರೆಯುವುದು ಕಷ್ಟವಾದರೂ ಪ್ರಯತ್ನಿಸಲಾಗುವುದು. ಜತೆಗೆ, ಈಗಿರುವ 9,600 ಆರೋಗ್ಯ ಉಪಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ’ ಎಂದು ತಿಳಿಸಿದರು.

‘ಕಳೆದ 5–6 ತಿಂಗಳಲ್ಲಿ ನಾಲ್ಕು ಸಾವಿರ ವೈದ್ಯರನ್ನು ನೇಮಕ ಮಾಡಲಾಗಿದೆ. ಇದರಿಂದಾಗಿ ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶೇಕಡ 90ರಷ್ಟು ವೈದ್ಯರಿದ್ದಾರೆ’ ಎಂದು ವಿವರಿಸಿದರು.

‘ಪ್ರಯೋಗಾಲಯ ತಂತ್ರಜ್ಞರ ನೇಮಕಾತಿಗೂ ಅನುಮೋದನೆ ನೀಡುವಂತೆ ಮುಖ್ಯಮಂತ್ರಿ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಶೀಘ್ರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ’ ಎಂದು ಸವಣೂರಿನ ಮಾಲತೇಶ್ ಎನ್ನುವವರ ಪ್ರಶ್ನೆಗೆ ಉತ್ತರಿಸಿದರು.

ಇನ್ನೊಂದು ಸುದ್ದಿ 8

ಏಪ್ರಿಲ್‌ಗೆ ಅತ್ಯಾಧುನಿಕ ಆಂಬುಲೆನ್ಸ್ ಸೇವೆ



‘ಅತ್ಯಾಧುನಿಕ ಮತ್ತು ಜೀವ ರಕ್ಷಕ ವ್ಯವಸ್ಥೆಯನ್ನು ಹೊಂದಿರುವ ಒಂದು ಸಾವಿರ ಆಂಬುಲೆನ್ಸ್‌ಗಳನ್ನು ಸಿದ್ಧಪಡಿಸಲಾಗುತ್ತಿದೆ. ಏಪ್ರಿಲ್ 1ಕ್ಕೆ ಈ ಹೊಸ ಸೌಲಭ್ಯ ದೊರೆಯಲಿದೆ’ ಎಂದು ಸಚಿವ ಸುಧಾಕರ್ ತಿಳಿಸಿದರು.

‘ಈಗಿರುವ ವ್ಯವಸ್ಥೆಯಲ್ಲಿ ಚಾಲಕ ಕೊಂಡೊಯ್ದ ಅಥವಾ ರೋಗಿ ಹೇಳಿದ ಕಡೆ ಚಿಕಿತ್ಸೆ ನೀಡಲಾಗುತ್ತಿದೆ. ಹೊಸ ಆಂಬುಲೆನ್ಸ್‌ಗಳಲ್ಲಿ ನಕಾಶೆ ವ್ಯವಸ್ಥೆಯೂ ಇರಲಿದೆ. ಯಾವ ಆಸ್ಪತ್ರೆಗೆ ರೋಗಿಯನ್ನು ದಾಖಲಿಸಬೇಕು ಎನ್ನುವ ಸಂದೇಶವನ್ನು ಕೇಂದ್ರೀಕೃತವಾದ ವ್ಯವಸ್ಥೆಯ ಮೂಲಕ ಚಾಲಕರಿಗೆ ರವಾನಿಸಲಾಗುತ್ತದೆ. ಇದರಿಂದ, ರೋಗಿಗಳಿಗೆ ಸಮೀಪದ ಆಸ್ಪತ್ರೆಯಲ್ಲಿ ಅಗತ್ಯ ಇರುವ ಚಿಕಿತ್ಸೆ ತಕ್ಷಣಕ್ಕೆ ಲಭಿಸಲಿದೆ’ ಎಂದು ವಿವರಿಸಿದರು.

‘ಇದುವರೆಗೆ ಇದ್ದ 108 ಆಂಬುಲೆನ್ಸ್ ವ್ಯವಸ್ಥೆಯಲ್ಲಿ ಉತ್ತರದಾಯಿತ್ವ ಇರಲಿಲ್ಲ ಮತ್ತು ಹಲವು ರೀತಿಯ ಕೊರತೆಗಳಿದ್ದವು. ಹೀಗಾಗಿ, ಸಮಗ್ರ ಅಧ್ಯಯನಕ್ಕೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಸಿಂಗಪುರ, ಬ್ರಿಟನ್ ಸೇರಿದಂತೆ ಉತ್ತಮ ಆರೋಗ್ಯ ವ್ಯವಸ್ಥೆ ಹೊಂದಿರುವ ದೇಶಗಳಲ್ಲಿನ ಆರೋಗ್ಯ ಸೇವೆಗಳನ್ನು ಅಧ್ಯಯನ ಮಾಡಿ ಇಲ್ಲಿನ ಪರಿಸ್ಥಿತಿ ತಕ್ಕಂತೆ ಆಂಬುಲೆನ್ಸ್‌ಗಳನ್ನು ಸಿದ್ಧಪಡಿಸಲಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ನೆರವು ಸಹ ಪಡೆಯಲಾಗಿದೆ. ಸಚಿವ ಸಂಪುಟದ ಅನುಮೋದನೆ ಪಡೆದ ಬಳಿಕ ಟೆಂಡರ್ ಕರೆಯಲಾಗುವುದು’ ಎಂದರು.

ಪ್ರಜಾವಾಣಿ ಫೋನ್–ಇನ್

ಜ.26: 3 ಸಾವಿರ ಕೇಂದ್ರಗಳಲ್ಲಿ ‘ಗ್ರಾಮ ಒನ್’ ಸೇವೆ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತ್ವರಿತವಾಗಿ ಒದಗಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ‘ಗ್ರಾಮ ಒನ್’ ಯೋಜನೆ ಗಣರಾಜ್ಯೋತ್ಸವ ದಿನದಿಂದ 12 ಜಿಲ್ಲೆಗಳಲ್ಲಿ ಜಾರಿಗೆ ಬರಲಿದೆ.

ಈ ಯೋಜನೆಯ ಕುರಿತಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ವರ್ಚುವಲ್ ಸಭೆ ನಡೆಯಿತು.

ಸಭೆಯಲ್ಲಿ ಬೊಮ್ಮಾಯಿ ಅವರು, ‘ಜ.26ರಂದು 12 ಜಿಲ್ಲೆಗಳಲ್ಲಿ ಯೋಜನೆ ಜಾರಿಗೆ ಬರಲಿದೆ. ಮುಂದಿನ ದಿನಗಳಲ್ಲಿ ಎಲ್ಲ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವುದು. ಪ್ರಮುಖ ಇಲಾಖೆಗಳ ಎಲ್ಲ ಸೇವೆಗಳು ಗ್ರಾಮೀಣ ಜನರಿಗೆ ಸುಲಭವಾಗಿ ಸಿಗಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಒನ್, ಕರ್ನಾಟಕ ಒನ್ ಮಾದರಿ ಈ ಯೋಜನೆಯು ಮೊದಲ ಹಂತದಲ್ಲಿ ಬೀದರ್, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಹಾವೇರಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು, ಉಡುಪಿ, ಕೊಡಗು ಜಿಲ್ಲೆಗಳಲ್ಲಿ ಒಟ್ಟು 3 ಸಾವಿರ ಗ್ರಾಮ ಒನ್ ಸೇವಾ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಕಂದಾಯ, ಆಹಾರ, ಆರೋಗ್ಯ, ಕಾರ್ಮಿಕ ಸೇರಿದಂತೆ ವಿವಿಧ ಇಲಾಖೆಗಳ ಅಂದಾಜು 100 ಸೇವೆಗಳು ಗ್ರಾಮ ಒನ್ ಕೇಂದ್ರದಲ್ಲಿ ಲಭ್ಯವಾಗಲಿವೆ. ಈ ಕೇಂದ್ರಗಳಿಗೆ ನಿರಂತರ ವಿದ್ಯುತ್ ಹಾಗೂ ಅಂತರ್ಜಾಲ (ಇಂಟರ್ನೆಟ್) ಸಂಪರ್ಕ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಇ– ಆಡಳಿತ) ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೀವ್ ಚಾವ್ಲಾ ಸಭೆಯಲ್ಲಿದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಕೋವಿಡ್‌ನಿಂದಾಗಿ ಈ ವರ್ಷವೂ ಪೂರ್ಣ ಪ್ರಮಾಣದಲ್ಲಿ ತರಗತಿಗಳಿಗೆ ಖುದ್ದು ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಆದರೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ 5

ಅಬುಧಾಬಿಯಲ್ಲಿ ಶಂಕಿತ ಡ್ರೋನ್ ದಾಳಿ ಭಾರತೀಯರಿಬ್ಬರು ಸೇರಿ ಮೂವರ ಸಾವು

ದುಬೈ (ಎಪಿ): ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ) ರಾಜಧಾನಿ ಅಬುಧಾಬಿಯಲ್ಲಿ ಸೋಮವಾರ ಮೂರು ತೈಲ ಟ್ಯಾಂಕರ್‌ಗಳ ಮೇಲೆ ಹಾಗೂ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ವಿಸ್ತರಣಾ ಪ್ರದೇಶವೊಂದರ ಮೇಲೆ ಶಂಕಿತ ಡ್ರೋನ್ ದಾಳಿ ನಡೆದ ಬಳಿಕ ಸ್ಫೋಟ ಸಂಭವಿಸಿದ್ದು, ಇಬ್ಬರು ಭಾರತೀಯರ ಸೇರಿ ಮೂವರು ಮೃತಪಟ್ಟಿದ್ದಾರೆ.

ಘಟನೆಯಲ್ಲಿ ಇತರ ಆರು ಮಂದಿ ಗಾಯಗೊಂಡಿದ್ದಾರೆ. ಮೃತ ಇನ್ನೊಬ್ಬ ವ್ಯಕ್ತಿ ಪಾಕಿಸ್ತಾನಿ ಪ್ರಜೆ ಎಂದು ಹೇಳಲಾಗಿದೆ. ಮೃತ ಭಾರತೀಯರ ಗುರುತನ್ನು ಅಬುಧಾಬಿ ಪೊಲೀಸರು ಇನ್ನೂ ಬಹಿರಂಗಪಡಿಸಿಲ್ಲ.

ಯುಎಇ ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ ಎಂದು ಯೆಮನ್‌ನ ಹೂತಿ ಉಗ್ರರು ಹೇಳಿಕೊಂಡಿದ್ದಾರೆ. ಆದರೆ ಯುಎಇ ಅಧಿಕಾರಿಗಳು ಇದನ್ನು ಖಚಿತಪಡಿಸಿಲ್ಲ.

ಮೂರು ಟ್ಯಾಂಕರ್‌ಗಳು ಸ್ಫೋಟ: ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ (ಎಡಿಎನ್‌ಒಸಿ) ಸಮೀಪದ ಮುಸಾಫ ಐಸಿಎಡಿ 3 ಪ್ರದೇಶದಲ್ಲಿ ದಾಳಿ ನಡೆದಿದ್ದು, ಮೂರು ಪೆಟ್ರೋಲಿಯಂ ಟ್ಯಾಂಕರ್‌ಗಳು ಸ್ಫೋಟಿಸಿದವು. ಅಬುಧಾಬಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ನಿರ್ಮಾಣ ಹಂತದ ಪ್ರದೇಶದಲ್ಲಿ ಇನ್ನೊಂದು ಸ್ಫೋಟ ಸಂಭವಿಸಿತು. ಇದರಿಂದ ಚಿಕ್ಕದಾಗಿ ಬೆಂಕಿ ಹತ್ತಿಕೊಂಡಿದೆ ಎಂದು ಸರ್ಕಾರಿ ಸ್ವಾಮ್ಯದ ಎಮಿರೇಟ್ಸ್ ಸುದ್ದಿಸಂಸ್ಥೆ ‘ಡಬ್ಲ್ಯುಎಎಂ’ ವರದಿ ಮಾಡಿದೆ.

‘ಡ್ರೋನ್ ಮಾದರಿಯ ಚಿಕ್ಕ ಉಪಕರಣಗಳಿಂದ ಈ ದಾಳಿ ನಡೆದಿರುವುದು ಪ್ರಾಥಮಿಕ ಹಂತದ ತನಿಖೆಯಿಂದ ಗೊತ್ತಾಗಿದೆ. ಸದ್ಯ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ’ ಎಂದು ಸುದ್ದಿಸಂಸ್ಥೆ ತಿಳಿಸಿದೆ.

‘ಯುಎಇ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದು, ಮೃತಪಟ್ಟ ಭಾರತೀಯರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ಯುಎಇಯಲ್ಲಿರುವ ಭಾರತೀಯ ರಾಯಭಾರ ಕಚೇರಿ ಟ್ವೀಟ್ ಮಾಡಿದೆ.

ಯೆಮನ್‌ನ ಹೂತಿ ಬಂಡುಕೋರರು ಯುಎಇ ಹಡಗೊಂದನ್ನು ಒತ್ತೆ ಇರಿಸಿಕೊಂಡ ಎರಡು ದಿನಗಳಲ್ಲೇ ಈ ದಾಳಿ ನಡೆದಿದ್ದು, ಈ ಹಿಂದೆ ಸಹ ಯುಎಇ ಮತ್ತು ಸೌದಿ ಅರೇಬಿಯಾ ಗುರಿಯಾಗಿ ಇಟ್ಟುಕೊಂಡು ಹಲವಾರು ದಾಳಿಗಳನ್ನು ನಡೆಸಿದ್ದಾರೆ.


ಪಂಜಾಬ್ ಮತದಾನ ಫೆ. 14ಕ್ಕೆ ಅಲ್ಲ 20ಕ್ಕೆ

ನವದೆಹಲಿ (ಪಿಟಿಐ): ರಾಜ್ಯ ಸರ್ಕಾರ ಮತ್ತು ವಿವಿಧ ರಾಜಕೀಯ ಪಕ್ಷಗಳ ಬೇಡಿಕೆಗೆ ಅನುಗುಣವಾಗಿ, ಪಂಜಾಬ್ ವಿಧಾನಸಭೆಯ ಮತದಾನ ದಿನಾಂಕವನ್ನು ಫೆಬ್ರುವರಿ 14 ಬದಲು ಫೆಬ್ರುವರಿ 20ಕ್ಕೆ ಚುನಾವಣಾ ಆಯೋಗವು ಮರು ನಿಗದಿ ಮಾಡಿದೆ.

ಗುರು ರವಿದಾಸ ಜಯಂತಿಯು ಫೆ. 16ರಂದು ನಡೆಯಲಿದೆ. ವಾರಾಣಸಿಯಲ್ಲಿ ನಡೆಯಲಿರುವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರ ಅನುಯಾಯಿಯಗಳು ಅಲ್ಲಿಗೆ ಹೋಗುತ್ತಾರೆ. ಫೆ. 14ರಂದು ಈ ಜನರು ವಾರಾಣಸಿಗೆ ಪ್ರಯಾಣಿಸುತ್ತಿರುತ್ತಾರೆ. ಹಾಗಾಗಿ, ಗಣನೀಯ ಸಂಖ್ಯೆಯ ಮತದಾರರು ಮತದಾನದಿಂದ ವಂಚಿತರಾಗಲಿದ್ದಾರೆ. ಆದ್ದರಿಂದ, ಮತದಾನದ ದಿನಾಂಕವನ್ನು ಬದಲಾಯಿಸಬೇಕು ಎಂದು ಪಂಜಾಬ್ ಸರ್ಕಾರ, ವಿವಿಧ ರಾಜಕೀಯ ಪಕ್ಷಗಳು, ಇತರ ಸಂಘಟನೆಗಳು ಆಯೋಗವನ್ನು ಒತ್ತಾಯಿಸಿದ್ದವು.

ಕಥಕ್ ನೃತ್ಯ ದಿಗ್ಗಜ ಪಂಡಿತ್ ಬಿರ್ಜು ಮಹಾರಾಜ್ ನಿಧನ

ನವದೆಹಲಿ (ಪಿಟಿಐ): ಕಥಕ್ ನೃತ್ಯ ಪ್ರಕಾರವನ್ನು ವಿಶ್ವಕ್ಕೆ ಪರಿಚಯಿಸಿ, ಜಗತ್ತಿನಾದ್ಯಂತ ಶಿಷ್ಯರು ಮತ್ತು ಪ್ರೇಕ್ಷಕರನ್ನು ಹೊಂದಿದ್ದ ನೃತ್ಯ ದಿಗ್ಗಜ ಪಂಡಿತ್ ಬಿರ್ಜು ಮಹಾರಾಜ್ (83) ಭಾನುವಾರ ತಡರಾತ್ರಿ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ಮೂವರು ಪುತ್ರಿಯರು, ಇಬ್ಬರು ಪುತ್ರರು ಇದ್ದಾರೆ.



3ನೇ ಪುಟ ನೋಡಿ
ನುಡಿ ನಮನ 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸ್ವಯಂ ಉದ್ಯೋಗಕ್ಕಾಗಿ ಸಾಲ ಕೋರಿ ಬ್ಯಾಂಕ್‌ಗೆ ಅಲೆದು ಹೈರಾಣು

ಮಹಿಳೆಯ ಏಕಾಂಗಿ ಹೋರಾಟ ಯಶಸ್ವಿ

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್‌ನಿಂದ ಪತಿಯನ್ನು ಕಳೆದುಕೊಂಡಿದ್ದ ಮಹಿಳೆ ಸ್ವಯಂ ಉದ್ಯೋಗಕ್ಕಾಗಿ ಸಾಲ ಕೋರಿ ಬ್ಯಾಂಕ್‌ಗೆ ಅಲೆದು ಹೈರಾಣಾಗಿ, ಕೊನೆಗೆ ಹೋರಾಟದ ಮೂಲಕ ಯಶ ಸಾಧಿಸಿದ್ದಾರೆ.

ಮೈಸೂರಿನ ಸರಸ್ವತಿಪುರಂ ನಿವಾಸಿ, ಮಣ್ಣಿನ ಆಭರಣ ತಯಾರಿಸುವ ನೀಲಿ ಕಲಾ ಕ್ರಿಯೇಷನ್ಸ್‌ನ ಸಂಸ್ಥಾಪಕಿ ಜೆ.ಮಂಜುಳಾ ದಿಟ್ಟತನ ತೋರಿದವರು. ಯಂತ್ರೋಪಕರಣ ಖರೀದಿಸಲು ₹ 14.25 ಲಕ್ಷ ಸಾಲಕ್ಕಾಗಿ ರಾಷ್ಟ್ರೀಕೃತ ಬ್ಯಾಂಕ್‌ವೊಂದಕ್ಕೆ ಅಕ್ಟೋಬರ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಮೂರು ತಿಂಗಳು ಅಲೆದಿದ್ದರು. ಬ್ಯಾಂಕ್‌ನವರು ಅರ್ಜಿಯನ್ನು ತಿರಸ್ಕರಿಸಿದ್ದರು.

ನೊಂದ ಮಂಜುಳಾ, ಸೋಮವಾರ ಬೆಳಿಗ್ಗೆ ಬ್ಯಾಂಕ್ ಮೆಟ್ಟಿಲ ಬಳಿ ಏಕಾಂಗಿ ಧರಣಿ ನಡೆಸಿದರು. ಕೊನೆಯಲ್ಲಿ ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಬಂದು ಸಾಲ ನೀಡುವ ಭರವಸೆ ನೀಡಿದ್ದಾರೆ. ಸಾಲ ಪಡೆಯಲು ಪಟ್ಟ ಪಾಡನ್ನು ಅವರು ಫೇಸ್‌ಬುಕ್ ಪುಟದಲ್ಲಿಯೂ ಬರೆದುಕೊಂಡಿದ್ದಾರೆ.

‘ಸ್ವಂತ ಉದ್ದಿಮೆ ವಿಸ್ತರಿಸಲು 2021ರ ಅ.18 ರಂದು ಪಿಎಂಇಜಿಪಿ ಅಡಿ ಸಾಲಕ್ಕೆ ಅರ್ಜಿ ಸಲ್ಲಿಸಿ ದಾಖಲೆ ಒದಗಿಸಿದ್ದೆ. ಅರ್ಜಿ ತಿರಸ್ಕೃತವಾಗಿದೆ ಎಂದು ಡಿ.15 ರಂದು ಕರೆಬಂತು’ ಎಂದಿದ್ದಾರೆ.

4ನೇ ಪುಟ ನೋಡಿ



ಬ್ಯಾಂಕ್ ಮುಂದೆ ಏಕಾಂಗಿ ಪ್ರತಿಭಟನೆ ನಡೆಸಿದ ಮಂಜುಳಾ

ಕೋವಿಡ್‌ನಿಂದ ಮೃತಪಟ್ಟ ಪತಿ

ಮಂಜುಳಾ ಅವರ ಪತಿ ಜಿ.ಕೆ.ಲೋಹಿತ್, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ರಿಮ್ಸ್) ಹಿರಿಯ ಸಂಶೋಧನಾ ವಿಜ್ಞಾನಿಯಾಗಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕೊರೊನಾ ಯೋಧರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕೋವಿಡ್ ತಗುಲಿದ್ದು, ಹೃದಯಾಘಾತದಿಂದ ಕಳೆದ ಏಪ್ರಿಲ್‌ನಲ್ಲಿ ನಿಧನರಾದರು.

‘ಕೊರೊನಾ ವಾರಿಯರ್ ಪತ್ನಿ ಎಂದು ಯಾರ ಬಳಿಯೂ ನೆರವಿಗೆ ಕೈಚಾಚಿಲ್ಲ. ಪತಿ ತೀರಿಕೊಂಡ ಐದನೇ ದಿನದಿಂದಲೇ ದುಡಿಮೆಯಲ್ಲಿ ತೊಡಗಿದೆ. ಕೊರೊನಾ ಸಂಕಷ್ಟದಲ್ಲೂ ಒಬ್ಬಂಟಿಯಾಗಿ ಪತಿಯ ಕನಸು ನನಸು ಮಾಡಲು ಹೆಜ್ಜೆ ಇಡುತ್ತಿದ್ದೇನೆ. ಮನ್ಸೋರೆ ನಿರ್ದೇಶನದ ‘ಆ್ಯಕ್ಟ್ 1978’ ಸಿನಿಮಾ ನನ್ನ ಬದುಕಿನ ಗತಿ ಬದಲಿಸಿದೆ. ಪತಿ ಜೊತೆ ಕಡೆಯದಾಗಿ ನೋಡಿದ ಸಿನಿಮಾವದು’ ಎಂದರು.

ಮಂಗಳವಾರದ ಉಷ್ಣಾಂಶ 28° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ ಇರಲಿದೆ. ನಂತರ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗುವ ಸಾಧ್ಯತೆ

ಹವಾಮಾನ: ಬುಧವಾರ 31° 16° | ಗುರುವಾರ 31° 16° | ಶುಕ್ರವಾರ 31° 17°

ಸೂರ್ಯೋದಯ: 6:46 ಸೂರ್ಯಾಸ್ತ : 6:13 ಚಂದ್ರೋದಯ: ಸಂ. 6:38 ಚಂದ್ರಾಸ್ತ: ಬೆ. 7:01 ಸೋಮವಾರದ ಹವಾಮಾನ : ಗರಿಷ್ಠ 28° ಕನಿಷ್ಠ 18°

ಪ್ರಜಾವಾಣಿ

ಬಿಬಿಎಂಪಿ ಕೈಗೆತ್ತಿಕೊಂಡಿರುವ ಪಶ್ಚಿಮ ಕಾರ್ಡ್ ರಸ್ತೆ ಮೇಲ್ಸೇತುವೆಯ ಹೆಚ್ಚುವರಿ ಕಾಮಗಾರಿ

4 ಜಿ ವಿನಾಯಿತಿ ನೀಡಲು ಒಪ್ಪದ ಹಣಕಾಸು ಇಲಾಖೆ

• ಮಂಜುನಾಥ ಹೆಬ್ಬಾರ್



ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮೇಲ್ಸೇತುವೆ ಕಾಮಗಾರಿ

ಬೆಂಗಳೂರು: ಪಶ್ಚಿಮ ಕಾರ್ಡ್ ರಸ್ತೆ ಮೇಲ್ಸೇತುವೆ ಕಾಮಗಾರಿಗೆ ಟೆಂಡರ್ ಕರೆಯುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಸೆಕ್ಷನ್ 4 ಜಿ ಅಡಿ ವಿನಾಯಿತಿ ನೀಡಲು ಹಣಕಾಸು ಇಲಾಖೆ ಒಪ್ಪಿಲ್ಲ.

ಹೆಚ್ಚುವರಿ ಕಾಮಗಾರಿಗಳ ನೆಪದಲ್ಲಿ ಮೂಲ ಗುತ್ತಿಗೆ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತದ ಕಾಮಗಾರಿಯನ್ನು ಒಬ್ಬರೇ ಗುತ್ತಿಗೆದಾರರಿಗೆ (ಎಂ. ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ) ವಹಿಸಲು ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅಡಿ ವಿನಾಯಿತಿ ನೀಡಬೇಕು ಹಾಗೂ ರಾಜ್ಯ ಸರ್ಕಾರವೇ ಅನುದಾನ ನೀಡಬೇಕು ಎಂದು ನಗರಾಭಿವೃದ್ಧಿ ಇಲಾಖೆಯು ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಹಣಕಾಸು ಇಲಾಖೆಯು, 'ಕಾಮಗಾರಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು ಬಿಬಿಎಂಪಿಯು ಸ್ವಂತ ಸಂಪನ್ಮೂಲದಿಂದ ಭರಿಸಬೇಕು ಅಥವಾ ಇತ್ತೀಚೆಗೆ ಅನುಮೋದನೆಗೊಂಡಿರುವ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ಕಾಮಗಾರಿ ಸೇರಿಸಲು ಕ್ರಮ ವಹಿಸಬೇಕು' ಎಂದು ಸೂಚಿಸಿದೆ. ಈ ಸಂಬಂಧ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್.ಪ್ರಸಾದ್ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಜನವರಿ 13ರಂದು ಪತ್ರ ಬರೆದಿದ್ದಾರೆ.

ಪ್ರಜಾವಾಣಿ ವಿಶೇಷ

'ಅಮೃತ ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು ₹10 ಕೋಟಿಗಿಂತ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಕರೆಯಬೇಕು ಎಂದು ನಗರಾಭಿವೃದ್ಧಿ ಇಲಾಖೆಯು ಜನವರಿ 14ರಂದು ಆದೇಶ ಹೊರಡಿಸಿದೆ. ಒಂದು ವೇಳೆ, ಅಮೃತ ನಗರೋತ್ಥಾನ ಯೋಜನೆಯಡಿ ಅನುದಾನ ನೀಡಿದರೆ ಈ ಯೋಜನೆಗೂ ಟೆಂಡರ್ ಕರೆಯಬೇಕಾಗುತ್ತದೆ' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಇನ್ನೊಂದೆಡೆ, ಈ ಯೋಜನೆಗೆ ರಾಜ್ಯ ಸಚಿವ ಸಂಪುಟವು ಅನುಮೋದನೆ ನೀಡುವ ಮೊದಲೇ ಗುತ್ತಿಗೆದಾರರು ಕಾಮಗಾರಿ ಆರಂಭಿಸಿದ್ದಾರೆ.

ಪಶ್ಚಿಮ ಕಾರ್ಡ್ ರಸ್ತೆಗೆ ರಾಜಾಜಿನಗರದಲ್ಲಿ – ಮಂಜುನಾಥನಗರ ಮುಖ್ಯರಸ್ತೆ ಕೂಡುವಲ್ಲಿ ದ್ವಿಪಥ ಸಂಚಾರದ ಮೇಲ್ಸೇತುವೆ, ಶಿವನಗರದ 8ನೇ ಮತ್ತು 1ನೇ ಮುಖ್ಯ ರಸ್ತೆಗಳು ಕೂಡುವಲ್ಲಿ ದ್ವಿಮುಖ ಸಂಚಾರದ ಇಂಟಿಗ್ರೇಟೆಡ್ ಅಂಡರ್ ಪಾಸ್ ಮತ್ತು ಬಸವೇಶ್ವರ ನಗರದ ಮುಖ್ಯರಸ್ತೆ ಕೂಡುವಲ್ಲಿ ಏಕಮುಖ ಸಂಚಾರದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಳ ಪ್ಯಾಕೇಜ್‌ನ ಗುತ್ತಿಗೆಯನ್ನು ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನೀಡಲಾಗಿದೆ. ಒಟ್ಟು ₹ 89.86 ಕೋಟಿ ವೆಚ್ಚದ ಈ ಪ್ಯಾಕೇಜ್‌ಗೆ 2015ರ ಫೆ.11ರಂದು ಅನುಮೋದನೆ ನೀಡಲಾಗಿತ್ತು.

ಮಂಜುನಾಥನಗರದ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ 2018ರ ಆ. 27ರಂದು ಲೋಕಾರ್ಪಣೆಗೊಂಡಿದೆ. ಶಿವನಗರ 8ನೇ ಮತ್ತು 1ನೇ ಮುಖ್ಯ ರಸ್ತೆ ಕೂಡುವಲ್ಲಿ ಇಂಟಿಗ್ರೇಟೆಡ್ ಅಂಡರ್‌ಪಾಸ್ ಬದಲಿಗೆ ಮೇಲ್ಸೇತುವೆಯನ್ನೇ ನಿರ್ಮಿಸಲಾಗಿದ್ದು, 2021ರ ಅ. 4ರಂದು ವಾಹನ ಸಂಚಾರಕ್ಕೆ ಮುಕ್ತಗೊಂಡಿದೆ. ಬಸವೇಶ್ವರನಗರ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ ಗಡುವು ಮುಗಿದು ನಾಲ್ಕು ವರ್ಷಗಳಾದರೂ ಪೂರ್ಣಗೊಂಡಿಲ್ಲ.

ಶಿವನಗರ ಮುಖ್ಯರಸ್ತೆಗಳು ಕೂಡುವಲ್ಲಿನ ಮೇಲ್ಸೇತುವೆಯ ಉದ್ಘಾಟನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿದ ವಸತಿ ಸಚಿವ ವಿ.ಸೋಮಣ್ಣ ಹಾಗೂ ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್, ಬಸವೇಶ್ವರನಗರದ ಮುಖ್ಯರಸ್ತೆ ಕೂಡುವಲ್ಲಿಯೂ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸುವಂತೆ ಕೋರಿಕೆ ಸಲ್ಲಿಸಿದ್ದರು. ಈ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿದ ಮುಖ್ಯಮಂತ್ರಿಯವರು, ಬಿಬಿಎಂಪಿ ಅಧಿಕಾರಿಗಳಿಗೆ ಮೌಖಿಕ ಆದೇಶವನ್ನೂ ನೀಡಿದ್ದರು. ಬಳಿಕ ಬಿಬಿಎಂಪಿ ಮುಖ್ಯ ಆಯುಕ್ತರು ಬಸವೇಶ್ವರನಗರ ರಸ್ತೆ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆಯನ್ನು ₹ 23.62 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ ಕೋರಿ ಅ.27ರಂದು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದರು.

ಯೋಜನಾ ಮೊತ್ತ ₹169 ಕೋಟಿಗೆ ಹೆಚ್ಚಳ

ಪಶ್ಚಿಮ ಕಾರ್ಡ್ ರಸ್ತೆ ಕಾಮಗಾರಿಯ ಪ್ಯಾಕೇಜನ್ನು ಮೂರು ಬಾರಿ ಪರಿಷ್ಕರಿಸಲಾಗಿದೆ. ಶಿವನಗರ ಮುಖ್ಯ ರಸ್ತೆ ಕೂಡುವಲ್ಲಿ ಕೆಳಸೇತುವೆ ಬದಲು ಇಂಟಿಗ್ರೇಟೆಡ್ ಮೇಲ್ಸೇತುವೆ ನಿರ್ಮಿಸಲು ನಿರ್ಧರಿಸಲಾಯಿತು. ಈ ಪರಿಷ್ಕರಣೆಯಿಂದ ಪ್ಯಾಕೇಜ್‌ನ ಮೊತ್ತ ₹ 89.86 ಕೋಟಿಯಿಂದ ₹ 112.07 ಕೋಟಿಗೆ ಹೆಚ್ಚಿತು. ಬಳಿಕ 72ನೇ ಅಡ್ಡರಸ್ತೆಯ ಬಳಿ ₹ 33.71 ಕೋಟಿ ವೆಚ್ಚದ ಮೇಲ್ಸೇತುವೆಯನ್ನೂ ಇದೇ ಪ್ಯಾಕೇಜ್‌ಗೆ ಸೇರಿಸಲಾಯಿತು. ಆಗ ಮೊತ್ತ ₹ 145.78 ಕೋಟಿಗೆ ಹೆಚ್ಚಿತು. ಈಗ ಬಸವೇಶ್ವರನಗರ ಜಂಕ್ಷನ್‌ನಲ್ಲಿ ₹ 23.62 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಿಸಲು ನಿರ್ಧರಿಸಲಾಗಿದೆ. ಈಗ ಪ್ಯಾಕೇಜ್ ಮೊತ್ತ ₹ 169.4 ಕೋಟಿಗೆ ಹೆಚ್ಚಳವಾಗುತ್ತಿದೆ.

ಸುದ್ದಿ 2 ನಿಮಿಷ

'ಕೋವಿಡ್': ಪೊಲೀಸ್ ಕಮಿಷನರ್ ಚೇತರಿಕೆ

ಬೆಂಗಳೂರು: 'ಕೋವಿಡ್'ನಿಂದ ಚೇತರಿಸಿಕೊಂಡಿರುವ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಮಂಗಳವಾರದಿಂದ ಪೂರ್ಣಪ್ರಮಾಣದಲ್ಲಿ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ.

'ಜನವರಿ ಮೊದಲ ವಾರದಲ್ಲಿ ಆಯಾಸ ಹಾಗೂ ಸುಸ್ತು ಕಾಣಿಸಿಕೊಂಡಿತ್ತು. ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿದ್ದೆ. ಜ. 11ರಂದು ಪಾಸಿಟಿವ್ ಬಂದಿತ್ತು. ಅಂದಿನಿಂದ ಮನೆಯಲ್ಲೇ ಪ್ರತ್ಯೇಕವಾಗಿ ವಾಸವಿದ್ದೆ. ಇದೀಗ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಮಂಗಳವಾರದಿಂದ ಕಚೇರಿಯಿಂದ ಕೆಲಸ ಮಾಡಲಿದ್ದೇನೆ' ಎಂದು ಕಮಿಷನರ್ ಕಮಲ್ ಪಂತ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.



738 ಪೊಲೀಸರಿಗೆ ಸೋಂಕು: 'ಮೂರನೇ ಅಲೆ ವೇಳೆ ನಗರದ 738 ಪೊಲೀಸರಿಗೆ ಕೊರೊನಾ ಸೋಂಕು ತಗುಲಿದ್ದು, ಬಹುತೇಕರು ಮನೆಯಲ್ಲೇ ಚಿಕಿತ್ಸೆ ಪಡೆದುಕೊಂಡು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸುವಂತೆ ಪೊಲೀಸರು ಹಾಗೂ ಅವರ ಕುಟುಂಬದವರಿಗೆ ಕಮಿಷನರ್ ಅವರು ಸಲಹೆ ನೀಡಿದ್ದಾರೆ. ಠಾಣೆಯನ್ನು ನಿತ್ಯವೂ ಸ್ಯಾನಿಟೈಸ್ ಮಾಡುವಂತೆ ಸೂಚಿಸಿದ್ದಾರೆ. ಕೋವಿಡ್ ಲಕ್ಷಣಗಳು ಕಂಡುಬಂದರೆ, ಪರೀಕ್ಷೆ ಮಾಡಿಸಿ ಚಿಕಿತ್ಸೆ ಪಡೆಯುವಂತೆಯೂ ಹೇಳಿದ್ದಾರೆ' ಎಂದು ವಿವರಿಸಿದರು.

ಜ. 31ರವರೆಗೆ ನಿಷೇಧಾಜ್ಞೆ ಮುಂದುವರಿಕೆ

ಬೆಂಗಳೂರು: ಕೋವಿಡ್ ಹರಡುವಿಕೆ ತಡೆಗಾಗಿ ನಗರದಲ್ಲಿ ಸೆಕ್ಷನ್ 144ರಡಿ ಜಾರಿಗೊಳಿಸಲಾಗಿರುವ ನಿಷೇಧಾಜ್ಞೆಯನ್ನು ಜ. 31ರವರೆಗೆ ವಿಸ್ತರಣೆ ಮಾಡಿ ಪೊಲೀಸ್ ಕಮಿಷನರ್ ಕಮಲ್ ಪಂತ್ ಸೋಮವಾರ ಆದೇಶ ಹೊರಡಿಸಿದ್ದಾರೆ.

'ರಾಜ್ಯ ಸರ್ಕಾರದ ನಿರ್ದೇಶನಗಳ ಅನ್ವಯ ಈ ಆದೇಶ ಹೊರಡಿಸಲಾಗಿದೆ. ಸರ್ಕಾರ ರೂಪಿಸಿರುವ ಎಲ್ಲ ನಿಯಮಗಳನ್ನು ಸಾರ್ವಜನಿಕರು ಕಡ್ಡಾಯವಾಗಿ ಪಾಲಿಸಬೇಕು. ಇಲ್ಲದಿದ್ದರೆ, ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಆದೇಶದಲ್ಲಿ ಎಚ್ಚರಿಸಿದ್ದಾರೆ

'ಐದು ಜನಕ್ಕಿಂತ ಹೆಚ್ಚು ಮಂದಿ ಗುಂಪು ಸೇರಬಾರದು. ರ‍್ಯಾಲಿ, ಧರಣಿ, ಮದುವೆ ಸಮಾರಂಭ ಆಯೋಜನೆಗೂ ನಿಯಮ ಅನ್ವಯವಾಗಲಿದೆ' ಎಂದೂ ತಿಳಿಸಿದ್ದಾರೆ.

ಆರ್‌ಟಿ–ಪಿಸಿಆರ್ ಕಿಟ್ ಬಳಕೆಯ ಮಾಹಿತಿಗೆ ಸೂಚನೆ

ಬೆಂಗಳೂರು: ಕೋವಿಡ್–19 ಪರೀಕ್ಷೆಗೆ ಆರ್‌ಟಿ–ಪಿಸಿಆರ್ ಮತ್ತು ರ‍್ಯಾಪಿಡ್ ಆಂಟಿಜೆನ್ ಕಿಟ್‌ಗಳನ್ನು ಖರೀದಿಸುತ್ತಿರುವ ಗ್ರಾಹಕರ ವಿವರಗಳನ್ನು ಸಂಗ್ರಹಿಸಲು ಔಷಧ ನಿಯಂತ್ರಣ ಇಲಾಖೆ ಮುಂದಾಗಿದೆ.

'ಕಿಟ್‌ಗಳನ್ನು ಗ್ರಾಹಕರೇ ನೇರವಾಗಿ ಖರೀದಿಸಿ ಪರೀಕ್ಷೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಇದರಿಂದ, ಸೋಂಕು ದೃಢವಾಗಿರುವ ಬಗ್ಗೆ ಮಾಹಿತಿ ದೊರೆಯುತ್ತಿಲ್ಲ ಎಂದು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ತಿಳಿಸಿದ್ದಾರೆ. ಹೀಗಾಗಿ, ಗ್ರಾಹಕರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯ ವಿವರಗಳನ್ನು ವಿತರಕರು ಮತ್ತು ಔಷಧ ಅಂಗಡಿ ವ್ಯಾಪಾರಿಗಳಿಂದ ಉಪ ಔಷಧ ನಿಯಂತ್ರಕರು ಪಡೆದು ಸಲ್ಲಿಸಬೇಕು' ಎಂದು ಸುತ್ತೋಲೆ ಹೊರಡಿಸಲಾಗಿದೆ.

'ವಿವರಗಳನ್ನು ಪ್ರತಿ ದಿನ ಸಂಜೆ 6 ಗಂಟೆ ಒಳಗೆ drkempaiahsuresh@gmail.com ಮತ್ತು dckarnataka@gmail.com ಮೇಲ್‌ಗೆ ಕಳುಹಿಸಬೇಕು' ಎಂದು ಔಷಧ ನಿಯಂತ್ರಕರು ಸೂಚಿಸಿದ್ದಾರೆ.

ನಿರ್ಬಂಧದ ನಡುವೆಯೂ ಭೌತಿಕವಾಗಿ ಪರೀಕ್ಷೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಬೆಂಗಳೂರು ನಗರ ಜಿಲ್ಲೆಯಲ್ಲಿ ಜ. 31ರವರೆಗೆ ಭೌತಿಕ ತರಗತಿಗಳಿಗೆ ರಾಜ್ಯ ಸರ್ಕಾರ ನಿರ್ಬಂಧ ವಿಧಿಸಿದೆ. ಆದರೂ ಜ್ಞಾನಭಾರತಿ ಆವರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಪಿಎಚ್‌.ಡಿ ಪದವಿಯ ಪರೀಕ್ಷೆಗಳನ್ನು ಸೋಮವಾರ ನಡೆಸಿದೆ.

50ಕ್ಕೂ ಹೆಚ್ಚು ವಿವಿಧ ಸ್ನಾತಕೋತ್ತರ ವಿಭಾಗಗಳ ಸುಮಾರು 700 ವಿದ್ಯಾರ್ಥಿಗಳು ಭೌತಿಕವಾಗಿ ನಡೆದ ಪರೀಕ್ಷೆಗೆ ಹಾಜರಾದರು.

ಎಸ್‌ಎಸ್‌ಎಲ್‌ಸಿ, ಪದವಿಪೂರ್ವ ತರಗತಿ, ಎಂಜಿನಿಯರಿಂಗ್, ವೈದ್ಯಕೀಯ, ಅರೆವೈದ್ಯಕೀಯ ಕೋರ್ಸ್‌ಗಳನ್ನು ಹೊರತುಪಡಿಸಿ ಉಳಿದ ಎಲ್ಲ ಕೋರ್ಸ್‌ಗಳ ಭೌತಿಕ ತರಗತಿಗೆ ನಿರ್ಬಂಧ ವಿಧಿಸಿ ರಾಜ್ಯ ಸರ್ಕಾರ ಆದೇಶ ಮಾಡಿದೆ.

ಸಾಮಾನ್ಯ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ವಿನಾಯಿತಿ ನೀಡದೇ ಇದ್ದರೂ, ವಿಶ್ವವಿದ್ಯಾಲಯದ ಅಧಿಕಾರಿಗಳು ಪರೀಕ್ಷೆ ನಡೆಸಿದ್ದಾರೆ. ಅಲ್ಲದೆ, ಕೆಲವು ಸೋಂಕಿತ ವಿದ್ಯಾರ್ಥಿಗಳು ಕೂಡಾ ಪರೀಕ್ಷೆಗೆ ಹಾಜರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಸೋಂಕಿತ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಪ್ರತ್ಯೇಕ ವ್ಯವಸ್ಥೆ ಮಾಡಿದ್ದರೂ, ಅವರು ಇತರರ ಸಂಪರ್ಕಕ್ಕೆ ಬಂದಿರುವ ಸಾಧ್ಯತೆ ಇದೆ' ಎಂದು ಪರೀಕ್ಷೆಗೆ ಹಾಜರಾದ ಕೆಲವು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಯೊಬ್ಬರು, 'ಪರೀಕ್ಷೆಗಳನ್ನು ನಡೆಸದಂತೆ ಯಾವುದೇ ನಿರ್ಬಂಧ ವಿಧಿಸಿಲ್ಲ. ಅಲ್ಲದೆ, ಅಂಥ ಯಾವುದೇ ಆದೇಶ ನಮಗೆ ಬಂದಿಲ್ಲ' ಎಂದರು.

'ವರ್ಷದ ಹಿಂದೆಯೇ ಈ ಪರೀಕ್ಷೆ ನಡೆಯಬೇಕಿತ್ತು. ನಾನಾ ಕಾರಣಗಳಿಂದ ವಿಳಂಬವಾಗಿದೆ. ಇನ್ನೂ ವಿಳಂಬವಾದರೆ, ಪಿಎಚ್‌.ಡಿ. ನೋಂದಣಿ ವಿಳಂಬ ಆಗಲಿದೆ. ಅಲ್ಲದೆ, ವಿದ್ಯಾರ್ಥಿಗಳು ಶಿಷ್ಯವೇತನದಿಂದಲೂ ವಂಚಿತರಾಗುವ ಸಾಧ್ಯತೆ ಇದೆ' ಎಂದೂ ಅವರು ಹೇಳಿದರು.

ಪ್ರಥಮ ವರ್ಷದ ಪಿ.ಎಚ್‌ಡಿ ಕೋರ್ಸ್‌ಗೆ ಪರೀಕ್ಷೆ ಇನ್ನೂ ಮೂರು ದಿನ ನಡೆಯಲಿದೆ. ಪರೀಕ್ಷೆಯನ್ನು ರದ್ದುಪಡಿಸುವ ಅಥವಾ ಮುಂದೂಡುವ ಬಗ್ಗೆ ವಿಶ್ವವಿದ್ಯಾಲಯ ಯಾವುದೇ ಪ್ರಕಟಣೆ ಹೊರಡಿಸಿಲ್ಲ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

14,32,754 ಒಟ್ಟು ಸೋಂಕಿತರು (14,16,807 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
1,57,254	12,59,041	16,458

ದಿನದ ಏರಿಕೆ

ಹೊಸ ಪ್ರಕರಣ	15,947
ಗುಣಮುಖ	4,888
ಸಾವು	05

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	32.95 ಕೋಟಿ	3.73 ಕೋಟಿ
ಸಕ್ರಿಯ ಪ್ರಕರಣ	5.57 ಕೋಟಿ	16.56 ಲಕ್ಷ
ಗುಣಮುಖ	26.81 ಕೋಟಿ	3.52 ಕೋಟಿ
ಸಾವು	55.60 ಲಕ್ಷ	4.86 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	19.59 ಲಕ್ಷ	2.58 ಲಕ್ಷ
ಗುಣಮುಖ	10.01 ಲಕ್ಷ	1.51 ಲಕ್ಷ
ಸಾವು	4,036	385

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 2.87 ಲಕ್ಷ ಅಮೆರಿಕ; 2.78 ಲಕ್ಷ ಫ್ರಾನ್ಸ್; 1.49 ಲಕ್ಷ ಇಟಲಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 2.30 ಕೋಟಿ ಅಮೆರಿಕ; 50.25 ಲಕ್ಷ ಫ್ರಾನ್ಸ್; 36.76 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 50,832 ಕೇರಳ; 36,989 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 72.11 ಮಹಾರಾಷ್ಟ್ರ; 53.78 ಕೇರಳ; 29.39 ತಮಿಳುನಾಡು

ಭಾರತದ ಕೋವಿಡ್ ಸಂಖ್ಯೆ ವಿವರ: ಸೋಮವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಪತ್ರಿಕಾ ವಿತರಕರ ಪ್ರತ್ಯೇಕ ಪ್ರಾಧಿಕಾರ ರಚನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಪತ್ರಿಕಾ ವಿತರಿಕರಿಗಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸಬೇಕು' ಎಂದು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಒತ್ತಾಯಿಸಿದೆ.

'ಪತ್ರಿಕಾ ವಿತರಕರು ಸಾವು–ನೋವುಗಳನ್ನು ಲೆಕ್ಕಿಸದೆ, ಎರಡು ವರ್ಷಗಳಿಂದ ಕೋವಿಡ್ ಪರಿಸ್ಥಿತಿಯಲ್ಲೂ ಕೆಲಸ ಮಾಡಿಕೊಂಡು ಬಂದಿದ್ದಾರೆ. ಆದರೆ, ಅವರಿಗೆ ಧೈರ್ಯ ತುಂಬುವ ಹಾಗೂ ಸಂಕಷ್ಟಗಳನ್ನು ಪರಿಹರಿಸುವ ಕೆಲಸವನ್ನು ಸರ್ಕಾರ ಮಾಡಿಲ್ಲ' ಎಂದು ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಬೇಸರ ವ್ಯಕ್ತಪಡಿಸಿದ್ದಾರೆ.

'ಆಂಧ್ರ ಪ್ರದೇಶ, ಕೇರಳ, ತಮಿಳುನಾಡು ಸೇರಿದಂತೆ ಬೇರೆ ರಾಜ್ಯ ಸರ್ಕಾರಗಳು ಅಲ್ಲಿನ ಪತ್ರಿಕಾ ವಿತರಕ ಬೇಡಿಕೆಗಳಿಗೆ ಸ್ಪಂದಿಸಿವೆ. ಸುದ್ದಿಗಳನ್ನು ಮನೆ ಮನೆಗೆ ತಲುಪಿಸುವ ಪತ್ರಿಕಾ ವಿತರಕರು, ತಮ್ಮ ಬೇಡಿಕೆಗಳನ್ನು ರಾಜ್ಯ ಸರ್ಕಾರದ ಮುಂದಿಟ್ಟರೂ ಕಡೆಗಣಿಸುತ್ತಾ ಬಂದಿದೆ. ರಾಜ್ಯದ ವಿತರಕರ ನೆರವಿಗೆ ಪ್ರಾಧಿಕಾರವೊಂದನ್ನು ರಚಿಸಬೇಕು. ಎಲ್ಲ ವರ್ಗಗಳಂತೆ ನಮ್ಮನ್ನೂ ಪರಿಗಣಿಸಿ, ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಟ್ರಯಾಜಿಂಗ್ ಕಟ್ಟುನಿಟ್ಟು; ಬಿಬಿಎಂಪಿ ಸುತ್ತೋಲೆ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಸೋಮವಾರ ನಡೆದ ಬನಶಂಕರಿ ದೇವಿ ರಥೋತ್ಸವ ವೀಕ್ಷಿಸಲು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಹೆಚ್ಚಿನವರು ಮಾಸ್ಕ್ ಧರಿಸಿದ್ದರಾದರೂ ಪರಸ್ಪರ ಅಂತರ ಕಾಯ್ದುಕೊಳ್ಳುವುದನ್ನು ಮರೆತರು –ಪ್ರಜಾವಾಣಿ ಚಿತ್ರ/ಪ್ರಶಾಂತ್‌ಎಚ್‌.ಜಿ.

ಬೆಂಗಳೂರು: ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆ ಮಾಡುವುದಕ್ಕೆ ಮುನ್ನ ಸೋಂಕಿತರ ಆರೋಗ್ಯ ಸ್ಥಿತಿಯನ್ನು ಅವಲೋಕಿಸಲು ಅವರನ್ನು ಕಡ್ಡಾಯವಾಗಿ ಆರೋಗ್ಯ ತಪಾಸಣೆಗೆ (ಟ್ರಯಾಜಿಂಗ್) ಒಳಪಡಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಆರೋಗ್ಯ ಸ್ಥಿತಿ ಸ್ಥಿರವಾಗಿದ್ದವರಿಗೂ ಕೋವಿಡ್ ಆರೈಕೆ ಕೇಂದ್ರಗಳಲ್ಲಿ/ ಆಸ್ಪತ್ರೆಗಳಲ್ಲಿ ಸಾಮಾನ್ಯ ಹಾಸಿಗೆ ಹಂಚಿಕೆ ಮಾಡಿರುವುದು ಕಂಡು ಬಂದಿದೆ. ಹಾಸಿಕೆ ಹಂಚಿಕೆಗಾಗಿ ರಾಜ್ಯ ಸರ್ಕಾರ ರೂಪಿಸಿರುವ ಶಿಷ್ಟಾಚಾರದ ಉಲ್ಲಂಘನೆ ಇದು. ಹಾಗಾಗಿ ಇನ್ನು ಮುಂದೆ ಆಸ್ಪತ್ರೆಗೆ ದಾಖಲಾಗಲು ಬಯಸುವ ಪ್ರತಿಯೊಬ್ಬ ಸೋಂಕಿತರ ಟ್ರಯಾಜಿಂಗ್ ಸಮರ್ಪಕವಾಗಿ ನಡೆಯುವಂತೆ ವಲಯ ಮಟ್ಟದ ಎಲ್ಲ ಆರೋಗ್ಯ ತಂಡಗಳು, ಟ್ರಯಾಜ್ ತಂಡಗಳು, ಆಸ್ಪತ್ರೆಗಳಲ್ಲಿ ಹಾಸಿಕೆ ನಿರ್ವಹಣೆಯ ಕೇಂದ್ರೀಕೃತ ವ್ಯವಸ್ಥೆ (ಸಿಎಚ್‌ಬಿಎಂಎಸ್) ಸಿಬ್ಬಂದಿ, ಕೋವಿಡ್ ವೈದ್ಯರು, ವೈದ್ಯಕೀಯ ಅಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು, ಆರೋಗ್ಯ ಅಧಿಕಾರಿಗಳು, ನಿಯಂತ್ರಣ ಕೊಠಡಿಗಳ ಅಧಿಕಾರಿಗಳು, ವಲಯ ಮಟ್ಟದ ನಿಯಂತ್ರಣ ಕೊಠಡಿಗಳ ಅಧಿಕಾರಿಗಳು, ನೋಡಲ್ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದು ಮುಖ್ಯ ಆಯುಕ್ತರು ಸೂಚಿಸಿದ್ದಾರೆ.

ಈ ತಂಡಗಳ ಯಾವುದೇ ಸದಸ್ಯರು ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದು ಕಂಡುಬಂದರೆ 2005ರ ಪ್ರಕೃತಿ ವಿಕೋಪ ನಿರ್ವಹಣೆ ಕಾಯ್ದೆಯಡಿ ಕಠಿಣ ಕ್ರಮವನ್ನು ಎದುರಿಸಬೇಕಾಗುತ್ತದೆ. ಟ್ರಯಾಜಿಂಗ್ ಸಮರ್ಪಕವಾಗಿ ನಡೆಯುವ ಬಗ್ಗೆ ವಲಯ ಆಯುಕ್ತರು ಹಾಗೂ ವಲಯ ಮಟ್ಟದ ಸಮನ್ವಯಧಿಕಾರಿಗಳು ಆಗಾಗ ಪರಿಶೀಲನೆ ನಡೆಸಬೇಕು. ಯಾವುದೇ ಉಲ್ಲಂಘನೆ ಕಂಡುಬಂದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವನ್ನೂ ಅವರಿಗೆ ನೀಡಲಾಗಿದೆ ಎಂದು ಮುಖ್ಯ ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಭಾರತದಲ್ಲಿ ಹೂಡಿಕೆಗೆ ಸೂಕ್ತ ಸಮಯ: ಪ್ರಧಾನಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾಗತಿಕ ಉದ್ದಿಮೆಗಳಿಗೆ ಭಾರತದಲ್ಲಿ ಹೂಡಿಕೆ ಮಾಡಲು ಇದು ಸೂಕ್ತ ಸಮಯ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದರು. ಸಾಂಕ್ರಾಮಿಕದ ಅವಧಿಯಲ್ಲಿ ದೇಶವು ಸುಧಾರಣೆಗಳನ್ನು ಜಾರಿಗೊಳಿಸಿದೆ, ನವೋದ್ಯಮಗಳನ್ನು ದೊಡ್ಡ ಸಂಖ್ಯೆಯಲ್ಲಿ ಆಕರ್ಷಿಸಿದೆ ಎಂದು ಹೇಳಿದರು.

'ಇದು ಭಾರತದಲ್ಲಿ ಹೂಡಿಕೆ ಮಾಡಲು ಅತ್ಯುತ್ತಮ ಸಂದರ್ಭ. ಭಾರತೀಯರಲ್ಲಿ ಇರುವ ಉದ್ಯಮಶೀಲತೆ ಮತ್ತು ಹೊಸ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುವ ಸಾಮರ್ಥ್ಯವು ನಮ್ಮ ಜಾಗತಿಕ ಪಾಲುದಾರರಿಗೆ ಹೊಸ ಶಕ್ತಿಯನ್ನು ನೀಡಬಲ್ಲದು' ಎಂದು ಅವರು ವಿಶ್ವ ಆರ್ಥಿಕ ವೇದಿಕೆಯನ್ನು ಉದ್ದೇಶಿಸಿ, ವರ್ಚುವಲ್ ಆಗಿ ಮಾಡಿದ ಭಾಷಣದಲ್ಲಿ ಹೇಳಿದರು.

ಸರಿಸುಮಾರು ಆರು ಲಕ್ಷ ಹಳ್ಳಿಗಳಿಗೆ ಆಪ್ಟಿಕಲ್ ಫೈಬರ್ ಕೇಬಲ್ ಮೂಲಕ ಸಂಪರ್ಕ ಕಲ್ಪಿಸಲು ₹ 96 ಲಕ್ಷ ಕೋಟಿ ಹೂಡಿಕೆ ಮಾಡಲು ದೇಶ ಯೋಜನೆ ರೂಪಿಸಿದೆ ಎಂದರು.



ಪ್ರಧಾನಿ ಮೋದಿ

'2014ರಲ್ಲಿ ದೇಶದಲ್ಲಿ ನೋಂದಾಯಿತ ನವೋದ್ಯಮಗಳ ಸಂಖ್ಯೆಯು ಕಡಿಮೆ ಇತ್ತು. ಈಗ ಇಂಥವುಗಳ ಸಂಖ್ಯೆಯು 60 ಸಾವಿರವನ್ನು ದಾಟಿದೆ. ಕಳೆದ ಆರು ತಿಂಗಳುಗಳಲ್ಲಿ 10 ಸಾವಿರಕ್ಕೂ ಹೆಚ್ಚಿನ ನವೋದ್ಯಮಗಳ ನೋಂದಣಿ ಆಗಿದೆ. ದೇಶದಲ್ಲಿ ಇಂದು 50 ಲಕ್ಷಕ್ಕಿಂತ ಹೆಚ್ಚು ಜನ ಸಾಫ್ಟ್‌ವೇರ್ ಡೆವಲಪರ್‌ಗಳು ಕೆಲಸ ಮಾಡುತ್ತಿದ್ದಾರೆ' ಎಂದರು.

'ಇಂದು ಭಾರತವು ವಿಶ್ವದ ಅತ್ಯಂತ ದೊಡ್ಡ, ಸುರಕ್ಷಿತವಾದ ಹಾಗೂ ಯಶಸ್ಸು ಕಂಡಿರುವ ಡಿಜಿಟಲ್ ಪಾವತಿ ವೇದಿಕೆಯನ್ನು ಹೊಂದಿದೆ' ಎಂದು ಯುಪಿಐ ಪಾವತಿ ವ್ಯವಸ್ಥೆ ಬಗ್ಗೆ ಹೇಳಿದರು.

ನಾಳೆಯಿಂದ ರಾಗಿ ಸಮ್ಮೇಳನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ (ಐಸಿಎಆರ್) ಹಾಗೂ ಭಾರತೀಯ ಕಿರುಧಾನ್ಯಗಳ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ 'ಅಂತರರಾಷ್ಟ್ರೀಯ ರಾಗಿ ಸಮ್ಮೇಳನ'ವನ್ನು ಜನವರಿ 19ರಿಂದ 22ರವರೆಗೆ ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಹಮ್ಮಿಕೊಂಡಿದೆ.

ಇದೇ 19ರಂದು ಬೆಳಿಗ್ಗೆ 11 ಗಂಟೆಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ರೇಷ್ಮೆ ಸಚಿವ ಕೆ.ಸಿ.ನಾರಾಯಣ ಗೌಡ, ಕೃಷಿ ಸಚಿವ ಬಿ.ಸಿ.ಪಾಟೀಲ, ಐಸಿಎಆರ್ ಮಹಾನಿರ್ದೇಶಕ ತ್ರಿಲೋಚನ್ ಮೋಹಪಾತ್ರ ಭಾಗವಹಿಸಲಿದ್ದು, ಶಾಸಕ ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆ ವಹಿಸಲಿದ್ದಾರೆ. 22ರಂದು ನಡೆಯಲಿರುವ ಸಮಾರೋಪದಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಶಾಸಕ ಕೃಷ್ಣ ಬೈರೇಗೌಡ ಭಾಗವಹಿಸಲಿದ್ದಾರೆ ಎಂದು ಕೃಷಿ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

'ನೀರಿ' ಶಿಫಾರಸು: ವಿವರ ಸಲ್ಲಿಸಲು ನಿರ್ದೇಶನ

ಬೆಂಗಳೂರು: 'ವೃಷಭಾವತಿ ನದಿ ಪುನಃಶ್ಚೇತನಕ್ಕೆ ಅನುಸರಿಸಬಹುದಾದ ಅಲ್ಪಾವಧಿ ಕ್ರಮಗಳ ಬಗ್ಗೆ ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ (ನೀರಿ) ಮಾಡಿರುವ ಶಿಫಾರಸುಗಳ ಜಾರಿ ವಿಚಾರದಲ್ಲಿ ಏನೆಲ್ಲಾ ಪ್ರಗತಿ ಆಗಿದೆ ಎಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿ' ಎಂದು ನಿರ್ದೇಶನ ನೀಡಿರುವ ಹೈಕೋರ್ಟ್, ಇದಕ್ಕೆ ಬಿಬಿಎಂಪಿಗೆ ಎರಡು ವಾರಗಳ ಕಾಲಾವಕಾಶ ನೀಡಿದೆ.

'ಮಲಿನಗೊಂಡಿರುವ ವೃಷಭಾವತಿ ನದಿ ಸಂರಕ್ಷಣೆಗೆ ಕ್ರಮ ಕೈಗೊಳ್ಳಲು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ನಗರದ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್, 'ನೀರಿ ಶಿಫಾರಸು ಮಾಡಿರುವ ಅಲ್ಪಾವಧಿ ಹಾಗೂ ದೀರ್ಘಾವಧಿ ಕ್ರಮಗಳನ್ನು ಜಾರಿಗೆ ತರಲು ಜೂ.21ರಂದು ಸಭೆ ನಡೆಸಿ, ಅಲ್ಪಾವಧಿ ಶಿಫಾರಸುಗಳನ್ನು ತುರ್ತಾಗಿ ಜಾರಿಗೆ ತರಲು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗಿದೆ. ಈ ಕುರಿತು ಏನೆಲ್ಲ ಪ್ರಗತಿಯಾಗಿದೆ ಎಂಬ ಬಗ್ಗೆ ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಹಾಗೂ ಜಲಮಂಡಳಿ ಪ್ರಮಾಣಪತ್ರ ಸಲ್ಲಿಸಬೇಕು ಎಂದು 2021ರ ಜುಲೈ 19ರಂದು ನ್ಯಾಯಾಲಯ ಆದೇಶಿಸಿತ್ತು. ಪಾಲಿಕೆ ಹೊರತುಪಡಿಸಿ ಉಳಿದೆಲ್ಲ ಪ್ರಾಧಿಕಾರಗಳೂ ಪ್ರಮಾಣಪತ್ರ ಸಲ್ಲಿಸಿವೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಪರ ವಕೀಲರು, ಪ್ರಮಾಣಪತ್ರ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ಬೇಕು ಎಂದು ಕೋರಿದರು. ಇದನ್ನು ಮನ್ನಿಸಿದ ನ್ಯಾಯಪೀಠ, ವಿಚಾರಣೆಯನ್ನು ಫೆಬ್ರುವರಿ 3ಕ್ಕೆ ಮುಂದೂಡಿದೆ.

ಕೇರಳದ ಕೇಂದ್ರೀಯ ವಿ.ವಿಯಲ್ಲಿ ಕನ್ನಡಕ್ಕೆ ಕುತ್ತು: ಸಿ.ಎಂಗೆ ಪತ್ರ

ಬೆಂಗಳೂರು: ಕೇರಳದ ಕಾಸರಗೋಡಿನಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವನ್ನು ಮುಚ್ಚುವ ಪರಿಸ್ಥಿತಿ ಎದುರಾಗಿದ್ದು, ತಕ್ಷಣ ಮಧ್ಯಪ್ರವೇಶಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಅವರಿಗೆ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಪತ್ರ ಬರೆದಿದ್ದಾರೆ.


ಬರಗೂರು ರಾಮಚಂದ್ರಪ್ಪ

ಈ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ 2018ರಲ್ಲಿ ಕನ್ನಡ ವಿಭಾಗವನ್ನು ಆರಂಭಿಸಲಾಗಿದೆ. ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಲು ಕೇಂದ್ರೀಯ ವಿಶ್ವವಿದ್ಯಾಲಯಗಳ ಕೇಂದ್ರೀಕೃತ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ. ಕನ್ನಡ ವಿಭಾಗಕ್ಕೆ ಕಾಸರಗೋಡಿನ ವಿಶ್ವವಿದ್ಯಾಲಯದಲ್ಲಿಯೇ ಪ್ರವೇಶ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಅವಕಾಶ ನೀಡಲಾಗುತ್ತಿದೆ.

ಅದರಂತೆ ಮೊದಲ ವರ್ಷ 11, ಎರಡನೇ ವರ್ಷ 18 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಆದರೆ, ಈ ವರ್ಷ ಪ್ರವೇಶ ಪಡೆಯಲು ಆಸಕ್ತರಾದ ವಿದ್ಯಾರ್ಥಿಗಳ ಒಪ್ಪಿಗೆ ಪತ್ರ ತರಲು ಮೌಖಿಕವಾಗಿ ಕುಲಪತಿ ಸೂಚಿಸಿದ್ದಾರೆ. ಆ ಪ್ರಕಾರ, ಕನ್ನಡ ಅಧ್ಯಾಪಕರು 21 ವಿದ್ಯಾರ್ಥಿಗಳ ಒಪ್ಪಿಗೆ ಪತ್ರ ತಂದಿದ್ದಾರೆ. ಆದರೆ, ಪ್ರವೇಶ ನೀಡಲು ಕುಲಪತಿ ನಿರಾಕರಿಸುತ್ತಿದ್ದಾರೆ. ಇದರಿಂದಾಗಿ ಕನ್ನಡ ವಿಭಾಗ ಮುಚ್ಚುವ ಪರಿಸ್ಥಿತಿ ಬಂದಿದೆ ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಈ ವಿದ್ಯಮಾನಗಳನ್ನು ಗಮನಿಸಿದಾಗ, ಈ ವಿಶ್ವವಿದ್ಯಾಲಯದ ಕನ್ನಡವಿಭಾಗವನ್ನೇ ಮುಚ್ಚುವ ಹುನ್ನಾರ ಕಂಡುಬರುತ್ತಿದೆ. ಕನ್ನಡ ವಿಭಾಗಕ್ಕೆ ಏಳು ಜನ ಕಾಯಂ ಅಧ್ಯಾಪಕರನ್ನು ನೇಮಿಸಿಕೊಳ್ಳಲು ಪ್ರಕಟಣೆ ಹೊರಡಿಸಿದ್ದರೂ, ಕನ್ನಡ ವಿಭಾಗಕ್ಕೆ ವಿದ್ಯಾರ್ಥಿಗಳಿಲ್ಲ ಎಂಬ ಕಾರಣ ನೀಡಿ ಈ ಹುದ್ದೆಗಳನ್ನು ಬೇರೆ ವಿಭಾಗಕ್ಕೆ ವರ್ಗಾಯಿಸುವ ಹುನ್ನಾರ ನಡೆಯುತ್ತಿದೆ ಎಂಬ ದೂರಿದೆ. ವಿದ್ಯಾರ್ಥಿಗಳಿಂದ ಒಪ್ಪಿಗೆ ಪತ್ರ ತಂದ ಬಳಿಕವೂ ಪ್ರವೇಶ ನಿರಾಕರಿಸುತ್ತಿರುವುದು ಕನ್ನಡ ವಿಭಾಗಕ್ಕೆ ಕುತ್ತು ತರುವ ಕ್ರಮವಾಗಿದೆ. ಇದು ಭಾಷಾ ಅಲ್ಪಸಂಖ್ಯಾತರಿಗೆ ಸಂವಿಧಾನ ನೀಡಿರುವ ಶೈಕ್ಷಣಿಕ ಹಕ್ಕುಗಳ ಉಲ್ಲಂಘನೆಯೂ ಆಗಿದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.ಹೀಗಾಗಿ, ಈ ವಿಷಯದಲ್ಲಿ ತಕ್ಷಣ ಮಧ್ಯಪ್ರವೇಶಿಸಿ, ಅಲ್ಲಿನ ಕುಲಪತಿ ಮತ್ತು ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರ ಜೊತೆ ಮಾತನಾಡಿ, ಕನ್ನಡ ವಿಭಾಗಕ್ಕೆ ಸೇರಲು ಬಯಸುವ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು ಎಂದರು.



ರಸ್ತೆಗೆ ಅಡ್ಡಲಾಗಿ ತೋಡಿರುವ ಗುಂಡಿಯಲ್ಲಿ ತ್ಯಾಜ್ಯ ನೀರು ಸಂಗ್ರಹವಾಗಿರುವುದು

ಅಗೆದು ಬಿಟ್ಟ ರಸ್ತೆಯಲ್ಲಿ ಕೊಳಚೆ ನೀರು: ಬಿಬಿಎಂಪಿ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವೃದ್ಧಿ ನೆಪದಲ್ಲಿ ಮುಖ್ಯರಸ್ತೆಗೆ ಅಡ್ಡಲಾಗಿ ಗುಂಡಿ ತೋಡಿ ತಿಂಗಳಾದರೂ ಅದನ್ನು ಮುಚ್ಚದೆ ಹಾಗೇ ಬಿಡಲಾಗಿದೆ. ಅದರೊಳಗೆ ಒಳಚರಂಡಿ ನೀರು ಸಂಗ್ರಹವಾಗಿ ದುರ್ನಾತ ಬೀರುತ್ತಿದೆ' ಎಂದು ಜಾನಕೀರಾಮ್ ಬಡಾವಣೆಯ ನಿವಾಸಿಗಳು ದೂರಿದ್ದಾರೆ. ಈ ಕುರಿತು ಬಿಬಿಎಂಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮಳೆ ಹಾನಿಯ ಸಮೀಕ್ಷೆಗೆಂದು ಹೋದ ವರ್ಷದ ಡಿಸೆಂಬರ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಡಾವಣೆಗೆ ಭೇಟಿ ನೀಡಿದ್ದರು. ಆಗ ಮಳೆನೀರು ಸರಾಗವಾಗಿ ಹರಿದುಹೋಗಲು ಅನುವಾಗುವಂತೆ ರಸ್ತೆಗೆ ಅಡ್ಡಲಾಗಿ ಒಳಚರಂಡಿ ನಿರ್ಮಿಸಲು ನಿರ್ಧರಿಸಲಾಗಿತ್ತು. ಅದಕ್ಕಾಗಿ ರಸ್ತೆ ಅಗೆದಿದ್ದರು. ಸುಮಾರು ಒಂದು ತಿಂಗಳಾದರೂ ಚರಂಡಿ ಕೆಲಸ ಮುಗಿದಿಲ್ಲ. ಅಧಿಕಾರಿಗಳೂ ಅತ್ತ ತಿರುಗಿ ನೋಡುತ್ತಿಲ್ಲ. ಗುಂಡಿಯಲ್ಲಿ ತ್ಯಾಜ್ಯ ನೀರು ಸಂಗ್ರಹವಾಗಿ ದುರ್ನಾತ ಹೊರಹೊಮ್ಮುತ್ತಿದೆ. ಅದರಿಂದ ಸಮೀಪದ ಮನೆಯವರು ಸಂಕಟ ಪಡುವಂತಾಗಿದೆ. ಸಾಂಕ್ರಾಮಿಕ ರೋಗ ಹರಡುವ ಭೀತಿಯೂ ಎದುರಾಗಿದೆ' ಎಂದು ಆರೋಪಿಸಿದ್ದಾರೆ.

'ಬಡಾವಣೆಯಲ್ಲಿ 500ಕ್ಕೂ ಅಧಿಕ ಮನೆಗಳಿವೆ. ಹೆಣ್ಣೂರಿನಿಂದ ಹೋಗುವವರು ಬಡಾವಣೆ ಪ್ರವೇಶಿಸಲು ಈ ರಸ್ತೆಯನ್ನೇ ಅವಲಂಬಿಸಬೇಕಿತ್ತು. ಈಗ ದಾರಿಯೇ ಇಲ್ಲದಂತಾಗಿದೆ. ಜನ ಪರ್ಯಾಯ ಮಾರ್ಗದ ಮೊರೆಹೋಗಿದ್ದು, ಕಚ್ಚಾ ರಸ್ತೆಯಲ್ಲಿ 3 ಕಿ.ಮೀ. ಸುತ್ತಿ ಬರುವುದು ಅನಿವಾರ್ಯವಾಗಿದೆ. ಪರ್ಯಾಯ ಮಾರ್ಗದಲ್ಲಿ ಸಾಗುವಾಗ ರಾತ್ರಿ ದುಷ್ಕರ್ಮಿಗಳು ದಾಳಿ ಮಾಡುವ ಅಪಾಯ ಎದುರಾಗಿದೆ' ಎಂದು ಸ್ಥಳೀಯರಾದ ಜೇಕಬ್ ಆತಂಕ ವ್ಯಕ್ತಪಡಿಸಿದರು.

'ಬಡಾವಣೆಯಲ್ಲಿ ಯಾರಾದರೂ ಅನಾರೋಗ್ಯಕ್ಕೆ ಒಳಗಾದರೆ ಅವರನ್ನು ಕರೆದೊಯ್ಯಲು ಆಂಬುಲೆನ್ಸ್ ಬರಲೂ ದಾರಿ ಇಲ್ಲದಂತಾಗಿದೆ. ಶಾಲಾ ಮಕ್ಕಳು ಓಡಾಡುವುದೂ ಕಷ್ಟವಾಗಿದೆ. ಪಾದಚಾರಿಗಳಿಗಾಗಿ ರಸ್ತೆಯ ಒಂದು ಬದಿಯಲ್ಲಿ ಮರದ ಹಲಗೆಗಳನ್ನು ಹಾಕಲಾಗಿದೆ. ಅದರ ಮೇಲೆ ಓಡಾಡುವಾಗ ಮಕ್ಕಳು ಹಾಗೂ ವೃದ್ಧರು ಆಯತಪ್ಪಿ ಬಿದ್ದ ಉದಾಹರಣೆಗಳು ಇವೆ' ಎಂದು ದೂರಿದರು.


'ಸಮಸ್ಯೆ ಪರಿಹರಿಸುವಂತೆ ಸಚಿವ ಬೈರತಿ ಬಸವರಾಜು ಅವರಿಗೆ ಹಲವು ಬಾರಿ ಮನವಿ ಮಾಡಿದ್ದೇವೆ. ಹೀಗಿದ್ದರೂ ಪ್ರಯೋಜನವಾಗಿಲ್ಲ. ಅಧಿಕಾರಿಗಳು, ಜನಪ್ರತಿನಿಧಿಗಳು ಈಗಲಾದರೂ ಎಚ್ಚೆತ್ತುಕೊಂಡು ರಸ್ತೆ ಸರಿಪಡಿಸಲು ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಜಾನಕೀರಾಮ್ ಬಡಾವಣೆ ಇರುವ ಹೊರಮಾವು ವಾರ್ಡ್‌ನ ಸಹಾಯಕ ಎಂಜಿನಿಯರ್ ಈ ಕುರಿತು ಪ್ರತಿಕ್ರಿಯೆಗೆ ಸಿಗಲಿಲ್ಲ.

'ಮೇಕೆದಾಟು ಪಾದಯಾತ್ರೆ ಲಾಭ ತಮಿಳುನಾಡಿಗೆ'

ಬೆಂಗಳೂರು: ಕಾಂಗ್ರೆಸ್ ನಡೆಸಿದ ಮೇಕೆದಾಟು ಪಾದಯಾತ್ರೆಯಿಂದ ತಮಿಳುನಾಡಿಗೆ ಅನುಕೂಲವಾಗುವ ಸಾಧ್ಯತೆಯೇ ಹೆಚ್ಚು ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ವಿಧಾನಸೌಧದಲ್ಲಿ ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ದೇಶದಲ್ಲಿ ಪಾದಯಾತ್ರೆ ಅಥವಾ ಹೋರಾಟದಿಂದ ಯಾವುದೇ ನೀರಾವರಿ ಯೋಜನೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ' ಎಂದರು.

ಈ ಹಿಂದೆ ಎಸ್.ಎಂ.ಕೃಷ್ಣ ಅವರು ಕಾವೇರಿ ನೀರಿಗಾಗಿ ಪಾದಯಾತ್ರೆ ಮಾಡಿದರು. ಆದರೆ, ನ್ಯಾಯಾಲಯ ಛೀಮಾರಿ ಹಾಕಿತು. ಇಂತಹ ಹೋರಾಟಗಳ ಮೂಲಕ ನ್ಯಾಯಾಲಯದ ಮೇಲೆ ಪ್ರಭಾವ ಬೀರಲು ಅಥವಾ ಒತ್ತಡ ಹಾಕಲು ಸಾಧ್ಯವಿಲ್ಲ. ಮೇಕೆದಾಟಿನ ವಿಚಾರದಲ್ಲೂ ಎಷ್ಟು ಹೋರಾಟ ಮಾಡುತ್ತಾರೋ ಅಷ್ಟರಮಟ್ಟಿಗೆ ತಮಿಳುನಾಡಿಗೆ ಅನುಕೂಲವಾಗುತ್ತದೆ. ಮೇಕೆದಾಟು ನೀರಿನಿಂದ ಕೃಷಿ ಮತ್ತು ಕುಡಿಯುವ ಉದ್ದೇಶಕ್ಕೆ ಬಳಸುತ್ತೇವೆ ಎಂದೂ ಹೇಳಿದ್ದಾರೆ. ಈ ಎಲ್ಲ ಮಾತುಗಳೂ ಕೂಡ ರೆಕಾರ್ಡ್ ಆಗಿವೆ. ತಮಿಳುನಾಡು ಇದನ್ನೇ ಅಸ್ತ್ರ ಮಾಡಿಕೊಂಡು ನ್ಯಾಯಾಲಯದಲ್ಲಿ ಬಳಸುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.



ಟೆಸ್ಟ್ ನಾಯಕತ್ವದಿಂದ ಕೊಹ್ಲಿ ಕೆಳಗಿಳಿದಿದ್ದಾರೆ!

ಅಮೃತ್ ಮಹಲ್ ಕಾವಲ್ ಒತ್ತುವರಿ ಪ್ರಧಾನ ಕಾರ್ಯದರ್ಶಿ ಖುದ್ದು ಹಾಜರಿಗೆ ಆದೇಶ

ಬೆಂಗಳೂರು: 'ಸೂಕ್ತ ನಿರ್ದೇಶನ ನೀಡಿದ್ದರೂ ಅಮೃತ್ ಮಹಲ್ ಕಾವಲ್ ಜಮೀನು ಒತ್ತುವರಿ ತೆರವಿಗೆ ನೀವು ಸೂಕ್ತ ಕ್ರಮ ಕೈಗೊಂಡಿಲ್ಲ. ಹಾಗಾಗಿ ಫೆಬ್ರುವರಿ 8ರಂದು ವಿಚಾರಣೆಗೆ ಖುದ್ದು ಹಾಜರಾಗಿ ವಿವರಣೆ ನೀಡಿ' ಎಂದು ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ಪಶುಸಂಗೋಪನಾ ಇಲಾಖೆಯ ಅಮೃತ ಕಾವಲ್ ಜಾನುವಾರು ಕೇಂದ್ರದ ಉಪ ನಿರ್ದೇಶಕರಿಗೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ 'ವೈಲ್ಡ್ ಲೈಫ್ ಕನ್ಸರ್ವೇಷನ್ ಆ್ಯಕ್ಷನ್ ಟೀಂ' ಪ್ರತಿನಿಧಿ ಶ್ರೀದೇವ್ ಹುಲಿಕೆರೆ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ನ್ಯಾಯಾಲಯದ ಆದೇಶಕ್ಕೆ ತದ್ವಿರುದ್ಧವಾಗಿ ಪ್ರಮಾಣಪತ್ರ ಸಲ್ಲಿಸಿದ್ದೀರಿ' ಎಂದು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದೆ.

'ಚಿಕ್ಕಮಗಳೂರು ಜಿಲ್ಲೆಯ ಸಂರಕ್ಷಿತ ಅರಣ್ಯ ಪ್ರದೇಶ ಮತ್ತು ಅಮೃತ ಕಾವಲ್ ಜಮೀನು ಒತ್ತುವರಿಯಾಗಿರುವ ಬಗ್ಗೆ ಪರಿಶೀಲನೆ ನಡೆಸಿ ತೆರವು ಕಾರ್ಯಚರಣೆ ಕೈಗೊಳ್ಳಬೇಕು. ಒತ್ತುವರಿ ತೆರವಿಗೆ ವಿಶೇಷ ಕಾರ್ಯಪಡೆ ರಚನೆ ಮಾಡಲಾಗಿದೆ ಎಂಬ ಬಗ್ಗೆ ವಿವರಣೆ ನೀಡಿ ಪ್ರಮಾಣಪತ್ರ ಸಲ್ಲಿಸಬೇಕು' ಎಂದು ಹೈಕೋರ್ಟ್, ಅರಣ್ಯ ಇಲಾಖೆ ಪ್ರಧಾನ ಕಾಯದರ್ಶಿಗೆ 2018ರ ಡಿಸೆಂಬರ್ 2ರಂದು ನಿರ್ದೇಶಿಸಿತ್ತು.

'ಚಿಕ್ಕಮಗಳೂರಿನ ಸಂರಕ್ಷಿತ ಮೀಸಲು ಅರಣ್ಯ ಪ್ರದೇಶ ಮತ್ತು ಅಮೃತ ಮಹಲ್ ಕಾವಲ್ ಜಮೀನು ಒತ್ತುವರಿ ತೆರವುಗೊಳಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂಬುದು ಅರ್ಜಿದಾರರ ಕೋರಿಕೆ.


ಅಂಬಿಗರ ಸಮಾಜದ ಮುಖಂಡರು ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು

'ಅಂಬಿಗರ ಚೌಡಯ್ಯನವರ ವಚನ ಸಾಹಿತ್ಯ ಭಾಷಾಂತರವಾಗಲಿ'

ಬೆಂಗಳೂರು: 'ಅಂಬಿಗರ ಚೌಡಯ್ಯನವರ ವಚನ ಸಾಹಿತ್ಯವು ಭಾಷಾಂತರವಾಗಬೇಕು. ಆಗ ಮಾತ್ರ ಇತರ ಭಾಷಿಕರಿಗೂ ಅವರ ಸಾಹಿತ್ಯ ತಲುಪಿಸಲು ಸಾಧ್ಯ' ಎಂದು ಉದ್ಯಮಿ ಯೋಗೇಶ್ ಅಭಿಪ್ರಾಯಪಟ್ಟರು.

ಹಾವೇರಿ ಜಿಲ್ಲೆ ಚೌಡದಾನಪುರದಲ್ಲಿ ನಡೆದ ಅಂಬಿಗರ ಚೌಡಯ್ಯನವರ ಜಾತ್ರಾ ಮಹೋತ್ಸವ ಹಾಗೂ ವಿವಿಧ ಕಾರ್ಯಕ್ರಮಗಳಲ್ಲಿ ಮಾತನಾಡಿದರು.

'ಚೌಡಯ್ಯನವರ ವಚನ ಸಾಹಿತ್ಯವನ್ನು ದೇಶದ ಎಲ್ಲ ಜನಾಂಗದವರೂ ಅಧ್ಯಯನ ಮಾಡುವಂತಾಗಬೇಕು. ಅವರ ಸಾಹಿತ್ಯವು ಪದವಿ ತರಗತಿಯ ಪಠ್ಯವಾಗಬೇಕು. ಈ ಬಗ್ಗೆ ಉನ್ನತ ಶಿಕ್ಷಣ ಸಚಿವರ ಜೊತೆ ಚರ್ಚಿಸಬೇಕು. ಅಂಬಿಗರ ಚೌಡಯ್ಯ ಜಯಂತ್ಯೋತ್ಸವವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಬೇಕು' ಎಂದರು. ಅಂಬಿಗರ ಚೌಡಯ್ಯ ಗುರು ಪೀಠದ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮುಖಂಡರಾದ ಬಸವರಾಜ್, ವೆಂಕಟೇಶ್ ಇದ್ದರು.

'ನಾರಾಯಣ ಗುರು ಸ್ತಬ್ಧಚಿತ್ರಕ್ಕೆ ಅನುಮತಿ ಕೊಡಿ'

ಪ್ರಜಾವಾಣಿ ವಾರ್ತೆ

ಕಾರವಾರ: 'ಕೇಂದ್ರ ಸರ್ಕಾರವು ಈ ಬಾರಿಯ ಗಣರಾಜ್ಯೋತ್ಸವಕ್ಕೆ ನಾರಾಯಣ ಗುರು ಅವರ ಸ್ತಬ್ಧಚಿತ್ರವನ್ನು ತಿರಸ್ಕರಿಸಿದೆ. ಇದರಿಂದ ಆರ್ಯ ಈಡಿಗ ಸಮುದಾಯಕ್ಕೆ ಅನ್ಯಾಯವಾಗಿದೆ. ಈ ಬಗ್ಗೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರನ್ನು 2–3 ದಿನಗಳಲ್ಲಿ ಭೇಟಿ ಮಾಡಲು ಪ್ರಯತ್ನಿಸಲಾಗುವುದು' ಎಂದು ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳಿಯ ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗಣರಾಜ್ಯೋತ್ಸವದಲ್ಲಿ ನಾರಾಯಣ ಗುರು ಮತ್ತು ಜಟಾಯುವಿನ ಸ್ತಬ್ಧಚಿತ್ರವನ್ನು ಸಿದ್ಧಪಡಿಸುವುದಾಗಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿತ್ತು. ಆದರೆ, ರಕ್ಷಣಾ ಇಲಾಖೆಯು ಅದನ್ನು ತಿರಸ್ಕರಿಸಿ ಆದಿಶಂಕರರ ಸ್ತಬ್ಧಚಿತ್ರ ಸಿದ್ಧಪಡಿಸಬೇಕು. ಅದು ಆಗದಿದ್ದರೆ ಅರ್ಜಿಯನ್ನೇ ಹಿಂಪಡೆಯಿರಿ ಎಂದು ಸೂಚಿಸಿದೆ. ಕೇಂದ್ರ ಸರ್ಕಾರವು ಜಾತಿಗಳ ನಡುವೆ ಜಗಳ ತಂದಿಟ್ಟಿದೆ. ನಮಗೆ ಆದಿಶಂಕರರ ಬಗ್ಗೆ ಬಹಳ ಗೌರವವಿದೆ. ಅವರು ಅದ್ವೈತ ವಾದಿಯಾಗಿದ್ದರು. ಆದರೆ, ನಾರಾಯಣ ಗುರುಗಳು ಆ ತತ್ವದಲ್ಲೇ ಜೀವಿಸಿದರು' ಎಂದರು. 'ಕೇಂದ್ರ ಸರ್ಕಾರದ ಅನ್ಯಾಯವನ್ನು ಸಹಿಸಲಾಗುವುದಿಲ್ಲ. ಈ ಬಾರಿಯ ಗಣರಾಜ್ಯೋತ್ಸವದಲ್ಲಿ ನಾರಾಯಣ ಗುರುಗಳ ಸ್ತಬ್ಧಚಿತ್ರ ಇರಲೇಬೇಕು' ಎಂದು ಆಗ್ರಹಿಸಿದರು.

'ಅನುದಾನ ಮಂಜೂರು ಮಾಡಿ'

'ದೇಶದಲ್ಲಿ ಶೇ 23ರಷ್ಟಿರುವ ಆರ್ಯ ಈಡಿಗ ಸಮುದಾಯವನ್ನು ಸಮುದಾಯವನ್ನು ಬೇರೆ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಈ ಸಮುದಾಯದ ಅಭಿವೃದ್ಧಿಗೆ ನಿಗಮ, ಮಂಡಳಿಯನ್ನು ಸರ್ಕಾರ ಘೋಷಿಸಿಲ್ಲ. ಹಿಂದುಳಿದ ಈ ಸಮುದಾಯಕ್ಕಾಗಿ ₹ 500 ಕೋಟಿ ಬಿಡುಗಡೆ ಮಾಡಬೇಕು. ಸಮುದಾಯದ ಮೂಲ ವೃತ್ತಿಯಾದ ಸೇಂದಿ ಇಳಿಸಲು ಅನುಮತಿ ನೀಡಬೇಕು. ರಾಯಚೂರು, ಕಲಬುರಗಿ ಭಾಗದಲ್ಲಿ ಇದಕ್ಕೆ ಅವಕಾಶವಿದೆ. ಈ ಬೇಡಿಕೆಗಳನ್ನು ಈಡೇರಿಸದಿದ್ದರೆ 2023ರ ಚುನಾವಣೆಯಲ್ಲಿ ಸರ್ಕಾರಕ್ಕೆ ಉತ್ತರಿಸಲಿದ್ದೇವೆ' ಎಂದು ಪ್ರಣವಾನಂದ ಸ್ವಾಮೀಜಿ ಹೇಳಿದರು.

ಕಥಕ್ ನೃತ್ಯ ದಿಗ್ಗಜ ಪಂಡಿತ್ ಬಿರ್ಜು ಮಹಾರಾಜ್ ನಿಧನ

ಒಂದನೇ ಪುಟದಿಂದ

ತೀವ್ರ ಮಧುಮೇಹದಿಂದ ಬಳಲುತ್ತಿದ್ದ ಅವರಿಗೆ ಮೂತ್ರಕೋಶದ ತೊಂದರೆ ಇತ್ತು. ಕಳೆದ ಒಂದು ತಿಂಗಳಿಂದ ಡಯಾಲಿಸಿಸ್ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಹೃದಯ ಸ್ತಂಭನದಿಂದ ಮೃತಪಟ್ಟಿದ್ದಾರೆ ಎಂದು ಅವರ ಮೊಮ್ಮಗಳು ರಾಗಿಣಿ ಮಹಾರಾಜ್ ತಿಳಿಸಿದ್ದಾರೆ.

ಕುಟುಂಬದವರು ಮತ್ತು ಶಿಷ್ಯರು ಭಾನುವಾರ ರಾತ್ರಿ ಊಟದ ಬಳಿಕ ಅಂತ್ಯಾಕ್ಷರಿ ಆಡುತ್ತಿದ್ದರು. ಈ ವೇಳೆ ಬಿರ್ಜು ಮಹಾರಾಜ್ ಅವರ ಆರೋಗ್ಯ ದಿಢೀರ್ ಕ್ಷೀಣಿಸಿತು. ಉಸಿರಾಟದ ಸಮಸ್ಯೆ ಕಂಡಬಂತು. ತಕ್ಷಣ ಆಸ್ಪತ್ರೆಗೆ ಕರೆದೊಯ್ದರೂ ಅವರನ್ನು ಉಳಿಸಿಕೊಳ್ಳಲು ಆಗಲಿಲ್ಲ ಎಂದು ಅವರು ಹೇಳಿದ್ದಾರೆ.

ನೃತ್ಯಪಟು ನಿಧನಕ್ಕೆ ಸಂಗೀತ, ನೃತ್ಯ ಕ್ಷೇತ್ರದ ಹಲವಾರು ದಿಗ್ಗಜರು ಸೇರಿದಂತೆ ವಿವಿಧ ರಂಗಗಳ ಗಣ್ಯರು ಕಂಬನಿ ಮಿಡಿದಿದ್ದಾರೆ.

ನಿಧನ ವಾರ್ತೆ

ಬಿ.ಎಸ್.ಅನಂತನಾರಾಯಣ


ಅನಂತನಾರಾಯಣ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಜಾಹೀರಾತು ವಿಭಾಗದ ನಿವೃತ್ತ ನೌಕರ ಬಿ.ಎಸ್. ಅನಂತನಾರಾಯಣ (94) ಅವರು ಭಾನುವಾರ (ಜ. 16) ರಾತ್ರಿ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಭೂಮಿ ಬಿಟ್ಟುಕೊಡಲು ರೈತರ ಹಿಂದೇಟು • ಜಾಗ ಲಭ್ಯ ಇರುವಲ್ಲಿ ಕಾಮಗಾರಿ ಪೂರ್ಣಗೊಳಿಸುತ್ತಿರುವ ಬಿಡಿಎ • ಎನ್‌ಪಿಕೆಎಲ್ ಪ್ರಮುಖ ರಸ್ತೆ

ಭೂಸ್ವಾಧೀನ ಬಿಕ್ಕಟ್ಟು ಪಕ್ಕಕ್ಕಿಟ್ಟು ಡಾಂಬರೀಕರಣ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದ ನೈರುತ್ಯ ದಿಕ್ಕಿನ ಹೊರವಲಯದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯು ರಾಜಧಾನಿಯ ವಸತಿ ಕೊರತೆಯನ್ನು ನೀಗಿಸುವುದರ ಜೊತೆಗೆ ಈ ಪ್ರದೇಶದ ಬೆಳವಣಿಗೆಗೆ ತಳಹದಿಯಾಗಬೇಕು ಎಂಬುದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಶಯ. ಇಲ್ಲಿನ ವಾಣಿಜ್ಯ ಅಭಿವೃದ್ಧಿಗೆ ಹೊಸ ದಿಸೆ ತೋರಿಸುವ ಸಲುವಾಗಿಯೇ 100 ಮೀ ಅಗಲದ ಪ್ರಮುಖ ರಸ್ತೆಯು (ಎಂಎಆರ್) ಈ ಬಡಾವಣೆಯ ಮೂಲಕ ಹಾದುಹೋಗುವಂತೆ ಯೋಜನೆ ರೂಪಿಸಲಾಗಿದೆ.

ಈ ಬಡಾವಣೆಯ ಇತರ ಕಾಮಗಾರಿಗಳಂತೆಯೇ ಈ ಪ್ರಮುಖ ರಸ್ತೆಯ ನಿರ್ಮಾಣ ಕಾರ್ಯವೂ ಐದು ವರ್ಷಗಳಿಂದ ಕುಂಟುತ್ತಾ ಸಾಗಿತ್ತು. ಪ್ರಮುಖ ರಸ್ತೆ ಕಾಮಗಾರಿಯ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲದಿರುವುದು ಕೂಡ ಇದಕ್ಕೆ ಕಾರಣವಾಗಿತ್ತು. ಈ ರಸ್ತೆಗೆ ಜಾಗ ಬಿಟ್ಟುಕೊಡಲು ರೈತರು ಮೀನಮೇಷ ಎಣಿಸುತ್ತಿದ್ದರು. ಭೂಸ್ವಾಧೀನ ಬಿಕ್ಕಟ್ಟನ್ನು ಪಕ್ಕಕ್ಕಿಟ್ಟ ಬಿಡಿಎ ಸಾಧ್ಯವಿರುವ ಕಡೆಯಲ್ಲೆಲ್ಲ ರಸ್ತೆ ಅಭಿವೃದ್ಧಿ ಕಾರ್ಯವನ್ನು ಇತ್ತೀಚೆಗೆ ಚುರುಕುಗೊಳಿಸಿದೆ. ಕೆಲವೆಡೆ ಡಾಂಬರೀಕರಣವನ್ನೂ ಪೂರ್ಣಗೊಳಿಸಿದೆ. ಸೀಗೆಹಳ್ಳಿ– ಮಾಚೋಹಳ್ಳಿ ರಸ್ತೆಗೆ ಸಮಾನಾಂತರವಾಗಿ ಸಾಗುವ ಪ್ರಮುಖ ರಸ್ತೆಯಲ್ಲಿ ಸುಮಾರು 2 ಕಿ.ಮೀಗಳಷ್ಟು ಡಾಂಬರೀಕರಣ (ಬ್ಲಾಕ್–1 ಎಚ್ ಸೆಕ್ಟರ್‌ನಲ್ಲಿ) ನಡೆದಿದೆ.


ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ನಡುವೆ ಪ್ರಮುಖ ರಸ್ತೆ ನಿರ್ಮಾಣಕ್ಕೆ ಒಟ್ಟು 321 ಎಕರೆ 10 ಗುಂಟೆ ಭೂಸ್ವಾಧೀನ ನಡೆಸಲು ಬಿಡಿಎ ಅಂತಿಮ ಅಧಿಸೂಚನೆ ಹೊರಡಿಸಿತ್ತು. ಇದರಲ್ಲಿ 252 ಎಕರೆ 35 ಗುಂಟೆಯನ್ನು ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಈ ಕಾಮಗಾರಿಗೆ ಜಾಗ ಬಿಟ್ಟುಕೊಡಬೇಕಾದ ಕೆಲವು ಭೂಮಾಲೀಕರು, ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಹಾಗಾಗಿ 145 ಎಕರೆ 6 ಗುಂಟೆ ಜಾಗದಲ್ಲಿ ಮಾತ್ರ ರಸ್ತೆ ಕಾಮಗಾರಿ ನಡೆದಿದೆ. 176 ಎಕರೆ 4 ಗುಂಟೆಗಳಷ್ಟು ಜಾಗದಲ್ಲಿ ಕಾಮಗಾರಿ ಬಾಕಿ ಇದೆ.

‘ಪೂರ್ತಿ ಭೂಸ್ವಾಧೀನ ಮುಗಿಯುವವರೆಗೆ ಕಾದರೆ ಕಾಮಗಾರಿಯಲ್ಲಿ ಪ್ರಗತಿ ಸಾಧಿಸಲಾಗದು. ಹಾಗಾಗಿ, ಜಾಗ ಲಭ್ಯ ಇರುವ ಕಡೆಗಳಲ್ಲೆಲ್ಲ ಕಾಮಗಾರಿಯನ್ನು ತ್ವರಿತವಾಗಿ ನಡೆಸಿದ್ದೇವೆ. ಕೆಲವು ಕಡೆ ಡಾಂಬರೀಕರಣವೂ ಪ್ರಗತಿಯಲ್ಲಿದೆ. ಜೊತೆಗೆ ರೈತರ ಮನವೊಲಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಪ್ರಯತ್ನವೂ ಸಾಗಿದೆ’ ಎಂದು ಬಿಡಿಎ ಆಯುಕ್ತ ಎಂ.ಬಿ.ರಾಜೇಶ ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು. ‘10 ಕಿ.ಮೀ ಉದ್ದದ ರಸ್ತೆ ಇದು. ಸುಮಾರು 2.5 ಕಿ.ಮೀ.ಗಳಷ್ಟು ರಸ್ತೆ ನಿರ್ಮಾಣಕ್ಕೆ ಅಲ್ಲಲ್ಲಿ ಭೂಸ್ವಾಧೀನ ಸಮಸ್ಯೆ ಇದೆ. ಇನ್ನುಳಿದ 7.5 ಕಿ.ಮೀ ಉದ್ದದ ರಸ್ತೆ ನಿರ್ಮಾಣಕ್ಕೆ ಅಂತಹ ಅಡ್ಡಿಗಳೇನಿಲ್ಲ. ಅಲ್ಲೆಲ್ಲ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಂಡಿದ್ದೇವೆ’ ಎಂದು ಅವರು ತಿಳಿಸಿದರು.

‘ಟ್ರಕ್ ಟರ್ಮಿನಲ್‌ಗೆ ಮೀಸಲಿಟ್ಟ ಜಾಗ ರೈತರಿಗೆ ಕೊಡಿ’

‘ಹೊರ ವರ್ತುಲ ರಸ್ತೆ (ಪಿಆರ್‌ಆರ್) ಪಕ್ಕ ಟ್ರಕ್ ಟರ್ಮಿನಲ್ ನಿರ್ಮಿಸಲು ಕರ್ನಾಟಕ ಕೈಗಾರಿಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಸೂಲಿಕೆರೆ ಗ್ರಾಮದಲ್ಲಿ ಭೂಸ್ವಾಧೀನ ನಡೆಸಿತ್ತು. ನೈಸ್ ರಸ್ತೆ ನಿರ್ಮಾಣವಾಗಿರುವುದರಿಂದ ಈ ಟ್ರಕ್ ಟರ್ಮಿನಲ್ ನಿರ್ಮಿಸುವ ಅವಶ್ಯಕತೆ ಇಲ್ಲ. ರೈತರಿಗೆ ಅಭಿವೃದ್ಧಿ ಪಡಿಸಿದ ನಿವೇಶನ ನೀಡಲು ಈ ಜಾಗವನ್ನು ಬಳಸಬಹುದು ಎಂದು ಕೋರಿದ್ದೆವು. ಇದಕ್ಕೆ ಬಿಡಿಎ ಸ್ಪಂದಿಸಿಲ್ಲ’ ಎಂದು ಎನ್‌ಪಿಕೆ ಬಡಾವಣೆಯ ರೈತ ನಿವೇಶನದಾರರ ಸಂಘದ ಅಧ್ಯಕ್ಷ ಚನ್ನಪ್ಪ ತಿಳಿಸಿದರು.

‘ಮಾಗಡಿ ರಸ್ತೆ ಬಳಿ ಪ್ರಮುಖ ರಸ್ತೆಗೆ 16 ಎಕರೆಗಳಷ್ಟು ಜಾಗ ಬೇಕಿದೆ. ಕೆಲವು ಮಾರ್ಬಲ್ ವ್ಯಾಪಾರಿಗಳು ಭೂಸ್ವಾಧೀನ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಅವರಿಗೆ ಬದಲಿ ಜಾಗದ ವ್ಯವಸ್ಥೆ ಮಾಡಿ, ವಿವಾದವನ್ನು ಇತ್ಯರ್ಥಪಡಿಸಿಕೊಳ್ಳಬಹುದು’ ಎಂದು ದೂರಿದರು.



ನಾಡಪ್ರಭು ಕೆಂಪೇಗೌಡ ಬಡಾವಣೆಯ ಪ್ರಮುಖ ರಸ್ತೆಯ ಡಾಂಬರೀಕರಣ ಕಾಮಗಾರಿ

ಭೂಸ್ವಾಧೀನ ಬಿಕ್ಕಟ್ಟು ಏಕೆ?

ಪ್ರಮುಖ ರಸ್ತೆಗೆ ಜಾಗ ಬಿಟ್ಟುಕೊಡುವ ರೈತರಿಗೆ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲು ಬಿಡಿಎ ಆಡಳಿತ ಮಂಡಳಿ ಒಪ್ಪಿದೆ. 1 ಎಕರೆ ಜಾಗ ಬಿಟ್ಟುಕೊಡುವ ರೈತರಿಗೆ ಸುಮಾರು 11,500 ಚದರ ಅಡಿಗಳಷ್ಟು ವಿಸ್ತೀರ್ಣದ ನಿವೇಶನ ಸಿಗಲಿದೆ. ಆದರೆ, ಪ್ರಮುಖ ರಸ್ತೆಯ ಅಕ್ಕಪಕ್ಕದ ನಿವೇಶನಗಳನ್ನೇ ತಮಗೆ ನೀಡಬೇಕು ಎಂಬುದು ರೈತರ ಒತ್ತಾಯ.

‘ಈ ಪ್ರಮುಖ ರಸ್ತೆ ಹಾದು ಹೋಗುವ ಅಕ್ಕಪಕ್ಕದ ನಿವೇಶನಗಳನ್ನು ಪ್ರಭಾವಿ ವ್ಯಕ್ತಿಗಳಿಗೆ ಈಗಾಗಲೇ ಹಂಚಿಕೆ ಮಾಡಲಾಗಿದೆ. ಜಮೀನು ಬಿಟ್ಟುಕೊಟ್ಟವರಿಗೆ ಹಳ್ಳ–ಕೊಳ್ಳದ ಜಾಗದಲ್ಲಿ ನಿವೇಶನ ನೀಡಿದರೆ ಒಪ್ಪಲಾದೀತೇ’ ಎನ್ನುವುದು ರೈತರ ಪ್ರಶ್ನೆ.


‘ರಸ್ತೆ ನಿರ್ಮಾಣವಾಗಬೇಕಾಗಿರುವ ಜಾಗದಲ್ಲಿ ಕೆಲವು ಕಡೆ ತೆಂಗು, ಅಡಿಕೆ ಮರಗಳಿದ್ದು, ಅವುಗಳಿಗೆ ಪ್ರತ್ಯೇಕ ಪರಿಹಾರ ನೀಡಬೇಕು ಎಂಬುದು ರೈತರ ಒತ್ತಾಯ. ಬಿಟ್ಟು ಕೊಟ್ಟವರಿಗೆ ಅಭಿವೃದ್ಧಿಪಡಿಸಿದ ನಿವೇಶನ ನೀಡುತ್ತಿರುವ ಕಾರಣ ಮರಗಳಿಗೆ ಪ್ರತ್ಯೇಕ ಪರಿಹಾರ ನೀಡಲಾಗದು ಎಂಬುದು ಬಿಡಿಎ ವಾದ. ಇದನ್ನು ಪ್ರಶ್ನಿಸಿ ಕೆಲವು ರೈತರು ನ್ಯಾಯಾಲಯದ ಮೊರೆ ಹೋಗಿರುವುದು ನಿಜ. ಮಾತುಕತೆ ಮೂಲಕ ಈ ಬಿಕ್ಕಟ್ಟು ಬಗೆಹರಿಸಬಹುದು. ಆದರೆ, ಆ ಇಚ್ಛಾಶಕ್ತಿ ಪ್ರಾಧಿಕಾರಕ್ಕೆ ಇಲ್ಲ’ ಎಂದು ಚನ್ನಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬುಲೇವಾರ್ಡ್ ಕೈಬಿಡದಿರಿ’

‘ಪ್ರಮುಖ ರಸ್ತೆಯ ಇಕ್ಕೆಲಗಳಲ್ಲಿ 27.5 ಮೀ ಅಗಲದ ಬುಲೇವಾರ್ಡ್ ನಿರ್ಮಿಸಲು ಬಿಡಿಎ ಉದ್ದೇಶಿಸಿತ್ತು. ಅದನ್ನು ಕೈಬಿಟ್ಟು ಅಲ್ಲಿ ನಿವೇಶನ ನಿರ್ಮಿಸುವ ಪ್ರಸ್ತಾವವನ್ನು ಬಿಡಿಎ ಸರ್ಕಾರಕ್ಕೆ ಇತ್ತೀಚೆಗೆ ಸಲ್ಲಿಸಿದೆ. ಯಾವುದೇ ಕಾರಣಕ್ಕೂ ಬುಲೇವಾರ್ಡ್ ನಿರ್ಮಾಣ ಕೈಬಿಡಬಾರದು’ ಎಂಬುದು ಈ ಬಡಾವಣೆಯ ನಿವೇಶನದಾರರ ಒತ್ತಾಯ.

‘ಈ ಬಡಾವಣೆಯ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡೇ ಸರ್ಕಾರ ಇಲ್ಲಿ ಬುಲೇವಾರ್ಡ್ ಹಾಗೂ ಸರ್ವಿಸ್ ರಸ್ತೆಗಳನ್ನು ಒಳಗೊಂಡ 100 ಮೀ ಅಗಲದ ರಸ್ತೆಯನ್ನು ನಿರ್ಮಿಸಲು ತೀರ್ಮಾನಿಸಿತ್ತು. ಈಗ ಅದರಲ್ಲಿ ಬುಲೇವಾರ್ಡ್ ನಿರ್ಮಿಸುವುದನ್ನು ಕೈಬಿಡುವ ಬಗ್ಗೆ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ. ಯಾವುದೇ ಕಾರಣಕ್ಕೂ ಸರ್ಕಾರ ಮೂಲ ಯೋಜನೆಯಲ್ಲಿ ಮಾರ್ಪಾಡು ಮಾಡಬಾರದು. ಯೋಜನೆ ಪ್ರಕಾರವೇ ರಸ್ತೆ ನಿರ್ಮಿಸಿದ್ದೇ ಆದರೆ ಬಿಡಿಎಗೂ ಭವಿಷ್ಯದಲ್ಲಿ ಪ್ರಯೋಜನವಾಗಲಿದೆ ಹಾಗೂ ಒಳ್ಳೆಯ ಹೆಸರೂ ಬರಲಿದೆ’ ಎಂದು ಎನ್‌ಪಿಕೆಲ್ ನಿವೇಶನದಾರರ ಮುಕ್ತ ವೇದಿಕೆಯ ಅಧ್ಯಕ್ಷ ಎನ್.ಶ್ರೀಧರ್ ಅಭಿಪ್ರಾಯಪಟ್ಟರು.

100 ಮೀ ಅಗಲದ ಪ್ರಮುಖ ರಸ್ತೆಯ ಅಡ್ಡ ನೋಟ




3 ದೊಡ್ಡ ಸೇತುವೆಗಳು ಈ ಪ್ರಮುಖ ರಸ್ತೆಯಲ್ಲಿ ನಿರ್ಮಾಣವಾಗಲಿವೆ

8 ಮೋರಿಗಳನ್ನು ಈ ಪ್ರಮುಖ ರಸ್ತೆಯಲ್ಲಿ ನಿರ್ಮಿಸಲಾಗುತ್ತದೆ

5 ವೃತ್ತಾಕಾರದ ಜಂಕ್ಷನ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ

10.77 ಕಿ.ಮೀ	₹ **465** ಕೋಟಿ	**6**	**10** ಮೀ	**3** ಮೀ	**7** ಮೀ	**2** ಮೀ	**2** ಮೀ
ಎನ್‌ಪಿಕೆ ಬಡಾವಣೆ ಮೂಲಕ ಹಾದುಹೋಗುವ ಪ್ರಮುಖ ರಸ್ತೆಯ ಉದ್ದ	ಪ್ರಮುಖ ರಸ್ತೆ ನಿರ್ಮಾಣ ಯೋಜನೆಯ ಅಂದಾಜು ವೆಚ್ಚ	ಪ್ರಮುಖ ರಸ್ತೆಯಲ್ಲಿ ನಿರ್ಮಾಣಗೊಳ್ಳಲಿರುವ ಪಥಗಳು	ಮುಖ್ಯ ಮಾರ್ಗದ ಅಗಲ	ಮಧ್ಯದ ವಿಭಜಕದ ಅಗಲ	ಇಕ್ಕೆಲಗಳಲ್ಲಿ ನಿರ್ಮಾಣವಾಗಲಿರುವ ಸರ್ವಿಸ್ ರಸ್ತೆಗಳ ಅಗಲ	ಸೈಕಲ್ ಪಥದ ಅಗಲ	ಪಾದಚಾರಿ ಮಾರ್ಗದ ಅಗಲ

‘ಬಡಾವಣೆಯ ಕಿರೀಟದ ಗರಿ ಈ ಪ್ರಮುಖ ರಸ್ತೆ’



100 ಮೀ ಅಗಲದ ಪ್ರಮುಖ ರಸ್ತೆಯು ನಾಡಪ್ರಭು ಕೆಂಪೇಗೌಡ ಬಡಾವಣೆಯ ಕಿರೀಟದ ಗರಿ ಇದ್ದಂತೆ. ಪ್ರಮುಖ ರಸ್ತೆಯಲ್ಲಿ ಕೆಲವೆಡೆ ಡಾಂಬರೀಕರಣವನ್ನು ಕೈಗೆತ್ತಿಕೊಂಡಿರುವುದು ಉತ್ತಮ ಬೆಳವಣಿಗೆ. ಭೂಮಾಲೀಕರ ಜೊತೆ ಮಾತುಕತೆ ನಡೆಸಿ ಭೂಸ್ವಾಧೀನ ಬಿಕ್ಕಟ್ಟು ಬಗೆಹರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಇಷ್ಟು ಮಾಡಿಯೂ ಅದರ ಪ್ರಯೋಜನ ಸಿಗದು

ಎನ್.ಶ್ರೀಧರ್, ಎನ್‌ಪಿಕೆಎಲ್ ಮುಕ್ತ ವೇದಿಕೆ ಅಧ್ಯಕ್ಷ

‘ರಸ್ತೆಗೆ ಅನುದಾನ ಹೊಂದಿಸುವುದೂ ಮುಖ್ಯ’



ಪ್ರಮುಖ ರಸ್ತೆಯ ಇಕ್ಕೆಲಗಳಲ್ಲಿ ಬುಲೇವಾರ್ಡ್‌ಗಳನ್ನು ನಿರ್ಮಿಸುವ ಅಂಶ ಮೂಲ ಯೋಜನೆಯಲ್ಲಿ ಇರುವುದು ನಿಜ. ಆದರೆ, ಈ ರಸ್ತೆ ಕಾಮಗಾರಿಗೆ ತಗಲುವ ವೆಚ್ಚವನ್ನು ಯಾವ ಮೂಲದಿಂದ ಭರಿಸಬೇಕು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಹಾಗಾಗಿ, ಬುಲೇವಾರ್ಡ್ ನಿರ್ಮಾಣಕ್ಕೆ ಬಳಸುವ ಜಾಗದಲ್ಲಿ ವಾಣಿಜ್ಯ ನಿವೇಶನಗಳನ್ನು ನಿರ್ಮಿಸಿ ಅದರಿಂದ ಹಣಕಾಸು ಹೊಂದಿಕೆ ಮಾಡುವ ಪ್ರಸ್ತಾವ ಬಿಡಿಎ ಮುಂದೆ ಇರುವುದು ನಿಜ. ಆದರೆ, ಇದಕ್ಕೆ ಇನ್ನೂ ಸರ್ಕಾರದಿಂದ ಅನುಮೋದನೆ ಸಿಕ್ಕಿಲ್ಲ. ಸರ್ಕಾರ ಯಾವ ತೀರ್ಮಾನ ಕೈಗೊಳ್ಳುತ್ತದೆಯೋ ಅದಕ್ಕೆ ಬಿಡಿಎ ಬದ್ಧವಾಗಿರಲಿದೆ’

ಎಂ.ಬಿ.ರಾಜೇಶ ಗೌಡ, ಬಿಡಿಎ ಆಯುಕ್ತ

‘ಬುಲೇವಾರ್ಡ್ ಕೈಬಿಟ್ಟರೆ ದೂರಗಾಮಿ ಪರಿಣಾಮ’



ನಗರದಲ್ಲಿ ಮೊದಲೇ ಹಸಿರು ಪಟ್ಟಿ ಕಡಿಮೆ ಆಗುತ್ತಿದೆ. ಕೆಂಪೇಗೌಡ ಬಡಾವಣೆಯಲ್ಲಿ ಎಲ್ಲೂ ದೊಡ್ಡ ಉದ್ಯಾನಗಳಿಲ್ಲ. ಬುಲೇವಾರ್ಡ್‌ಗಳನ್ನೂ ಕೈಬಿಟ್ಟರೆ ಅದರಿಂದ ದೂರಗಾಮಿ ಪರಿಣಾಮಗಳನ್ನು ಇಲ್ಲಿನ ನಿವಾಸಿಗಳು ಎದುರಿಸಬೇಕಾಗುತ್ತದೆ

ಎ.ಎಸ್.ಸೂರ್ಯಕಿರಣ್, ಎನ್‌ಪಿಕೆಎಲ್ ಮುಕ್ತ ವೇದಿಕೆ





‘ತಾಕತ್ತಿದ್ದರೆ ಬಂಧಿಸಿ’ ಎಂದಿದ್ದವನಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಮಾರಾಟ ಹಾಗೂ ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ರೌಡಿ ರಾಹುಲ್ ಅಲಿಯಾಸ್ ಸ್ಟಾರ್‌ನನ್ನು ಕಾಲಿಗೆ ಗುಂಡು ಹಾರಿಸಿ ಸೋಮವಾರ ಸೆರೆ ಹಿಡಿಯಲಾಗಿದೆ.

‘ರೌಡಿ ಕುಳ್ಳ ರಿಜ್ವಾನ್ ಸಹಚರನಾಗಿದ್ದ ರಾಹುಲ್ ವಿರುದ್ಧ 20 ಪ್ರಕರಣಗಳು ದಾಖಲಾಗಿದ್ದವು. ನ್ಯಾಯಾಲಯದ 8 ವಾರಂಟ್‌ಗಳು ಸಹ ಬಾಕಿ ಇದ್ದವು. ಬಂಧಿಸಲು ಹೋಗಿದ್ದ ಪೊಲೀಸರ ಮೇಲೆ ಆತ ಹಲ್ಲೆ ಮಾಡಿದ್ದ. ಹನುಮಂತನಗರ ಠಾಣೆ ಪಿಎಸ್‌ಐ ಬಸವರಾಜ್ ಪಾಟೀಲ ಆತ್ಮರಕ್ಷಣೆಗಾಗಿ ಆತನ ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಹೇಳಿದರು.



ರೌಡಿ ರಾಹುಲ್

‘ಗುಂಡೇಟು ತಿಂದಿರುವ ರೌಡಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆತನ ಹಲ್ಲೆಯಿಂದ ಗಾಯಗೊಂಡಿರುವ ಹೆಡ್ ಕಾನ್‌ಸ್ಟೆಬಲ್ ನಿಂಗಪ್ಪ ಅವರೂ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ತಿಳಿಸಿದರು.

ವಿಡಿಯೊ ಹರಿಬಿಟ್ಟಿದ್ದ: ‘ಡ್ರಗ್ಸ್ ಮಾರಾಟ ಸಂಬಂಧ ರೌಡಿ ರಾಹುಲ್ ಹಾಗೂ ಇತರ ವಿರುದ್ಧ ಕೆಂಪೇಗೌಡನಗರ ಠಾಣೆಯಲ್ಲಿ ಇತ್ತೀಚೆಗಷ್ಟೇ ಎಫ್‌ಐಆರ್ ದಾಖಲಾಗಿತ್ತು. ಕೃತ್ಯದ ಬಳಿಕ ತಲೆಮರೆಸಿಕೊಂಡಿದ್ದ ರೌಡಿ ಹಾಗೂ ಆತನ ಸಹಚರರು, ತೆರೆಮರೆಯಲ್ಲಿ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಕ್ಷಿಣ ವಿಭಾಗದ ಪೊಲೀಸರ ವಿಶೇಷ ತಂಡ ರಚಿಸಲಾಗಿತ್ತು’ ಎಂದೂ ಹರೀಶ್ ಪಾಂಡೆ ಹೇಳಿದರು.

ಅಪರಾಧ ಸುದ್ದಿ

‘ನನ್ನನ್ನು ಬಂಧಿಸಲು ಯಾರಿಗೂ ಆಗುವುದಿಲ್ಲ. ಪೊಲೀಸರಿಗೆ ತಾಕತ್ತಿದ್ದರೆ ನನ್ನ ಬಳಿ ಬಂದು ಬಂಧಿಸಲಿ’ ಎಂಬುದಾಗಿ ರೌಡಿ ರಾಹುಲ್ ವಿಡಿಯೊವೊಂದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದ. ಅದನ್ನು ಗಮನಿಸಿದ್ದ ಪೊಲೀಸರು, ಆತನಿಗಾಗಿ ತೀವ್ರ ಶೋಧ ನಡೆಸಿದ್ದರು.’ ‘ಕೋಣನಕುಂಟೆ ಠಾಣೆ ವ್ಯಾಪ್ತಿಯ ನಾರಾಯಣನಗರ ಬಳಿಯ ನಿರ್ಜನ ಪ್ರದೇಶದಲ್ಲಿ ಶನಿವಾರ ರಾಹುಲ್ ಕಾಣಿಸಿಕೊಂಡಿದ್ದ. ಪಿಎಸ್‌ಐ ಬಸವರಾಜ್ ನೇತೃತ್ವದ ತಂಡ ಸ್ಥಳಕ್ಕೆ ಹೋಗಿತ್ತು. ಪೊಲೀಸರನ್ನು ನೋಡಿದ್ದ ರೌಡಿ, ಅವರ ಮೇಲೆ ಹಲ್ಲೆಗೆ ಮುಂದಾಗಿದ್ದ. ನಿಂಗಪ್ಪ ಅವರಿಗೆ ಲಾಂಗ್‌ನಿಂದ ಹೊಡೆದಿದ್ದ’ ಎಂದೂ ಡಿಸಿಪಿ ತಿಳಿಸಿದರು.

‘ರಕ್ಷಣೆಗೆ ಹೋದ ಪಿಎಸ್‌ಐ, ಒಂದು ಸುತ್ತಿನ ಗುಂಡು ಹಾರಿಸಿ ಎಚ್ಚರಿಕೆ ನೀಡಿದ್ದರು. ಅದಕ್ಕೆ ಬಗ್ಗದ ರೌಡಿ, ಪಿಎಸ್‌ಐ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದ. ಅದೇ ವೇಳೆ ಪಿಎಸ್‌ಐ, ಆತನ ಬಲಗಾಲಿಗೆ ಗುಂಡು ಹೊಡೆದಿದ್ದಾರೆ’ ಎಂದೂ ವಿವರಿಸಿದರು.

4 ಕೊಲೆ ಪ್ರಕರಣದಲ್ಲಿ ಭಾಗಿ: ‘ರಾಹುಲ್, ರೌಡಿ ಕುಳ್ಳ ರಿಜ್ವಾನ್ ಜೊತೆ 4 ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ. ಡ್ರಗ್ಸ್ ಮಾರಾಟ ಹಾಗೂ ಜೂಜಾಟದಲ್ಲೂ ತೊಡಗಿಸಿಕೊಂಡಿದ್ದ. ಆತನ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ, ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದರು.

ಪತ್ನಿ ಕಳುಹಿಸದಿದ್ದಕ್ಕೆ ಸಂಬಂಧಿಗೆ ಇರಿತ

ಬೆಂಗಳೂರು: ಪತ್ನಿಯನ್ನು ತನ್ನ ಜೊತೆ ಕಳುಹಿಸುತ್ತಿಲ್ಲವೆಂಬ ಕಾರಣಕ್ಕೆ, ಅವರ ಅಕ್ಕನ ಗಂಡನಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಆರೋಪದಡಿ ಸುನೀಲ್ ಎಂಬಾತನನ್ನು ಬೈಯಪ್ಪನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಬಂಡೆನಗರದಲ್ಲಿ ವಾಸವಿರುವ ಸುನೀಲ್, ಜ. 14ರಂದು ರಾತ್ರಿ ಕೃತ್ಯ ಎಸಗಿದ್ದ. ಚಾಕು ಇರಿತದಿಂದ ಗಾಯಗೊಂಡಿರುವ ರಿಷಿಕುಮಾರ್ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಹದಗೆಟ್ಟಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಘಟನೆ ಬಗ್ಗೆ, ಆರೋಪಿ ಸುನೀಲ್‌ನ ಪತ್ನಿ ಸುಸ್ಮಿತಾ ಅವರ ಅಕ್ಕ ಜ್ಯೋತಿಕಾ ದೂರು ನೀಡಿದ್ದಾರೆ. ಹಲ್ಲೆ ಹಾಗೂ ಕೊಲೆ ಯತ್ನ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ಸುನೀಲ್‌ನನ್ನು ಬಂಧಿಸಲಾಗಿದೆ’ ಎಂದು ತಿಳಿಸಿವೆ.

‘ಸುನೀಲ್ ಹಾಗೂ ಸುಸ್ಮಿತಾ ನಡುವೆ ಕೌಟುಂಬಿಕ ಜಗಳವಿತ್ತು. ಪತಿಯಿಂದ ಬೇಸತ್ತಿದ್ದ ಅವರು, ಜ್ಯೋತಿಕಾ ಮನೆಯಲ್ಲಿ ಉಳಿದುಕೊಂಡಿದ್ದರು. ಪತ್ನಿಯನ್ನು ಕಳುಹಿಸುವಂತೆ ಆರೋಪಿ ಜಗಳ ಮಾಡಲಾರಂಭಿಸಿದ್ದ.’

‘ಕೋಪಗೊಂಡಿದ್ದ ಸುನೀಲ್, ಸಹಚರ ಕುಳ್ಳ ಬಾಬು ಜೊತೆ ಸೇರಿ ಜ. 14ರಂದು ರಾತ್ರಿ ಮನೆ ಬಳಿ ಗಲಾಟೆ ಮಾಡಿದ್ದ. ಅದನ್ನು ಪ್ರಶ್ನಿಸಿದ್ದ ರಿಷಿಕುಮಾರ್ ಹೊಟ್ಟೆಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ತೀವ್ರ ಗಾಯಗೊಂಡಿದ್ದ ರಿಷಿಕುಮಾರ್ ಅವರನ್ನು ಸಂಬಂಧಿಕರು ಆಸ್ಪತ್ರೆಗೆ ದಾಖಲಿಸಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಡ್ರಗ್ಸ್ ಖರೀದಿಗಾಗಿ ವರದಕ್ಷಿಣೆಗೆ ಬೇಡಿಕೆ; ಪತಿ ವಿರುದ್ಧ ಎಫ್‌ಐಆರ್

ಬೆಂಗಳೂರು: ‘ಡ್ರಗ್ಸ್ ಖರೀದಿಗಾಗಿ ವರದಕ್ಷಿಣೆ ತರುವಂತೆ ಪೀಡಿಸುತ್ತಿರುವ ಮಾದಕವ್ಯಸನಿ ಪತಿ, ನನ್ನ ಅಶ್ಲೀಲ ವಿಡಿಯೊ ಹಾಗೂ ಫೋಟೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ’ ಎಂದು ಆರೋಪಿಸಿ ಮಹಿಳೆಯೊಬ್ಬರು ವಯ್ಯಾಲಿಕಾವಲ್ ಠಾಣೆಗೆ ದೂರು ನೀಡಿದ್ದಾರೆ.

‘ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ 24 ವರ್ಷದ ಮಹಿಳೆಯೊಬ್ಬರು ದೂರು ನೀಡಿದ್ದಾರೆ. ಅದರನ್ವಯ 27 ವರ್ಷದ ಪತಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಪತಿ ಚಿಕ್ಕಮಗಳೂರಿನವ. 2021ರಲ್ಲಿ ಆತನನ್ನು ಮಹಿಳೆ ಮದುವೆಯಾಗಿದ್ದರು. ಪತಿ, ಮದ್ಯ ಹಾಗೂ ಮಾದಕ ವ್ಯಸನಿ ಎಂಬುದು ಪತ್ನಿಗೆ ಗೊತ್ತಾಗಿತ್ತು. ಅದನ್ನು ಪ್ರಶ್ನಿಸುತ್ತಿದ್ದಂತೆ ಜಗಳ ವಿಕೋಪಕ್ಕೆ ಹೋಗಿತ್ತು. ‘ನನಗೆ ನಿತ್ಯವೂ ಡ್ರಗ್ಸ್ ಬೇಕು. ಅದಕ್ಕೆ ತವರುಮನೆಯಿಂದ ಮತ್ತಷ್ಟು ವರದಕ್ಷಿಣೆ ತೆಗೆದುಕೊಂಡು ಬಾ’ ಎಂದು ಪತಿ ಪೀಡಿಸಲಾರಂಭಿಸಿದ್ದ ಎನ್ನಲಾಗಿದೆ.’

‘ಪತ್ನಿಯ ಅಶ್ಲೀಲ ವಿಡಿಯೊ ಹಾಗೂ ಫೋಟೊ ಕ್ಲಿಕ್ಕಿಸಿಟ್ಟುಕೊಂಡಿದ್ದ ಆರೋಪಿ, ಅದನ್ನು ತೋರಿಸಿ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದ. ವರದಕ್ಷಿಣೆ ತರದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿಯೂ ಬೆದರಿಸಲಾರಂಭಿಸಿದ್ದ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಕೈಯಲ್ಲಿ ಲಾಂಗ್ ಹಿಡಿದು ವ್ಹೀಲಿಂಗ್

ಬೆಂಗಳೂರು: ಕೈಯಲ್ಲಿ ಲಾಂಗ್ ಹಿಡಿದು ದ್ವಿಚಕ್ರ ವಾಹನದಲ್ಲಿ ವ್ಹೀಲಿಂಗ್ ಮಾಡುತ್ತ ಸಾರ್ವಜನಿಕರಿಗೆ ಭಯವನ್ನುಂಟು ಮಾಡಿದ್ದ ಯುವಕನ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಆರೋಪಿ ಯುವಕ, ಗುಟ್ಟಹಳ್ಳಿ ನಿವಾಸಿಯೆಂಬ ಮಾಹಿತಿ ಇದೆ. ಅಪಾಯಕಾರಿ ವ್ಹೀಲಿಂಗ್ ವಿಡಿಯೊವನ್ನು ಚಿತ್ರೀಕರಿಸಿ ಆರೋಪಿ ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿದ್ದ. ಅದನ್ನು ಆಧರಿಸಿ ತನಿಖೆ ನಡೆಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ವಿದ್ಯುತ್ ಕೇಬಲ್ ಅಳವಡಿಸುತ್ತಿರುವ ಕಾಮಗಾರಿ ಕಾರ್ಯ ಕೈಗೊಂಡಿರುವುದರಿಂದ ಜ.18ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಬಾಲಾಜಿ ಬಡಾವಣೆ, ವಿಜಯಶ್ರೀ ಬಡಾವಣೆ, ಬಿಇಎಚ್‌ಇಎಲ್ ಬಡಾವಣೆ, ಬೃಂದಾವನ ನಗರ, ಹೊಸಹಳ್ಳಿ ರಸ್ತೆ, ಗಾಂಧಿ ನಗರ, ದುಬಾಸಿಪಾಳ್ಯ, ಕೋಡಿಪಾಳ್ಯ, ಗಾಂಧಿ ಪಾರ್ಕ್, ಭವಾನಿ ನಗರ, ಅಮ್ಮ ಆಶ್ರಮ ರಸ್ತೆ, ಲಕ್ಷ್ಮೀ ರಸ್ತೆ, ಆಡುಗೋಡಿ, ನಂಜಪ್ಪ ಬಡಾವಣೆ, ಪ್ರತಿಮಾ ಕೈಗಾರಿಕಾ ಬಡಾವಣೆ, ಇಸ್ರೊ ಬಡಾವಣೆ, ವಿಠ್ಠಲ ನಗರ, ಮಾರುತಿ ಬಡಾವಣೆ, ಸಮೃದ್ಧಿ ಬಡಾವಣೆ, ವಿಠ್ಠಲ ನಗರ, ಕುಮಾರಸ್ವಾಮಿ ಬಡಾವಣೆ, ಶಾರದಾ ನಗರ, ಪುಟ್ಟೇನಹಳ್ಳಿ ಮುಖ್ಯ ರಸ್ತೆ, ಗಣಪತಿ ಪುರ, ಟೀಚರ್ಸ್ ಕಾಲೊನಿ, ಬೀರೇಶ್ವರ ನಗರ, ಗಣಪತಿಪುರ, ಜೆ.ಪಿ. ನಗರದ ಎರಡು ಮತ್ತು ಮೂರು ಹಾಗೂ 4ನೇ ಹಂತದ ಸುತ್ತಮುತ್ತಲಿನ ಪ್ರದೇಶಗಳು.

ಜನಸಂದಣಿಯಲ್ಲಿ ಬ್ಯಾಗ್‌ಗೆ ಬ್ಲೇಡ್: ₹ 3.57 ಲಕ್ಷ ಕಳವು

ಬೆಂಗಳೂರು: ಜನಸಂದಣಿಯಲ್ಲಿ ಹೊರಟಿದ್ದ ಆಭರಣ ವ್ಯಾಪಾರಿಯೊಬ್ಬರ ಬ್ಯಾಗ್ ಅನ್ನು ಬ್ಲೇಡ್‌ನಿಂದ ಕತ್ತರಿಸಿ ₹ 3.57 ಲಕ್ಷ ನಗದು ಹಾಗೂ 28 ಗ್ರಾಂ ಚಿನ್ನಾಭರಣ ಕಳವು ಮಾಡಲಾಗಿದ್ದು, ಈ ಬಗ್ಗೆ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಗರದ ಎಸ್.ಪಿ ರಸ್ತೆಯಲ್ಲಿ ನಡೆದಿರುವ ಕಳ್ಳತನದ ಬಗ್ಗೆ ಚಿಕ್ಕಬಳ್ಳಾಪುರ ನಿವಾಸಿ ಮೆಹರಾಮ್ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಘಟನಾ ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಚಿಕ್ಕಬಳ್ಳಾಪುರದಲ್ಲಿ ಆಭರಣ ಮಳಿಗೆ ಇಟ್ಟುಕೊಂಡಿರುವ ಮೆಹರಾಮ್, ಚಿನ್ನದ ಗಟ್ಟಿಗಳನ್ನು ಖರೀದಿಸಲು ನಗರಕ್ಕೆ ಬಂದಿದ್ದರು. ಪರಿಚಯಸ್ಥರ ಆಭರಣ ಅಂಗಡಿಯತ್ತ ಹೊರಟಿದ್ದರು. ಅದೇ ಸಂದರ್ಭ ದುಷ್ಕರ್ಮಿಗಳು ಕಳವು ಮಾಡಿರುವುದು ಗೊತ್ತಾಗಿದೆ’ ಎಂದೂ ತಿಳಿಸಿದರು.

ಹೋಟೆಲ್‌ನವರು ಹೇಳಿದಂತೆ ಕೇಳಲಾಗದು: ಅಶೋಕ

ಕೋವಿಡ್: ತಜ್ಞರ ಸಲಹೆಯಂತೇ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾರೋ ಹೇಳಿದರೆಂದು ಅಪಾಯ ಮೈಮೇಲೆ ಎಳೆದುಕೊಳ್ಳಲು ಆಗುವುದಿಲ್ಲ. ತಜ್ಞರು, ವಿಶ್ವ ಆರೋಗ್ಯ ಸಂಸ್ಥೆ ಮತ್ತು ಕೇಂದ್ರ ಸರ್ಕಾರ ನೀಡುವ ಸಲಹೆಯ ಪ್ರಕಾರವೇ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ವಾರಾಂತ್ಯ ಕರ್ಫ್ಯೂ, ರಾತ್ರಿ ಕರ್ಫ್ಯೂ ಹೇರಬಾರದು ಎಂದು ಹೊಟೇಲ್, ರೆಸ್ಟೋರೆಂಟ್ ಮಾಲೀಕರು ಒತ್ತಾಯಿಸುತ್ತಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

'ಹೊಟೇಲ್‌ನವರು ಹೇಳಿದರು ಎಂದು ನಾವು 6.50 ಕೋಟಿ ಜನರ ಆರೋಗ್ಯವನ್ನು ಅಪಾಯದ ಅಂಚಿಗೆ ತಳ್ಳಲು ಆಗುವುದಿಲ್ಲ. ಆಡಳಿತದಲ್ಲಿ ಇರುವವರು ಜನರ ಪ್ರಾಣ ರಕ್ಷಣೆ ಮಾಡುವುದು ಪ್ರಾಥಮಿಕ ಕರ್ತವ್ಯ. ದಿನಕ್ಕೊಬ್ಬರು ಒಂದೊಂದು ರೀತಿಯ ಹೇಳಿಕೆ ನೀಡುತ್ತಿರುವುದನ್ನು ಗಮನಿಸಿದ್ದೇನೆ. ಹೆಚ್ಚು ಕಮ್ಮಿ ಆದರೆ ಇವರು ಬರ್ತಾರಾ' ಎಂದು ಪ್ರಶ್ನಿಸಿದರು.

ಸರ್ಕಾರ ಜನರ ಪರವಾಗಿಯೇ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂದು ಅಶೋಕ ಹೇಳಿದರು.

ಯಾವುದೇ ಗೊಂದಲವಿಲ್ಲ: 'ಕಂದಾಯ ಸಚಿವರು ಸಭೆಯ ನಂತರ ಸುದ್ದಿಗೋಷ್ಠಿ ಮಾಡಿದ್ದು ನನಗೆ ಬಳಿಕ ಗೊತ್ತಾಯಿತು. ಅದರಲ್ಲಿ ತಪ್ಪೇನೂ ಇಲ್ಲ. ಅವರು ಅವರ ಮನೆಯಿಂದ ವರ್ಚುವಲ್ ಆಗಿ ಸಭೆಯಲ್ಲಿ ಭಾಗವಹಿಸಿದ್ದರು. ಅವರು ಹಿರಿಯ ಸಚಿವರು. ನಿಮಗೆ ಮಾಹಿತಿ ನೀಡಿದ್ದಾರೆ. ಇಷ್ಟು ದಿನ ನಾನು ಹೇಳುತ್ತಿದ್ದೆ. ಇವತ್ತು ಅವರು ಮಾತನಾಡಿದ್ದಾರೆ. ಇದರಲ್ಲಿ ಯಾವುದೇ ಗೊಂದಲವಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

'ಅಶೋಕ ಅವರು ಸುದ್ದಿಗಾರರ ಜತೆ ಮಾತನಾಡುವಾಗ ಕೋವಿಡ್ ಪರೀಕ್ಷೆ ಸಂಖ್ಯೆಯನ್ನು ಕಡಿಮೆ ಮಾಡಿ ಎಂದು ತಜ್ಞರು ಹೇಳಿದ್ದಾರೆ ಎಂದರು. ನೀವು ನೋಡಿದರೆ ಐಸಿಎಂಆರ್ ಮಾರ್ಗಸೂಚಿಯಂತೆ ಪರೀಕ್ಷೆ ಮಾಡುತ್ತೇವೆ ಎನ್ನುತ್ತೀರಲ್ಲ' ಎಂಬ ಪ್ರಶ್ನೆಗೆ 'ಎರಡೂ ಒಂದೇ, ಅವರೂ ಅದನ್ನೇ ಹೇಳಿದ್ದಾರೆ' ಎಂದರು.

'ನೀವು ಕರೆದಿರಿ ಎಂದು ಮಾಹಿತಿ ನೀಡಲು ಹೊರಗೆ ಬಂದೆ, ಇಲ್ಲದಿರುವುದನ್ನು ಸೃಷ್ಟಿಸಲು ಹೋಗಬೇಡಿ' ಎಂದು ಸುಧಾಕರ್ ಹೇಳಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

32,47,243 ▲ ಒಟ್ಟು ಸೋಂಕಿತರು (32,20,087 ನಿನ್ನೆಯ ವಿವರ)
2,17,297 ▲ ಸಕ್ರಿಯ ಪ್ರಕರಣಗಳು
29,91,472 ▲ ಗುಣಮುಖರಾದವರು
38,445 ▲ ಒಟ್ಟು ಸಾವು

ದಿನದ ಏರಿಕೆ
ಹೊಸ ಪ್ರಕರಣ 27,156 ▼
ಗುಣಮುಖ 7,827 ▲
ಸಾವು 14 ▲
ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ದೃಢ ಪ್ರಮಾಣ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 2 ಲಕ್ಷದ ಗಡಿ ದಾಟಿದ್ದರೂ ಹೊಸದಾಗಿ ಪತ್ತೆಯಾಗುವ ಸೋಂಕು ದೃಢ ಪ್ರಮಾಣ ಶೇ 12.45ಕ್ಕೆ ಇಳಿಕೆಯಾಗಿದೆ.

ಭಾನುವಾರ 34,047 ಪ್ರಕರಣಗಳು ದೃಢಪಟ್ಟಿದ್ದವು. ಆದರೆ, ಸೋಮವಾರ ಬೆಂಗಳೂರಿನಲ್ಲಿ 15,947 ಮಂದಿ ಸೇರಿದಂತೆ ರಾಜ್ಯದಲ್ಲಿ 27,156 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ಹೊಸ ಪ್ರಕರಣಗಳ ಸಂಖ್ಯೆ 7 ಸಾವಿರದಷ್ಟು ಇಳಿಕೆ ಕಂಡಿದೆ.

ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿಗೆ ಮತ್ತು 19 ಜಿಲ್ಲೆಗಳಲ್ಲಿ ಮೂರಂಕಿಗೆ ತಲುಪಿದೆ. ಮೈಸೂರಿನಲ್ಲಿ 1770, ತುಮಕೂರಿನಲ್ಲಿ 1147 ಮತ್ತು ಹಾಸನದಲ್ಲಿ 1050 ಪ್ರಕರಣಗಳು ವರದಿಯಾಗಿವೆ. ಯಾದಗಿರಿಯಲ್ಲಿ 18 ಪ್ರಕರಣಗಳು ವರದಿಯಾಗಿವೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಐದು ಮಂದಿ, ದಕ್ಷಿಣ ಕನ್ನಡದಲ್ಲಿ ಮೂವರು ಮತ್ತು ಚಿಕ್ಕಬಳ್ಳಾಪುರ, ಚಿತ್ರದುರ್ಗ, ಧಾರವಾಡ, ಕಲಬುರಗಿ, ರಾಮನಗರ, ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.05 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,445ಕ್ಕೆ ಏರಿಕೆಯಾಗಿದೆ.

287 ಓಮೈಕ್ರಾನ್ ಪ್ರಕರಣ: (ಬೆಂಗಳೂರು) ನಗರದಲ್ಲಿ ಸೋಮವಾರ 287 ಓಮೈಕ್ರಾನ್ ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ರಾಜ್ಯದಲ್ಲಿ ಒಟ್ಟು ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 766ಕ್ಕೆ ತಲುಪಿದೆ.

ಶಾಸಕರಿಂದಲೇ ನಿಯಮ ಉಲ್ಲಂಘನೆ

ಪ್ರಜಾವಾಣಿ ವಾರ್ತೆ

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಕೋವಿಡ್ ನಿಯಯಮಾವಳಿ ಉಲ್ಲಂಘಿಸಿ ಶಾಸಕ ಎಸ್.ಭೀಮಾನಾಯ್ಕ ಸೋಮವಾರ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಉದ್ಘಾಟಿಸಿದರು.

ತಾಲ್ಲೂಕು ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ, ಸ್ಥಳೀಯ ಖಾಸಗಿ ವೈದ್ಯರು, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ, ಕೆಪಿಸಿಸಿ ಸದಸ್ಯ ಕೆ.ಶಿವಮೂರ್ತಿ, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಸೇರಿದ್ದರು. ಅಂತರ ಪಾಲಿಸಿರಲಿಲ್ಲ.

ನಂತರ ಮಾತನಾಡಿದ ಶಾಸಕರು, 'ಕೋವಿಡ್ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯಂತೆ ವೇದಿಕೆ ಕಾರ್ಯಕ್ರಮ ಏರ್ಪಡಿಸಿಲ್ಲ' ಎಂದು ಸಮರ್ಥಿಸಿಕೊಂಡರು

ವಸತಿ ಶಾಲೆ– 40 ವಿದ್ಯಾರ್ಥಿನಿಯರಿಗೆ ಸೋಂಕು: ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಇಲ್ಲಿಯ ರಾಣಿ ಚನ್ನಮ್ಮ ಸ್ಮಾರಕ ಬಾಲಕಿಯರ ವಸತಿ ಸೈನಿಕ ಶಾಲೆಯ 40 ವಿದ್ಯಾರ್ಥಿನಿಯರಿಗೆ ಕೋವಿಡ್ ಸೋಂಕು ದೃಢಪಟ್ಟಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಎಸ್.ಎಸ್. ಸಿದ್ದಣ್ಣವರ ಸೋಮವಾರ ತಿಳಿಸಿದರು. ಇದರೊಂದಿಗೆ 13 ಸಿಬ್ಬಂದಿ ಸೇರಿ ವಸತಿ ಶಾಲೆಯಲ್ಲಿಯೇ 234 ವಿದ್ಯಾರ್ಥಿನಿಯರಿಗೆ ಕೋವಿಡ್ ದೃಢಪಟ್ಟಂತಾಗಿದೆ.



ಬಜರಂಗ ದಳದ ಕಾರ್ಯಕರ್ತರ ವಿರುದ್ಧ ಪ್ರಕರಣ
ಹೊಸಪೇಟೆ (ವಿಜಯನಗರ): ಕೋವಿಡ್ ನಿಯಮ ಉಲ್ಲಂಘಿಸಿ ಶ್ರೀಕೃಷ್ಣದೇವರಾಯ ಜಯಂತಿ ಆಚರಿಸಿದ ಆರೋಪದಡಿ ರಾಷ್ಟ್ರರಕ್ಷಣಾ ಪಡೆ, ಬಜರಂಗ ದಳದ ಹತ್ತು ಜನರ ವಿರುದ್ಧ ಸೋಮವಾರ ಹಂಪಿ ಪ್ರವಾಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಂತರ ಪಾಲಿಸಿರಲಿಲ್ಲ. ಮುಖಗವಸು ಸೂಕ್ತ ರೀತಿ ಧರಿಸದ ಕಾರಣ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ.ತಿಳಿಸಿದ್ದಾರೆ.

ಕಾರ್ಯಕರ್ತರು ಆನೆಗೊಂದಿಯಲ್ಲಿ ಕೃಷ್ಣದೇವರಾಯನ ಜಯಂತಿ ಆಚರಿಸಿದ ನಂತರ ಹಂಪಿಗೆ ಬಂದು ಪೂಜೆ ಸಲ್ಲಿಸಿದ್ದರು. ವಿಜಯನಗರ ರಾಜ ವಂಶಸ್ಥ ಕೃಷ್ಣದೇವರಾಯ ಅವರನ್ನು ಅಲ್ಲಿ ಆದರೆ, ಆ ಸಂಬಂಧ ಪ್ರಕರಣ ದಾಖಲಾಗಿಲ್ಲ.

ದೂರದಿಂದಲೇ ಯಲ್ಲಮ್ಮನಿಗೆ ನಮಿಸಿದ ಭಕ್ತರು
ಉಗರಗೋಳ (ಬೆಳಗಾವಿ ಜಿಲ್ಲೆ): ಕೋವಿಡ್ ಹಿನ್ನೆಲೆಯಲ್ಲಿ ಶ್ರೀಕ್ಷೇತ್ರ ಯಲ್ಲಮ್ಮನಗುಡ್ಡಕ್ಕೆ ಭಕ್ತರಿಗೆ ನಿರ್ಬಂಧ ಹೇರಲಾಗಿದೆ. ಆದರೂ ಸೋಮವಾರ 'ಬನದ ಹುಣ್ಣಿಮೆ' ಅಂಗವಾಗಿ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ದೂರದಿಂದಲೇ ದೇವಿಗೆ ನಮನ ಸಲ್ಲಿಸಿದರು.

ಉಗರಗೋಳ, ಹಿರೇಕುಂಬಿ, ಚಿಕ್ಕುಂಬಿ, ಚುಳಕಿ ಗ್ರಾಮಗಳಲ್ಲಿ ಬನದ ಹುಣ್ಣಿಮೆ ಆಚರಿಸಿ ಭಕ್ತಿ ಸಮರ್ಪಿಸಿದರು. ಗುಡ್ಡಕ್ಕೆ ಪ್ರವೇಶ ನಿಷೇಧಿಸಿದರೂ ಭಕ್ತರ ಪ್ರವಾಹ ನಿಂತಿರಲಿಲ್ಲ. ಭಾನುವಾರ ಸಂಜೆಯಿಂದಲೇ ಭಕ್ತರು ಬಂದು ಹೊರವಲಯದಲ್ಲಿ ತಂಗಿದ್ದರು. ಗುಡ್ಡಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ವಾಹನ, ಜನರಸಂಚಾರ ನಿಷೇಧಿಸಲಾಗಿತ್ತು.

ಜಲ ವಿವಾದ ಕಾಯ್ದೆ ಪುನರ್‌ಪರಿಶೀಲನೆ ಅಗತ್ಯ: ಸಿಎಂ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿವೃದ್ಧಿಗೆ ತೊಡಕಾಗಿರುವ ಅಂತರರಾಜ್ಯ ಜಲ ವಿವಾದ ಕಾಯ್ದೆಯನ್ನು ಪುನರ್‌ಪರಿಶೀಲಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಪ್ರಧಾನಮಂತ್ರಿ ಗತಿಶಕ್ತಿ ಯೋಜನೆಯ ದಕ್ಷಿಣ ವಲಯ ಸಮ್ಮೇಳನದಲ್ಲಿ ಸೋಮವಾರ ವರ್ಚುವಲ್ ಆಗಿ ಭಾಗವಹಿಸಿ ಮಾತನಾಡಿದ ಅವರು, ಈ ಕಾಯ್ದೆಯ ಪರಿಣಾಮ ಅಂತರ ರಾಜ್ಯ ಜಲವಿವಾದಗಳು ಬಗೆಹರಿಯದೇ ನೀರಾವರಿ ಯೋಜನೆಗಳು ಹಲವು ದಶಕಗಳಿಂದ ನನೆಗುದಿಗೆ ಬಿದ್ದಿವೆ ಎಂದರು.

ಅಂತರ ರಾಜ್ಯ ಜಲ ವಿವಾದ ಕಾಯ್ದೆಯು ಸಮಸ್ಯೆಯನ್ನು ಬಗೆಹರಿಸುವ ಬದಲು, ಇನ್ನಷ್ಟು ಬಿಗಡಾಯಿಸುವಂತೆ ಮಾಡಿದೆ. ಆದ್ದರಿಂದ ಈ ಕಾಯ್ದೆಯನ್ನು ಮರುಪರಿಶೀಲಿಸಲು ಇದು ಸಕಾಲ ಎಂದು ಬೊಮ್ಮಾಯಿ ಸಲಹೆ ನೀಡಿದರು.

ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ವೇಗ ಕಂಡುಕೊಳ್ಳದೇ ಇರಲು ಅಡೆ ತಡೆಗಳೇ ಪ್ರಮುಖ ಕಾರಣವಾಗಿವೆ. ಹಲವು ಯೋಜನೆಗಳಿಗೆ ಪರಿಸರ ಮತ್ತು ಅರಣ್ಯ ಇಲಾಖೆಗಳ ಅನುಮತಿ ಸಿಗುವುದೇ ತುಂಬ ತಡವಾಗುತ್ತಿದೆ. ಇದನ್ನು ಸರಿಪಡಿಸಬೇಕು. ಅಲ್ಲದೆ, ಗರಿಷ್ಠ ಹೂಡಿಕೆಗೆ ಅನುಕೂಲವಾಗುವಂತೆ ಕೆಲವು ನಿಯಮಗಳನ್ನೂ ಸಡಿಲಗೊಳಿಸಬೇಕು. ಯೋಜನೆಗಳು ತಡವಾಗುವುದರಿಂದ ದುಬಾರಿ ಆಗಿಯೂ ಪರಿಣಮಿಸಿವೆ ಎಂದರು.



ನದಿ ಪಾತ್ರ ರಾಜ್ಯಗಳಿಗೆ ಅನ್ಯಾಯವಾಗದಂತೆ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಪರಿಹಾರ ಕಂಡುಕೊಳ್ಳಲು ಹೊಸ ಮಾರ್ಗ ಹುಡುಕಬೇಕು
ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ

ಗತಿ ಶಕ್ತಿ ಯೋಜನೆ ರಾಷ್ಟ್ರ ನಿರ್ಮಾಣದ ದೂರದೃಷ್ಟಿಯಿಂದ ರೂಪಿತವಾದ ಕಾರ್ಯಕ್ರಮ. ಸಮಸ್ಯೆಗಳನ್ನು ಬಗೆಹರಿಸಲು ಒಟ್ಟಾಗಿ ಕೆಲಸ ಮಾಡುವ, ಒಂದೇ ಗುರಿಯತ್ತ ಸಾಗಲು, ದೇಶ ಕಟ್ಟುವ ಕಾಯಕಕ್ಕೆ ಅನುಕೂಲವಾಗುವ ಸಂಪನ್ಮೂಲ ಕ್ರೋಡೀಕರಿಸಲು ಇರುವ ಪರಿಣಾಮಕಾರಿ ವೇದಿಕೆ ಎಂದು ಹೇಳಿದರು.

ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ಒಕ್ಕೂಟದ ಸಹಕಾರವನ್ನು ಉದಾಹರಣೆಯಾಗಿ ಪರಿಗಣಿಸಬೇಕು. ಏಕೆಂದರೆ ಬಹುತೇಕ ಮೂಲಸೌಕರ್ಯ ರಾಜ್ಯಗಳ ಮೂಲಕವೇ ಹಾದು ಹೋಗುತ್ತದೆ. ಅವರ ಸಹಕಾರದಿಂದಲೇ ಅನುಷ್ಠಾನಕ್ಕೆ ಮಾಡಬೇಕಾಗಿದೆ. ಭಾರತ ಸರ್ಕಾರದ ದೂರದೃಷ್ಟಿ ಮತ್ತು ಸಹಕಾರದಿಂದ ಎನ್‌ಎಂಪಿ ಮತ್ತು ಡಿಜಿಟಲ್ ಶಿಷ್ಟಾಚಾರದ ವ್ಯಾಪ್ತಿಯೊಳಗೆ ತರುವ ಯೋಜನೆಗಳು ರಾಷ್ಟ್ರ ದಶಕಗಳಿಂದ ಬೇಡಿಕೆಯಲ್ಲಿದ್ದ ಕಾರ್ಯಕ್ರಮಗಳಾಗಿವೆ ಎಂದು ಹೇಳಿದರು.

ರಸ್ತೆ ಸಾರಿಗೆಯಲ್ಲಿ ಗತಿ ಮತ್ತು ಶಕ್ತಿ ಎರಡನ್ನೂ ಸಾಧಿಸಿರುವ ಕೇಂದ್ರ ರಸ್ತೆ ಸಾರಿಗೆ ಸಚಿವರು, ರಾಷ್ಟ್ರೀಯ ಹೆದ್ದಾರಿಗಳನ್ನು ಕಳೆದ 7 ವರ್ಷಗಳಲ್ಲಿ ಹತ್ತು ಪಟ್ಟು ಹೆಚ್ಚಿಸಿದ್ದಾರೆ. ಅವರು ರಾಷ್ಟ್ರೀಯ ಹೆದ್ದಾರಿ ಕೇವಲ ರಸ್ತೆ ಸಾರಿಗೆ ಮತ್ತು ಲಾಜಿಸ್ಟಿಕ್‌ಗಳಿಗೆ ಮಾತ್ರ ಸೀಮಿತವಾಗಿರದೇ, ರಾಷ್ಟ್ರೀಯ ಅಭಿವೃದ್ಧಿಯನ್ನು ಸಾಧ್ಯವಾಗಿಸಬಲ್ಲದು ಎಂದು ತೋರಿಸಿದ್ದಾರೆ ಎಂದು ಬೊಮ್ಮಾಯಿ ತಿಳಿಸಿದರು.

ಶೈಲಜ ಹೆಗ್ಡೆ ಪ್ರಥಮ

ಬೆಂಗಳೂರು: ದ.ರಾ.ಬೇಂದ್ರೆ ಕಾವ್ಯ ಕೂಟವು ಪಿಎಚ್.ಡಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ 'ದ.ರಾ.ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ –14'ರಲ್ಲಿ ಮುಂಬೈ ವಿಶ್ವವಿದ್ಯಾಲಯದ ಸಂಶೋಧಕಿ ಶೈಲಜ ಹೆಗ್ಡೆ ಮೊದಲ ಬಹುಮಾನ ಪಡೆದಿದ್ದಾರೆ.

'ಅವರಿಗೆ ₹5 ಸಾವಿರ ಬಹುಮಾನ ನೀಡಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ. 'ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಶೋಧಕಿ ಕೆ.ವಿ. ಅನಿತಾ ಎರಡನೇ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಶೋಧಕಿ ಆಶಾ ಚೌಗಲೆ ಮೂರನೇ ಬಹುಮಾನ ಗಳಿಸಿದ್ದಾರೆ. ಅವರಿಗೆ ಕ್ರಮವಾಗಿ ₹4,000 ಹಾಗೂ ₹3,000 ಬಹುಮಾನ ನೀಡಲಾಗುತ್ತದೆ' ಎಂದಿದೆ.

'ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಸಂಶೋಧಕ ಕುಮಾರ ಯಲಿಬಳ್ಳಿ ಹಾಗೂ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧಕಿ ಎನ್.ರೇಖಾ ಅವರಿಗೆ ಪ್ರೋತ್ಸಾಹಕ ಬಹುಮಾನ ಕೊಡಲಾಗಿದೆ. ಇವರಿಗೆ ತಲಾ ₹2,000 ಸಿಗಲಿದೆ' ಎಂದು ವಿವರಿಸಲಾಗಿದೆ.

'ದ.ರಾ.ಬೇಂದ್ರೆ ಅವರ ಜನ್ಮದಿನದಂದು (ಜ.31) ಬಹುಮಾನ ಪ್ರದಾನ ಸಮಾರಂಭ ಆನ್‌ಲೈನ್‌ನಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಕಾವ್ಯಕೂಟದ ಅಧ್ಯಕ್ಷ ಜಿ.ಕೃಷ್ಣಪ್ಪ ತಿಳಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಆಯುಷ್ಯ ವೃದ್ಧಿಗೆ ಧರ್ಮಸ್ಥಳದಲ್ಲಿ ಮೃತ್ಯುಂಜಯ ಹೋಮ ನಡೆಯಿತು

ಪ್ರಧಾನಿ ಮೋದಿ ಆಯುಷ್ಯ ವೃದ್ಧಿಗೆ ಧರ್ಮಸ್ಥಳದಲ್ಲಿ ಮೃತ್ಯುಂಜಯ ಹೋಮ

ಉಜಿರೆ: ಪ್ರಧಾನಿ ನರೇಂದ್ರ ಮೋದಿ ಅವರ ಆರೋಗ್ಯ ಮತ್ತು ಆಯುಷ್ಯ ವೃದ್ಧಿಗಾಗಿ ಧರ್ಮಸ್ಥಳದ ಅಮೃತವರ್ಷಿಣಿ ಸಭಾಭವನದಲ್ಲಿ ಸೋಮವಾರ ಮೃತ್ಯುಂಜಯ ಹೋಮ ನಡೆಯಿತು.

ಸುರತ್ಕಲ್‌ನ ನಾಗೇಂದ್ರ ಭಾರದ್ವಾಜ್ ಪ್ರಧಾನ ಪೌರೋಹಿತ್ಯದಲ್ಲಿ ಏಳು ಕುಂಡಗಳಲ್ಲಿ ನಡೆದ ಹೋಮದಲ್ಲಿ 108 ಅರ್ಚಕರು ಭಾಗವಹಿಸಿದ್ದರು. ಬೆಳ್ತಂಗಡಿ ತಾಲ್ಲೂಕಿನ ಜನರ ಪರವಾಗಿ ಶಾಸಕ ಹರೀಶ್ ಪೂಂಜ ಮೃತ್ಯುಂಜಯ ಹೋಮ ಆಯೋಜಿಸಿದ್ದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, 'ಪ್ರಧಾನಿಯವರ ಆಯುಷ್ಯ ಮತ್ತು ಆರೋಗ್ಯ ವೃದ್ಧಿಯಾಗಿ, ಸಕಲ ಸನ್ಮಂಗಲ ಉಂಟಾಗಲಿ. ಶಾಸಕ ಹರೀಶ್ ಪೂಂಜ ಮತ್ತು ಡಾ. ಸ್ವೀಕೃತಿ ದಂಪತಿ ದೆಹಲಿಗೆ ಹೋಗಿ ಮೃತ್ಯುಂಜಯ ಹೋಮದ ಪ್ರಸಾದವನ್ನು ಮೋದಿ ಅವರಿಗೆ ನೀಡಲಿದ್ದಾರೆ' ಎಂದರು. ಸಚಿವರಾದ ಕೆ.ಎಸ್. ಈಶ್ವರಪ್ಪ, ಶಶಿಕಲಾ ಜೊಲ್ಲೆ, ಸಿ.ಸಿ.ಪಾಟೀಲ್ ಮತ್ತು ಎಸ್.ಅಂಗಾರ, ವಿಧಾನ ಪರಿಷತ್ ಸದಸ್ಯ ಕೆ.ಪ್ರತಾಪಸಿಂಹ ನಾಯಕ್ ಇದ್ದರು.

ಇದೇ ರೀತಿ, ಬೆಳ್ತಂಗಡಿ ತಾಲ್ಲೂಕಿನ ವಿವಿಧ ಈಶ್ವರ ದೇಗುಲಗಳಲ್ಲಿ ಮತ್ತು ಜಿಲ್ಲೆಯ ಕೆಲವೆಡೆ ಹೋಮಗಳು ನಡೆದಿವೆ.

ಮಹಿಳೆಯ ಹೋರಾಟ ಯಶಸ್ವಿ

ಒಂದನೇ ಪುಟದಿಂದ

'ಶಾಖೆಯ ವ್ಯವಸ್ಥಾಪಕರನ್ನು ಭೇಟಿಯಾದರೂ ಫಲ ಸಿಗಲಿಲ್ಲ. ಸಂಸದ ಪ್ರತಾಪಸಿಂಹ ಅವರ ಸಲಹೆಯಂತೆ ಲೀಡ್ ಬ್ಯಾಂಕ್ ವ್ಯವಸ್ಥಾಪಕರ ಬಳಿ ಹೋದೆ. ಮುದ್ರಾ ಯೋಜನೆಯಡಿ ಸಾಲ ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದರು. ಆಗಲೂ ಸಾಲ ಮಂಜೂರು ಆಗಲಿಲ್ಲ' ಎಂದು ನೋವು ವಿವರಿಸಿದ್ದಾರೆ.

'3 ತಿಂಗಳಿನಿಂದ, ಕಡೆಪಕ್ಷ ಮನುಷ್ಯ ಜಾತಿಯೆಂದು ನೋಡದೆ ನನ್ನನ್ನು ಅವಮಾನಿಸಿದ ವ್ಯವಸ್ಥೆಗೆ ಧಿಕ್ಕಾರ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಉತ್ತಮ ಸಾಧನೆ ಕನಸು: 'ಪತಿ ಇದ್ದಾಗ ಮಣ್ಣಿನ ಆಭರಣ ತಯಾರಿಕೆ ನನ್ನ ಹವ್ಯಾಸವಾಗಿತ್ತು. ಈ ಕ್ಷೇತ್ರದಲ್ಲಿ ನಾನು ಉತ್ತಮ ಸಾಧನೆ ಮಾಡಬೇಕೆಂದು ಅವರು ಬಯಸಿದ್ದರು. ಅವರ ನಿಧನದ ಬಳಿಕ ಮನೆಯಲ್ಲೇ ಪೂರ್ಣಪ್ರಮಾಣದಲ್ಲಿ ಮಣ್ಣಿನ ಆಭರಣ ತಯಾರಿಕೆಯ ಸ್ವಯಂ ಉದ್ಯೋಗದಲ್ಲಿ ತೊಡಗಿದ್ದೇನೆ. ಯುವತಿಯರಿಗೂ ತರಬೇತಿ ನೀಡುತ್ತಿದ್ದೇನೆ. ಸಾಲಕ್ಕಾಗಿ ಅಲೆದು ಸುಸ್ತಾಗಿ ಪ್ರತಿಭಟನೆಗೆ ಮುಂದಾದೆ' ಎಂದು ಮಂಜುಳಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ನಿಯಮ ಉಲ್ಲಂಘಿಸಿ ಎಂಇಎಸ್‌ನಿಂದ ಕಾರ್ಯಕ್ರಮ

ಬೆಳಗಾವಿ: ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್)ಮತ್ತು ಶಿವಸೇನಾ ಮುಖಂಡರು ಹಾಗೂ ಕಾರ್ಯಕರ್ತರು ಕೋವಿಡ್–19 ಮಾರ್ಗಸೂಚಿ ಉಲ್ಲಂಘಿಸಿ ಸೋಮವಾರ ಇಲ್ಲಿ 'ಹುತಾತ್ಮ ದಿನ' ಕಾರ್ಯಕ್ರಮ ನಡೆಸಿದರು.ಈ ಕಾರ್ಯಕ್ರಮಕ್ಕೆ ನಗರ ಪೊಲೀಸ್ ಕಮಿಷನರೇಟ್ ಅನುಮತಿ ನಿರಾಕರಿಸಿತ್ತು. ಎಂಇಎಸ್ ಅಧ್ಯಕ್ಷ ದೀಪಕ ದಳವಿ ನೇತೃತ್ವದಲ್ಲಿ ಮೆರವಣಿಗೆ ನಡೆಸಲಾಯಿತು. ಮರಾಠಿ ಭಾಷಿಗರು ಹೆಚ್ಚಿರುವ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೇ ಸೇರಿಸಬೇಕು ಎಂದು ಕಾರ್ಯಕರ್ತರು ಘೋಷಣೆ ಕೂಗಿದರು.

'ಎಂಇಎಸ್‌ನವರು ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿರುವ ಕುರಿತು ಪಾಲಿಕೆ ಅಧಿಕಾರಿಗಳು ದೂರು ನೀಡಿದರೆ ಪ್ರಕರಣ ದಾಖಲಿಸಲಾಗುವುದು' ಎಂದು ಡಿಸಿಪಿ ರವೀಂದ್ರ ಗಡಾದಿ ಹೇಳಿದರು. ಪ್ರತಿಕ್ರಿಯೆಗೆ ನಗರಪಾಲಿಕೆ ಆಯುಕ್ತ ರುದ್ರೇಶ ಘಾಳಿ ಅವರು ಮೊಬೈಲ್ ಕರೆ ಸ್ವೀಕರಿಸಲಿಲ್ಲ.

'ಅನುಮತಿ ಸಿಗದಿದ್ದರೆ ಜಾತ್ರೆ ಮುಂದೂಡಿಕೆ'

ನಾಯಕನಹಟ್ಟಿ (ಚಿತ್ರದುರ್ಗ ಜಿಲ್ಲೆ): ಹರಿಹರದ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದ ಆವರಣದಲ್ಲಿ ಫೆ.8, 9ರಂದು ಏರ್ಪಡಿಸಿರುವ ಮಹರ್ಷಿ ವಾಲ್ಮೀಕಿ ಜಾತ್ರೆಗೆ ಅನುಮತಿ ಸಿಗದಿದ್ದರೆ ಮುಂದೂಡಲಾಗುವುದು ಎಂದು ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಶ್ರೀ ಹೇಳಿದರು.

ಕ್ಷೇಮ ಕುಶಲ

ಹಸಿವನ್ನು ಹಿಂಗಿಸಿ ದೇಹಕ್ಕೆ ಕಸುವನ್ನು ಕೊಡುವ ಎಲ್ಲವೂ ಅನ್ನವೇ



ಅನ್ನಸಂಸ್ಕೃತಿ ಅನ್ಯಸಂಸ್ಕೃತಿ ಆಗದಿರಲಿ

ರಜನೀಶ



ಅನ್ನ ಎಂದರೆ ಏನು? ಯಾವುದೋ ಧಾನ್ಯವೊಂದರಿಂದ ಸಿದ್ಧವಾದ ಪಾಕವಿಶೇಷವೋ? ಅಥವಾ ತನ್ನ ಸಂತತಿಯ ಪೋಷಣೆಗಾಗಿ ತಾಯೊಂದರ ಎದೆಯಿಂದ ಮಿಡಿದ ಸುಧೆಯೋ? ಅಥವಾ ಒಂದು ಮೃಗಕೆ ಬೇಟೆಯಾಗಿ ದೊರೆತ ಪಶುವೋ? ಯಾವುದು ಅನ್ನ? ಯಾವುದು ಅಲ್ಲ!

ಹಸಿವನ್ನು ಹಿಂಗಿಸಿ ದೇಹಕ್ಕೆ ಕಸುವನ್ನು ಕೊಡುವ ಎಲ್ಲವೂ ಅನ್ನವೇ – ಗಾಳಿ, ನೀರು, ಬೆಳಕು, ಪಂಚೇಂದ್ರಿಯಗಳ ಮೂಲಕ ದೇಹವನ್ನು ಹೊಗುವ ಎಲ್ಲವೂ ಅನ್ನವೇ ಆಗಿದೆ. ಉದರಪೋಷಣೆಗಾಗಿ ಎಲ್ಲ ಜೀವಿಗಳೂ ಒಂದನ್ನೊಂದು ಆಶ್ರಯಿಸಿಯೇ ಇರುತ್ತವಷ್ಟೆ. ಸೃಷ್ಟಿನಿಯಮವೇ ಹೀಗಲ್ಲವೇನು? ಇದಕ್ಕೆ ಮನುಷ್ಯನು ಹೊರತಾದವನೇನಲ್ಲ. ಆದರೆ ಬುದ್ಧಿವಂತನೆನಿಸಿರುವ ಈ ಪ್ರಾಣಿಯು ತನ್ನ ಸಹಜ ಆವಶ್ಯಕತೆಯನ್ನು ಪೂರೈಸಿಕೊಳ್ಳುವ ಹಾಗೂ ಆಸ್ವಾದಿಸುವ ರೀತಿ ಅನನ್ಯವಾಗಿದೆ. ಇದು ಒಂದು ಸಂಸ್ಕೃತಿಯಿಂದ ಮತ್ತೊಂದಕ್ಕೆ ವಿಭಿನ್ನವೂ ವಿಶಿಷ್ಟವೂ ಆಗಿರುತ್ತದೆ.

ಅನ್ನದಿಂದ ಹೊಟ್ಟೆತುಂಬಿದರಷ್ಟೇ ಮಾನವನಿಗೆ ಸಾಕೆನಿಸದು; ಮನುಷ್ಯನ ಅನ್ನವ್ಯಾಪ್ತಿ ಜೀವಕೋಶವನ್ನು ಭರಿಸಿಕೊಳ್ಳುವುದಕ್ಕಷ್ಟೇ ಸೀಮಿತವಲ್ಲವಲ್ಲ! ಇವನಿಗೆ ಭಾವವೆಂಬ ಅಮಿತಕೋಶವೆಂಬುದೂ ಒಂದಿದೆಯಲ್ಲ. ಆ ಕೋಶದ ಭರಣಕ್ಕಾಗಿ ಮಾನವನು ಕಂಡುಹುಡುಕಿಕೊಂಡಿರುವ ದಾರಿ ಹತ್ತುಹಲವು: ಸ್ನೇಹಪ್ರೀತಿಗಳು, ಸರಸವಿರಸಗಳು, ಕೊಡುಕೊಳ್ಳುವಿಕೆಯ ಆಟಗಳು, ಶ್ರೇಷ್ಠ ಕನಿಷ್ಠಗಳೆಂಬ ನಾಟಕಗಳು – ಇವುಗಳೆಲ್ಲದರ ಜೊತೆ ಜೊತೆಗೆ ಕರಕುಶಲ ಕಲಾಕೌಶಲ, ಗೀತ ನೃತ್ಯ ಕಾವ್ಯ ಚಿತ್ರ ಶಿಲ್ಪಗಳೇ ಮೊದಲಾದ ಆಮೋದಗಳು! ಇವುಗಳಿಂದ ತನ್ನ ಕೋಶ ತುಂಬಿಸಿಕೊಳ್ಳುವ ಬಗೆಯನ್ನು ಮಾನವ ಅನಾದಿಕಾಲದಿಂದಲೂ ಹತ್ತುಹಲವು ವಿಧಗಳಲ್ಲಿ ಅನ್ವೇಷಿಸುತ್ತಲೇ ಬಂದಿದ್ದಾನೆ. ಈ ಜೀವಭಾವಕೋಶಗಳಿಂದ ಇವನ ಸರ್ವೇಂದ್ರಿಯಗಳೂ ತಣಿಯಬೇಕು, ಆ ಮೂಲಕ ಸರ್ವಾಂಗೀಣವಾಗಿ ಇವನು ಬಲಗೊಳ್ಳಬೇಕು. ಮಾನವನು ಅನ್ನವನ್ನು ಕಂಡುಕೊಂಡಿರುವ ರೀತಿ ಹೀಗೆ.

> ಅನ್ನವಿಲ್ಲದೆ ನಮ್ಮ ಅಸ್ತಿತ್ವವೇ ಇರದು. ನಾವು ಉಣ್ಣುವ ಅನ್ನವಷ್ಟೆ 'ಅನ್ನ'ವೆ? ಅನ್ನಕ್ಕೂ ನಮ್ಮ ವ್ಯಕ್ತಿತ್ವಕ್ಕೂ ಇರಬೇಕಾದ ನಂಟು ಹೇಗೆ? ಅನ್ನಸಂಸ್ಕೃತಿಯಲ್ಲಿ ನಮ್ಮ ಮಾನಸಿಕ ದೈಹಿಕ ಆರೋಗ್ಯವೂ ಇದೆಯಷ್ಟೆ!

ಅನ್ನಪಾನಗಳ ಕುರಿತು ದಾರ್ಶನಿಕಕವಿ ಖಲಿಲ್ ಗಿಬ್ರಾನ್ ತನ್ನ 'ಪ್ರಾಫೆಟ್' ಸಂಕಲನದಲ್ಲಿ ಹೇಳುವ ಮಾತು ಸೊಗಸಾಗಿದೆ: '...ಬೆಳಕನ್ನು ಹೀರಿ ಬದುಕುವ ಗಿಡಮರಗಳ ಹಾಗೆಯೇ ನೀನೂ ಬದುಕಬಹುದಾಗಿದ್ದರೆ ಆಗಬಹುದಿತ್ತು. ಆದರೆ, ನಿನ್ನ ತೃಷೆಯನ್ನು ಹಿಂಗಿಸಲು ಮತ್ತೊಂದರ ಪ್ರಾಣವನ್ನು ಹೀರಬೇಕಿದೆ, ತಾಯ ಹಾಲನ್ನು ಹಸುಗೂಸಿನಿಂದ ಕಸಿಯಬೇಕಿದೆ. ಇದು ಅನಿವಾರ್ಯವೇ ಆಗಿರುವಾಗ ಆ ನಿನ್ನ ಕ್ರಿಯೆಯು ಒಂದು ಆರಾಧನೆಯೇ ಆಗಿರಲಿ.

'ನಿನ್ನ ಭೋಜನಪಾತ್ರೆಯು, ಮಾನವನೊಳಗೆ ಪರಮಪವಿತ್ರವಾಗಿ ಇರುವೊಂದಕ್ಕೆ ವನೋಪವನಗಳಿಂದ ತಂದ ಪವಿತ್ರವಾದೊಂದನ್ನು ನಿವೇದಿಸುವ ಯಜ್ಞವೇದಿಯೇ ಆಗಿರಲಿ...'

ಒಂದು ಜೀವದ ಪೋಷಣೆಗೆ ಮತ್ತೊಂದು ಜೀವವು ಆಹುತಿಯಾಗಲೇಬೇಕು ಎನ್ನುವ ಮಾತಿನೊಂದಿಗೆ, ತನ್ನ ಜೀವವು ಸಹ ಮತ್ತಾವುದೋ ಮಹತ್ತಿಗೆ ಆಹುತಿಯಾಗಲೇಬೇಕಿದೆ ಎನ್ನುವ ಅರಿವೂ ಸಮರ್ಪಣೆಯೂ ಮನುಷ್ಯನಲ್ಲಿ ಸದಾ ಜಾಗೃತವಾಗಿರಬೇಕು ಎನ್ನುವ ಭಾವವನ್ನು ಕವಿಯು ಸೂಚಿಸಿದ್ದಾನೆ.

ಮೇಲಿನ ಮಾತುಗಳು 'ಅನ್ನವನ್ನು ನಿಂದಿಸಬಾರದು, ಅನ್ನವನ್ನು ತಿರಸ್ಕರಿಸಬಾರದು...' ಮುಂತಾಗಿರುವ ಉಪನಿಷತ್ತು ಮಾತುಗಳಿಗೆ ಪೂರಕವಾಗಿ ಇರುವಂಥದ್ದೇ ಆಗಿದೆ. ನಮಗೆ ಅನ್ನವನ್ನು ನಿಂದಿಸುವ ಮನಸ್ಸು ಮೂಡುವುದಾದರೂ ಏಕೆ? ಅನ್ನದ ಬಗೆಗೆ ತಿರಸ್ಕಾರಬುದ್ಧಿ ತೋರಿಕೊಳ್ಳುವುದಾದರೂ ಏತಕ್ಕಾಗಿ? ಅದಕ್ಕೆ ಬಹುಮುಖ್ಯ ಕಾರಣ, ಸಹಜವಾಗಿಯೇ ಎಲ್ಲರಿಗೂ ದೊರಕಬೇಕಾದ ಜೀವಪೋಷಕ ಅನ್ನವು ಇಂದು ಬಿಕರಿಯಾಗುವ ಮೋಜಿನ ಅಥವಾ ಆಮೋದದ ಸರಕಾಗಿ ಮಾರ್ಪಾಟಾಗಿರುವುದೂ ಇರಬಹುದು. ಇಂಥ ಸರಕು ವಿಕ್ರಯವಾಗುವ ತಾಣವಾದರೂ ನಮ್ಮದೇ ಚಪಲ ನಾಲಗೆಯಲ್ಲದೇ ಮತ್ತಾವುದು? ಎಷ್ಟೇ ಬಗೆಬಗೆಯ ಆಹಾರವನ್ನು ಅನ್ವೇಷಿಸಿದರೂ ಹೊಸರುಚಿಗಾಗಿ ಹಾತೊರೆಯುತ್ತ ಬುವಿಯನ್ನೇ ನೆಕ್ಕಿ ನೊಣೆಯಬಯಸುವ ನಮ್ಮ ಹುಸಿ ಹಸಿವು ತಣಿದಿದೆಯೇ? ದಿಟದ ಹಸಿವು ಹುಟ್ಟದೆಯೇ ಅನ್ನಕ್ಕೆ ರುಚಿ ಮೂಡುವುದಾದರೂ ಸಾಧ್ಯವಿದೆಯೇ? ಇದೇ ಅರಿವಿನಿಂದ, ಎಲ್ಲ ರುಚಿಗಳ ಉಗಮಸ್ಥಾನವಾಗಿರುವ ಜಠರಾಗ್ನಿಯ ಪ್ರಜ್ವಲನಕ್ಕಾಗಿ ಎಲ್ಲ ಸಂಸ್ಕೃತಿಗಳಲ್ಲಿಯೂ ಉಪವಾಸ ಮಾಡುವ ಅಥವಾ ನಿರಾಹಾರವ್ರತಗಳನ್ನು ಹಿಡಿಯುವ ಪರಿಕಲ್ಪನೆ ಹುಟ್ಟಿಕೊಂಡಿರಬೇಕು. ಮನುಷ್ಯನ ಅವಿವೇಕದಿಂದ ಹುಟ್ಟುವ ಅಸಮತೋಲನವನ್ನು ಸಂಸ್ಕೃತಿಯು ಸರಿದೂಗಿಸಿಕೊಳ್ಳುವ ಒಂದು ಬಗೆ ಹೀಗೆಯೋ ಏನೋ! ಸಮತೋಲನ ಕಾಪಾಡುವ ಶಕ್ತಿ ಸಂಸ್ಕೃತಿಗಿದೆಯೆಂದೆನಷ್ಟೆ. ಉಣ್ಣುವ ಮುನ್ನ ಹಂಚಬೇಕು ಎಂಬ ವಿವೇಕವನ್ನು ಮಾನವನಿಗೆ ಸಂಸ್ಕೃತಿಯು ನೀಡುತ್ತದೆ. ಅಂಥೊಂದು ಮೌಲ್ಯವನ್ನು ಮಾನವನಲ್ಲಿ ಊರುವ ಮೂಲಕ ಅನ್ನವನ್ನು ಎಲ್ಲಕ್ಕೂ ದೊರಕಿಸಿಕೊಡಲು ಸಂಸ್ಕೃತಿಯು ಹವಣಿಸುತ್ತದೆ.

ಅದೇನೇ ಇರಲಿ, ಸೃಷ್ಟಿಯಲ್ಲಿ ಒಂದು ಪಾತ್ರದಿಂದ ಮತ್ತೊಂದು ಪಾತ್ರಕ್ಕೆ ಅನ್ನವಾಗಿ ಚೈತನ್ಯವನ್ನು ಪ್ರವಹಿಸಿ ಎಲ್ಲವನ್ನೂ ಪೋಷಿಸಿ ಪೊರೆಯುತ್ತಿರುವ ತತ್ತ್ವವೇ ಅನ್ನಸ್ವರೂಪಿಯಾಗಿರುವ ಭಗವಂತ. ಆಹಾರವನ್ನು ಸೇವಿಸುವ ಹೊತ್ತಿನಲ್ಲಿ ಭಗವಂತನನ್ನೇ ಧರಿಸುತ್ತಿರುವ ಭಾವ ಜಾಗೃತವಾಗಿದ್ದಲ್ಲಿ ಅನ್ನನಿಂದೆಯಾಗಲಿ, ತಿರಸ್ಕಾರವಾಗಲಿ ನಮ್ಮಲ್ಲಿ ತಲೆದೋರಲು ಕಾರಣವಿರುವುದಿಲ್ಲ. ಬದಲಿಗೆ ಮೂಡುವ ಕೃತಜ್ಞತಾಭಾವವು ನಮ್ಮನ್ನು ವಿನಮ್ರರನ್ನಾಗಿ ಮಾಡಬಹುದು; ಸೃಷ್ಟಿ ಸಮಸ್ತದಲ್ಲಿನ ಅನ್ನವೈವಿಧ್ಯವನ್ನು ಗೌರವಾದರದಿಂದ ಕಾಣುವ ದೃಷ್ಟಿಯನ್ನು ನಮಗೆ ನೀಡಿ ನಮ್ಮನ್ನು ಧನ್ಯರನ್ನಾಗಿಸಬಹುದು!

❖

ಕೃಷಿ ವಲಯದ ಚೇತರಿಕೆಗೆ ಮೂಲಸೌಕರ್ಯ ಕ್ಷೇತ್ರದಲ್ಲಿ ಹೂಡಿಕೆ ಅಗತ್ಯ

ವಿವಿಯನ್ ಲೊಬೊ, ನಿರ್ದೇಶಕರು, ಲೀಡರ್ಸ್ ಇನ್‌ಸ್ಟಿಟ್ಯೂಟ್. ಇವರು ಆಸ್ಟ್ರೇಲಿಯಾದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದು, ಕೃಷಿ ಉದ್ಯಮದಲ್ಲಿ ಪದವಿ ಹಂತದ ಕೋರ್ಸ್ ನೀಡುತ್ತಿದ್ದಾರೆ. ಭಾರತದಲ್ಲಿ ಕೃಷಿ ವಲಯ ಮತ್ತು ಇಲ್ಲಿರುವ ವಿಪುಲ ಅವಕಾಶಗಳ ಸದ್ಬಳಕೆಗೆ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಅವರು ಮಾತನಾಡಿದ್ದಾರೆ.

- **ನಿಮ್ಮ ಸಂಸ್ಥೆ ನೀಡುತ್ತಿರುವ ಕೃಷಿ ಉದ್ಯಮ ಕೋರ್ಸ್, ಪ್ರಗತಿಶೀಲ ಕೃಷಿಕರನ್ನು ಹೇಗೆ ಸಬಲರಾಗಿಸಲಿದೆ?**

ಆಸ್ಟ್ರೇಲಿಯಾವು ಪ್ರಸ್ತುತ ಕೃಷಿ ಉದ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಇದರರ್ಥ ಹೊಸ ಆವಿಷ್ಕಾರ ಮತ್ತು ಅವಕಾಶಗಳ ಜೊತೆಗೆ ಅದು ಬೆಳೆಯುತ್ತಿದೆ. ವಿದ್ಯಾರ್ಥಿಗಳು ವಿವಿಧ ಲಿಖಿತ ಮತ್ತು ಪ್ರಾಯೋಗಿಕ ಕಲಿಕೆಗೆ ಮುಕ್ತರಾಗುತ್ತಾರೆ. ಕೋರ್ಸ್‌ನಲ್ಲಿ ಕಲಿತಿದ್ದನ್ನು ಅವರು ತಮ್ಮ ವಾಸಸ್ಥಳದ ಪರಿಸರದಲ್ಲಿಯೂ ಜಾರಿಗೊಳಿಸುತ್ತಾರೆ. ಲೀಡರ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೋರ್ಸ್ ಅನ್ನು ಪ್ರಾಯೋಗಿಕ ದೃಷ್ಟಿಕೋನದಿಂದ ರೂಪಿಸಲಾಗುತ್ತದೆ. ಕೃಷಿ ಭೂಮಿಗೆ ಭೇಟಿ, ವಿಚಾರಗೋಷ್ಠಿಗಳು, ಸಮಗ್ರ ಕಲಿಕಾ ಕ್ರಮಗಳ ಮೂಲಕ ಅವರು ಕಲಿತಿದ್ದನ್ನು ನಿರೂಪಿಸುವ ಅವಕಾಶವಿದೆ. ಕೋರ್ಸ್ ಮುಗಿಯುವ ವೇಳೆಗೆ ವಿದ್ಯಾರ್ಥಿಗಳು ಉದ್ಯೋಗ ಆರಂಭಿಸಲು ಸಜ್ಜಾಗಿರುತ್ತಾರೆ.

- **ಈ ಕೋರ್ಸ್ ಭಾರತದ ಪರಿಸ್ಥಿತಿ, ಚಿತ್ರಣಕ್ಕೆ ಹೊಂದಿಕೆ ಆಗಲಿದೆಯೇ?**

ಕೃಷಿ ಉದ್ಯಮ ಎಂಬುದು ಎಂದಿಗೂ ಅಭಿವೃದ್ಧಿ ಹೊಂದುತ್ತಿರುವ ಹಾಗೂ ನಿರ್ಣಾಯಕವಾದ ಕ್ಷೇತ್ರ. ವಿಶ್ವದಾದ್ಯಂತ ಈಗ ಜನಸಂಖ್ಯೆಯು ಗಣನೀಯವಾಗಿ ಏರುತ್ತಿದೆ. ಅದೇ ಸಮಯದಲ್ಲಿ ಕೃಷಿಭೂಮಿಯ ಪ್ರಮಾಣವು ಕುಗ್ಗುತ್ತಿದೆ. ಕೇವಲ ಆಹಾರಕ್ಕಾಗಿ ಇರುವ ಬೇಡಿಕೆ ಮಾತ್ರವೇ ಹೆಚ್ಚುತ್ತಿದೆ. ಇದರರ್ಥ ನಾವು ಲಭ್ಯ ಸಂಪನ್ಮೂಲದಲ್ಲಿಯೇ ಆಹಾರದ ಬೇಡಿಕೆಯನ್ನು ಈಡೇರಿಸಲು ಹೊಸತನದ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂಬುದು. ಭಾರತವು ಪ್ರಸ್ತುತ ಸ್ಥಿತಿಯಲ್ಲಿಯೇ ಹಸಿರುಕ್ರಾಂತಿ ಅಭಿಯಾನದ ಮೂಲಕ ಸ್ವಾವಲಂಬನೆಯನ್ನು ಸಾಧಿಸಿರುವ ನಿದರ್ಶನವನ್ನು ಹೊಂದಿದೆ. ಕೃಷಿ ಉದ್ಯಮವು ಒಟ್ಟಾರೆಯಾಗಿ ಸ್ಥಳೀಯವಾಗಿ, ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ಜಾಗತಿಕ ಮಟ್ಟದಲ್ಲಿ ಗಣನೀಯವಾದ ಕೊಡುಗೆಯನ್ನು ನೀಡಲಿದೆ.

- **ಕೃಷಿ ಉದ್ಯಮಕ್ಕೆ ಪೂರಕವಾಗಿ ನೀತಿಗಳಲ್ಲಿ ಆಗಬೇಕಾದ ಬದಲಾವಣೆಗಳಾವುವು?**

ನೀತಿಗಳಲ್ಲಿ ಈಗಾಗಲೇ ಅಗಾಧ ಬದಲಾವಣೆಗಳಾಗಿವೆ. ನನ್ನ ಅಭಿಪ್ರಾಯದಲ್ಲಿ, ಪ್ರಸ್ತುತ ಸಲಹೆ ಮತ್ತು ಸಮಾಲೋಚನೆ ಹಾಗೂ ಸಂಪರ್ಕದ ಕೊರತೆ ಇದೆ. ಇದು, ಒಟ್ಟಾರೆಯಾಗಿ ವಿಷಯ ಅರ್ಥವಾಗದಿರುವುದು ಅಥವಾ ತಪ್ಪುಗ್ರಹಿಕೆಗೆ ಕಾರಣವಾಗಿದೆ. ಕೃಷಿಕರು ದೇಶದ ಬೆನ್ನೆಲುಬು. ಅದೇ ಸಂದರ್ಭದಲ್ಲಿ ಎಲ್ಲ ಕೃಷಿಕರಿಗೂ ಶೈಕ್ಷಣಿಕ ಹಿನ್ನೆಲೆ ಇರುವುದಿಲ್ಲ ಎಂಬುದನ್ನೂ ಗಮನಿಸಬೇಕು. ದೊಡ್ಡ ಪ್ರಮಾಣದಲ್ಲಿ ಬದಲಾವಣೆಗಳನ್ನು ಜಾರಿಗೊಳಿಸಿದಾಗ ಇದನ್ನು ಅರ್ಥಮಾಡಿಕೊಳ್ಳುವುದು ಮತ್ತು ಈ ಬದಲಾವಣೆಗಳನ್ನು ಕೆಳಹಂತದಲ್ಲಿ ಮನವರಿಕೆ ಮಾಡಿಕೊಡುವುದು ಕೂಡಾ ಮುಖ್ಯವಾಗಲಿದೆ. ಇದರಿಂದ, ವಾಸ್ತವ ಸ್ಥಿತಿಯಲ್ಲಿ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವ ಜೊತೆಗೆ ಎಲ್ಲ ಭಾಗಿದಾರರಿಗೂ ಪರಿಣಾಮಕಾರಿಯಾಗಿ ತಿಳಿಸುವುದು ಸಾಧ್ಯವಾಗಲಿದೆ.

- **ಬದಲಾವಣೆ ತರಲು ಲೀಡರ್ಸ್ ಇನ್‌ಸ್ಟಿಟ್ಯೂಟ್‌ನ ಯೋಜನೆಗಳೇನು?**

ಲೀಡರ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ನಮ್ಮ ಪ್ರಾಥಮಿಕ ಗುರಿಯು ಕೇವಲ ವಿದ್ಯಾರ್ಥಿಗಳನ್ನು ಪದವೀಧರರಾಗಿಸುವುದಷ್ಟೇ ಅಲ್ಲ, ಅವರು ತಾವು ಪಡೆದ ಕೌಶಲ, ಜ್ಞಾನವನ್ನು ತಮ್ಮ ಆಯ್ಕೆಯ ಕ್ಷೇತ್ರದಲ್ಲಿ ಜಾರಿಗೊಳಿಸಲು ಶಕ್ತರಾಗಿಸುವುದೇ ಆಗಿದೆ. ಕೇವಲ ಪದವಿ ಪಡೆದರೆ ಏನೂ ಪರಿಣಾಮವಾಗದು. ನಮ್ಮ ಗುರಿ 'ಪರಿಣಾಮಕ್ಕೆ ಸಿದ್ಧರಾಗಿರಿ. ನಿಮ್ಮ ಚಿಂತನೆ ಮತ್ತು ಕ್ರಿಯೆಯಲ್ಲಿ ಅದು ಪ್ರತಿಧ್ವನಿಸಲಿ' ಎಂಬುದು. ಸಂಸ್ಥೆಯ ಸ್ಥಾಪಕರಾದ ರೆವರೆಂಡ್ ಡಾ. ಬರ್ನಾಡ್ ಮಲಿಕ್ ಅವರು ದೂರದೃಷ್ಟಿ ಉಳ್ಳವರಷ್ಟೇ ಅಲ್ಲ. ಭವಿಷ್ಯದ ಪೀಳಿಗೆಗೆ ಅತ್ಯುತ್ತಮವಾದುದನ್ನು ಮಾಡಬೇಕು ಎಂಬ ಚಿಂತನೆ ಸಾಕಾರಗೊಳಿಸಿದವರು. ಇನ್ನೊಬ್ಬರಿಗೆ ಪ್ರೇರೇಪಣೆ ನೀಡುವ ಅವರ ಸಾಮರ್ಥ್ಯದಿಂದ ಈ ಕೋರ್ಸ್‌ಗಳು ವಿಭಿನ್ನವಷ್ಟೇ ಅಲ್ಲ; ಪ್ರಾಯೋಗಿಕವಾಗಿದ್ದು, ಸರ್ವರಿಗೂ ಎಟುಕುವಂತೆ ಸಜ್ಜಾಗಿದೆ.

- **ಹೊಸ ಉತ್ಸಾಹಿ ಮನಸ್ಸುಗಳಿಗೆ ನಿಮ್ಮ ಸಲಹೆ ಏನು?**

ನನ್ನ ಬಹು ಜನಪ್ರಿಯವಾದ ಹೇಳಿಕೆ ಎಂದರೆ: ನಂಬಿಕೆ ಮತ್ತು ಶ್ರಮ ಇದ್ದಲ್ಲಿ ನೀವು ಏನು ಬೇಕಾದರೂ ಸಾಧಿಸಬಹುದು. ಈ ಪೈಕಿ ಒಂದನ್ನು ಕಳೆದುಕೊಂಡರೂ ಅದಕ್ಕೆ ಕ್ಷಮಾಪಣೆ ಇರುವುದಿಲ್ಲ. ಹೌದು ಅಥವಾ ಇಲ್ಲ ಏನೇ ಇರಲಿ. ನೀವು ಎದುರಾಗುವ ವ್ಯಕ್ತಿ ನಿಮ್ಮ ಆ ನಗುವಿಗಾಗಿ ಎಂದಿಗೂ ನೆನಪಿನಲ್ಲಿ ಇಡುತ್ತಾರೆ. ನಿಮ್ಮ ಪ್ರಯಾಣವನ್ನು ಆರಂಭಿಸಲು ಉತ್ತಮ ನಗರಕ್ಕಾಗಿ ಹಾತೊರೆಯಬೇಡಿ. ನೆನಪಿನಲ್ಲಿ ಉಳಿಯುವುದು ನೀವು ಹೇಗೆ ನೆರವು ಕೇಳಿದಿರಿ ಮತ್ತು ದೊರೆತ ಮಾರ್ಗದರ್ಶನದಲ್ಲಿ ಹೇಗೆ ಮುನ್ನಡೆದಿರಿ ಎಂಬುದಷ್ಟೇ. ಕೆಲವೊಮ್ಮೆ ಪ್ರಯಾಣ ಸುದೀರ್ಘ ಎನ್ನಿಸಬಹುದು. ಆದರೆ, ಚೇತೋಹಾರಿ ಆಗಿರುತ್ತದೆ. ನಾನು ನನ್ನ ಶಾಲೆ ಸೇಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್‌ಗೆ ಆಭಾರಿಯಾಗಿದ್ದೇನೆ. ಅದು, ನನಗೆ ಅಂಕಪಟ್ಟಿಯಲ್ಲಿರುವ ಅಂಕಗಳನ್ನು ಮೀರಿದ ಶಿಕ್ಷಣವನ್ನು ನೀಡಿದೆ. ಒಟ್ಟಾರೆಯಾಗಿ ಅದು ನನ್ನ ವ್ಯಕ್ತಿತ್ವವನ್ನು ರೂಪಿಸಿದೆ.




ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕಣ್ಣಿನ ಕಡೆಗೆ ಗಮನ ಇರಲಿ

ಡಾ. ವಿಜಯಲಕ್ಷ್ಮಿ ಪಿ.

ಈಗ ನಾವು ನಮ್ಮ ಕಣ್ಣುಗಳನ್ನು ಹೆಚ್ಚು ದುಡಿಸಿಕೊಳ್ಳುತ್ತಿದ್ದೇವೆ. ಮೊಬೈಲನ್ನು ಪದೇ ಪದೇ ನೋಡುತ್ತಿರುವುದು, ಹತ್ತಿರ ಹಿಡಿದು ನೋಡುವುದು, ಮಲಗಿ ನೋಡುವುದು, ಕತ್ತಲಲ್ಲಿ ಎಂದರೆ ಮುಸುಕು ಹಾಕಿಕೊಂಡು ಮೊಬೈಲಿನ ಬೆಳಕಿನಲ್ಲೇ ನೋಡುವುದು, ಚಲನಚಿತ್ರಗಳ ನಿರಂತರ ವೀಕ್ಷಣೆ, ಅತಿಯಾದ ಅಂತರ್ಜಾಲದ ಉಪಯೋಗಗಳು, ಮೊಬೈಲ್– ಕಂಪ್ಯೂಟರ್ ಗೇಮ್‌ಗಳ ಗೀಳು – ಇವು ಕಣ್ಣಿನ ನರಮಂಡಲಗಳ ಮೇಲೆ ದುಷ್ಪರಿಣಾಮವನ್ನು ಬೀರುತ್ತವೆ. ಈ ಸಮಸ್ಯೆಗಳಿಗೆ ಪರಿಹಾರ ಏನು?

ಪೂರ್ಣ ಲೇಖನಕ್ಕಾಗಿ prajavani.net ನೋಡಿ



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 1: ಸಮಾಂತರ ಶ್ರೇಢಿಗಳು

ಗಣಿತ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು

- ಮೊದಲ ಪದವನ್ನು ಹೊರತುಪಡಿಸಿ ಪ್ರತಿಯೊಂದು ಪದವನ್ನು ಪಡೆಯಲು ಅದರ ಹಿಂದಿನ ಪದಕ್ಕೆ ಒಂದು ನಿರ್ದಿಷ್ಟ ಸಂಖ್ಯೆಯನ್ನು ಕೂಡಿಸುವುದರಿಂದ ಪಡೆಯುವ ಸಂಖ್ಯಾ ಪಟ್ಟಿಯೇ ಸಮಾಂತರ ಶ್ರೇಢಿ.

ಆ ಸ್ಥಿರ ಸಂಖ್ಯೆಯನ್ನು ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ ಎನ್ನುತ್ತಾರೆ. ಇದು ಧನ, ಋಣ ಅಥವಾ ಶೂನ್ಯ ಆಗಿರಬಹುದು ಎಂಬುದನ್ನು ನೆನಪಿಟ್ಟುಕೊಳ್ಳಿ.

ಸಮಾಂತರ ಶ್ರೇಢಿಯ ಮೊದಲ ಪದ a_1, ಎರಡನೇ ಪದ a_2.... nನೇ ಪದ a_n, ಸಾಮಾನ್ಯ ವ್ಯತ್ಯಾಸ d ಆಗಿರಲಿ ಆಗ ಸಮಾಂತರ ಶ್ರೇಢಿಯು $a_1, a_2, a_3 \ldots\ldots a_n$ ಆಗಿರುತ್ತದೆ.

ಆದ್ದರಿಂದ $a_2 - a_1 = a_3 - a_2 = \ldots\ldots = a_n - a_{n-1} = d$

$a, a + d, a + 2d, a + 3d \ldots\ldots$

ಇದು ಸಮಾಂತರ ಶ್ರೇಢಿಯನ್ನು ಸೂಚಿಸುತ್ತದೆ. ಇದರಲ್ಲಿ a ಮೊದಲ ಪದ, d ಸಾಮಾನ್ಯ ವ್ಯತ್ಯಾಸ. ಇದು ಸಮಾಂತರ ಶ್ರೇಢಿಯ ಸಾಮಾನ್ಯ ರೂಪವಾಗಿದೆ.

ಉದಾಹರಣೆ : $\frac{3}{2}, \frac{1}{2}, -\frac{1}{2}, -\frac{3}{2} \ldots\ldots$

ಈ ಸಮಾಂತರ ಶ್ರೇಢಿಯ ಮೊದಲ ಪದ a ಮತ್ತು ಸಾಮಾನ್ಯ ವ್ಯತ್ಯಾಸ d ಗಳನ್ನು ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $a = \frac{3}{2}$, $d = \frac{1}{2} - \frac{3}{2} = -1$

ಸಂಖ್ಯೆಗಳು ಸಮಾಂತರ ಶ್ರೇಢಿಯಲ್ಲಿವೆ ಎಂದು ನಮಗೆ ತಿಳಿದಿದ್ದಲ್ಲಿ, ಯಾವುದೇ ಎರಡು ಅನುಕ್ರಮ ಪದಗಳನ್ನು ಉಪಯೋಗಿಸಿ d ಕಂಡುಹಿಡಿಯಬಹುದು.

ಸಮಾಂತರ ಶ್ರೇಢಿಯ n ನೇ ಪದ: ಸಮಾಂತರ ಶ್ರೇಢಿಯ ಮೊದಲ ಪದ a ಸಾಮಾನ್ಯ ವ್ಯತ್ಯಾಸ d ಆದಾಗ ಅದರ nನೇ ಪದವು

$$a_n = a+(n-1)d.$$

ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ : ಮೊದಲ ಪದ a ಸಾಮಾನ್ಯ ವ್ಯತ್ಯಾಸ d ಕೊಟ್ಟಾಗ

$$S = \frac{n}{2}[2a + (n - 1)d]$$

$$S = \frac{n}{2}[a + l]$$

ಮೊದಲ ಪದ a ಮತ್ತು ಕೊನೆಯ ಪದ l ಕೊಟ್ಟಾಗ

ಪ್ರಶ್ನೋತ್ತರಗಳು

1. **ಒಂದು ಸಮಾಂತರ ಶ್ರೇಢಿಯ n ನೇ ಪದ (7n + 1) ಆದಾಗ, ಅದರ 5ನೇ ಪದ**

ಎ. 36 ಬಿ. 35 ಸಿ. 13 ಡಿ. 8

ಉತ್ತರ: ಎ. 36

2. **10, 7, 4 ..... ಈ ಸಮಾಂತರ ಶ್ರೇಢಿಯ 30ನೇ ಪದ**

ಎ. 97 ಬಿ. 77 ಸಿ. -77 ಡಿ. -87

ಉತ್ತರ: ಸಿ. -77

3. **ಒಂದು ಸಮಾಂತರ ಶ್ರೇಢಿಯ 11ನೇ ಪದ 38, 16ನೇ ಪದ 73 ಆದರೆ 31ನೇ ಪದವನ್ನು ಕಂಡುಹಿಡಿಯಿರಿ.**

ಪರಿಹಾರ: p = 16, q = 11

$a_{16} = 73$; $a_{11} = 38$, $a_{31} = ?$

$d = \frac{a_p - a_q}{p - q}$

$d = \frac{a_{16} - a_{11}}{16 - 11} = \frac{73 - 38}{5} = \frac{35}{5} = 7$

$a_n = a_p + (n - p)d$

$a_{31} = a_{16} + (31 - 16)7$

$a_{31} = 73 + (15)7$

$a_{31} = 73 + 105$

$a_{31} = 178$

4. **6ರಿಂದ ಭಾಗಿಸಲ್ಪಡುವ ಮೊದಲ 40 ಧನಾತ್ಮಕ ಪೂರ್ಣಾಂಕಗಳ ಮೊತ್ತವೇನು?**

ಪರಿಹಾರ: 6ರಿಂದ ಭಾಗವಾಗುವ ಧನ ಸಂಖ್ಯೆಗಳು

6, 12, 18, 24 ...

ಸಾಮಾನ್ಯ ವ್ಯತ್ಯಾಸ 6 ಮತ್ತು ಮೊದಲ ಪದ 6

$a = 6$, $d = 6$, $S_{40} = ?$

$S_n = \frac{n}{2}[2a + (n - 1)d]$

$S_{40} = \frac{40}{2}[2(6) + (40 - 1)6]$

$= 20[12 + (39)(6)]$

$= 20(12 + 234) = 20 \times 246$

$= \mathbf{4920}$

5. **ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ ಮತ್ತು ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.**

$a = 5, l = 45, S_n = 400, n = ?, d = ?$

$S_n = \frac{n}{2}(a + l)$

$400 = \frac{n}{2}(5 + 45)$

$400 = \frac{n}{2}(50)$

$400 = 25n$

n = 16 (ಪದಗಳ ಸಂಖ್ಯೆ 16)

$l = a + (n - 1)d$

$45 = 5 + (16 - 1)d$

$40 = 15d$

$d = \frac{40}{15} = \frac{8}{3}$ (ಸಾಮಾನ್ಯ ವ್ಯತ್ಯಾಸ $\frac{8}{3}$)

ಶ್ರೀನಿವಾಸ ಡಿ. ಶೆಟ್ಟಿ,
ಶಿಕ್ಷಣ ಸಂಯೋಜಕರು,
ಬಿಇಒ ಕಚೇರಿ,
ಅರಕಲಗೂಡು

ಆಂಗ್ಲಭಾಷೆಯಲ್ಲಿ ಗಣಿತ ವಿಷಯದ 'ಅರ್ಥ್‌ಮೆಟಿಕ್ ಪ್ರೊಗ್ರೆಸ್' ಅಧ್ಯಾಯಕ್ಕಾಗಿ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3I6Ughe

ಘನಸ್ಥಿತಿ

ರಸಾಯನ ಶಾಸ್ತ್ರ

ದ್ವಿತೀಯ ಪಿಯುಸಿ


- ದ್ರವ ಮತ್ತು ಅನಿಲಗಳು ಅವುಗಳ ಹರಿಯುವ ಸಾಮರ್ಥ್ಯವನ್ನು ಹೊಂದಿವೆ. ಇವುಗಳಲ್ಲಿ ಅಣುಗಳು ಸರಿಸಲು ಮುಕ್ತವಾಗಿರುವುದು ಈ ಎರಡೂ ಸ್ಥಿತಿಗಳ ಹರಿಯುವಿಕೆಗೆ ಕಾರಣವಾಗಿದೆ. ಇದಕ್ಕೆ ತದ್ವಿರುದ್ಧವಾಗಿ, ಘನ ವಸ್ತುಗಳಲ್ಲಿರುವ ಘಟಕ ಕಣಗಳು ನಿಶ್ಚಿತ ಸ್ಥಾನಗಳನ್ನು ಹೊಂದಿವೆ ಮತ್ತು ಅವುಗಳ ಸರಾಸರಿ ಸ್ಥಾನಗಳನ್ನು ಮಾತ್ರ ಆವರಿಸುತ್ತವೆ. ಇದು ಘನವಸ್ತುಗಳಲ್ಲಿನ ದೃಢತೆಯನ್ನು ವಿವರಿಸುತ್ತದೆ. ಸ್ಫಟಿಕೀಯ ಘನವಸ್ತುಗಳಲ್ಲಿ, ಘಟಕ ಕಣಗಳನ್ನು ನಿರ್ದಿಷ್ಟ ಕ್ರಮದಲ್ಲಿ ಜೋಡಿಸಲಾಗುತ್ತದೆ.

ಘನ ಸ್ಥಿತಿಯ ವಿಶಿಷ್ಟ ಗುಣಲಕ್ಷಣಗಳು

1) ಅವುಗಳು ನಿರ್ದಿಷ್ಟ ಪ್ರಮಾಣದ ದ್ರವ್ಯರಾಶಿ, ಗಾತ್ರ ಮತ್ತು ಆಕಾರವನ್ನು ಹೊಂದಿವೆ
2) ಅಂತರಣ್ವಿಕ ದೂರಗಳು ಕಡಿಮೆ ಇರುತ್ತದೆ (Intermolecular distance are short)
3) ಅಂತರಣ್ವಿಕ ಬಲಗಳು ಪ್ರಬಲವಾಗಿದೆ (Intermolecular force are strong)
4) ಅವುಗಳ ಘಟಕ ಕಣಗಳು (ಪರಮಾಣುಗಳು, ಅಣುಗಳು ಅಥವಾ ಅಯಾನುಗಳು) ನಿಶ್ಚಿತ ಸ್ಥಾನಗಳನ್ನು ಹೊಂದಿವೆ ಮತ್ತು ಅವುಗಳು ಸರಾಸರಿ ಸ್ಥಾನದಲ್ಲಿ ಓಡಾಡುತ್ತಿರುತ್ತವೆ
5) ಅವು ಅಸಂಕುಚಿತ ಮತ್ತು ದೃಢವಾಗಿರುತ್ತದೆ.

- ಘನವಸ್ತುಗಳನ್ನು ತಮ್ಮ ಘಟಕ ಕಣಗಳ ಜೋಡಣೆಯಲ್ಲಿ ಪ್ರಸ್ತುತವಾದ ಕ್ರಮದ ಸ್ವರೂಪದ ಆಧಾರದ ಮೇಲೆ ಸ್ಫಟಿಕೀಯ ಅಥವಾ ಅಸ್ಫಟಿಕ ಎಂದು ವಿಂಗಡಿಸಬಹುದು. ಸ್ಫಟಿಕದಂಥ ಘನವು ಸಾಮಾನ್ಯವಾಗಿ ದೊಡ್ಡ ಸಂಖ್ಯೆಯ ಸಣ್ಣ ಸ್ಫಟಿಕಗಳನ್ನು ಹೊಂದಿರುತ್ತದೆ, ಅವುಗಳಲ್ಲಿ ಪ್ರತಿಯೊಂದೂ ವಿಶಿಷ್ಟ ಲಕ್ಷಣದ ಜ್ಯಾಮಿತೀಯ ಆಕಾರವನ್ನು ಹೊಂದಿರುತ್ತವೆ. ಸ್ಫಟಿಕದಲ್ಲಿ ಘಟಕ ಕಣಗಳ ಜೋಡಣೆಯು ಶ್ರೇಣಿಯಾಗಿರುತ್ತದೆ. ಇದು ದೀರ್ಘ ವ್ಯಾಪ್ತಿಯ ಕ್ರಮವನ್ನು ಹೊಂದಿದೆ, ಅಂದರೆ, ನಿಯಮಿತವಾಗಿ ಇಡೀ ಸ್ಫಟಿಕದ ಮೇಲೆ ಪುನರಾವರ್ತಿಸುವ ಕಣಗಳ ಜೋಡಣೆಯ ನಿಯಮಿತ ಮಾದರಿ ಇರುತ್ತದೆ. ಸೋಡಿಯಂ ಕ್ಲೋರೈಡ್ ಮತ್ತು ಸ್ಫಟಿಕ ಶಿಲೆಗಳು ಸ್ಫಟಿಕೀಯ ಘನಗಳ ವಿಶಿಷ್ಟ ಉದಾಹರಣೆಗಳಾಗಿವೆ
- ಗಾಜು, ರಬ್ಬರ್ ಮತ್ತು ಪ್ಲಾಸ್ಟಿಕ್‌ಗಳು ಅಸ್ಫಟಿಕ ಘನಗಳ ವಿಶಿಷ್ಟ ಉದಾಹರಣೆಗಳಾಗಿವೆ.
- ಸ್ಫಟಿಕದ ಘನಗಳು ತೀಕ್ಷ್ಣವಾದ ಕರಗುವ ಬಿಂದುವನ್ನು ಹೊಂದಿರುತ್ತವೆ. ಆದರೆ ಅಸ್ಫಟಿಕೀಯ ಘನಗಳು ವ್ಯಾಪ್ತಿ ತಾಪಮಾನದಲ್ಲಿ ಮೃದುವಾಗುತ್ತವೆ ಮತ್ತು ವಿವಿಧ ಆಕಾರಗಳಿಗೆ ಮಾರ್ಪಾಡು ಮಾಡಬಹುದು. ಕೆಲವು ತಾಪಮಾನದಲ್ಲಿ ಕಾಯಿಸಿ ಅಸ್ಫಟಿಕೀಯ ಘನಗಳನ್ನು ಸ್ಫಟಿಕಘನಗಳಾಗಿ ಬದಲಾಯಿಸಬಹುದು.
- ಹಳೆಯ ಕಟ್ಟಡಗಳ ಕಿಟಕಿಗಳಿಗೆ ಅಥವಾ ಬಾಗಿಲುಗಳಿಗೆ ನಿಗದಿಪಡಿಸಿದ ಗಾಜಿನ ಫಲಕಗಳನ್ನು ಮೇಲ್ಭಾಗಕ್ಕಿಂತಲೂ ಕೆಳಭಾಗದಲ್ಲಿ ಸ್ವಲ್ಪ ದಪ್ಪವಾಗಿರುತ್ತದೆ. ಇದಕ್ಕೆ ಕಾರಣ ಗಾಜು ನಿಧಾನವಾಗಿ ಕೆಳಭಾಗಕ್ಕೆ ಹರಿಯುತ್ತದೆ ಮತ್ತು ಕೆಳಭಾಗವನ್ನು ಸ್ವಲ್ಪ ದಪ್ಪವಾಗಿಸುತ್ತದೆ.
- ಕಬ್ಬಿಣ, ತಾಮ್ರ ಮತ್ತು ಬೆಳ್ಳಿಯಂತಹ ಎಲ್ಲಾ ಲೋಹೀಯ ಧಾತುಗಳು ಹಾಗೂ ಅಲೋಹಗಳಾದ ಸಲ್ಫರ್, ಫಾಸ್ಫರಸ್ ಮತ್ತು ಅಯೋಡಿನ್ ಮತ್ತು ಸಂಯುಕ್ತಗಳಾದ ಸೋಡಿಯಂ ಕ್ಲೋರೈಡ್, ಸತು ಸಲ್ಫೈಡ್, ಮತ್ತು ನ್ಯಾಫ್ಥಲೀನ್ ಇವುಗಳು ಸ್ಫಟಿಕೀಯ ಘನದ ರೂಪಗಳಾಗಿವೆ.
- ಸ್ಫಟಿಕೀಯ ಘನವಸ್ತುಗಳನ್ನು ಅವುಗಳೊಳಗೆ ಕಾರ್ಯನಿರ್ವಹಿಸುವ ಅಂತರಣ್ವಿಕ ಬಲದ ಸ್ವಭಾವದ ಆಧಾರದ ಮೇಲೆ ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಇವುಗಳು ಆಣ್ವಿಕ, ಅಯಾನಿಕ್, ಲೋಹೀಯ ಮತ್ತು ಸಹವೆಲೆನ್ಸಿಯಾ ಘನ ವಸ್ತುಗಳು.

1 **ಧ್ರುವೀಯವಲ್ಲದ ಆಣ್ವಿಕ ಘನವಸ್ತುಗಳು :** ಅವುಗಳು ಪರಮಾಣುಗಳಾದ ಉದಾಹರಣೆಗೆ ಆರ್ಗನ್ ಮತ್ತು ಹೀಲಿಯಂ ಅಥವಾ ಧ್ರುವೀಯ ಸಹವೇಲೆನ್ಸಿಯ ಬಂಧಗಳಿಂದ ಅಣುಗಳಾದ ಉದಾಹರಣೆಗೆ H_2, Cl_2 ಮತ್ತು I_2 ಗಳನ್ನು ಒಳಗೊಂಡಿರುತ್ತದೆ. ಈ ಘನವಸ್ತುಗಳಲ್ಲಿ, ಪರಮಾಣುಗಳು ಅಥವಾ ಕಣಗಳನ್ನು ದುರ್ಬಲ ಪ್ರಸರಣ ಬಲ ಅಥವಾ ಲಂಡನ್ ಬಲಗಳು ಹಿಡಿದಿಟ್ಟಿರುತ್ತವೆ ಈ ಘನವಸ್ತುಗಳು ಮೃದುವಾಗಿದ್ದು ಮತ್ತು ವಿದ್ಯುತ್ ಅವಾಹಕಗಳಾಗಿರುತ್ತವೆ. ಅವು ಕಡಿಮೆ ಕರಗುವ ಬಿಂದುಗಳನ್ನು ಹೊಂದಿರುತ್ತವೆ ಮತ್ತು ಸಾಮಾನ್ಯವಾಗಿ ಕೊಠಡಿ ತಾಪಮಾನ ಮತ್ತು ಒತ್ತಡದಲ್ಲಿ ದ್ರವ ಅಥವಾ ಅನಿಲ ಸ್ಥಿತಿಯಲ್ಲಿರುತ್ತವೆ.



ಸಾಂದರ್ಭಿಕ ಚಿತ್ರ

2 **ಧ್ರುವೀಯ ಆಣ್ವಿಕ ಘನವಸ್ತುಗಳು:** HCl, SO_2 ಮುಂತಾದ ವಸ್ತುಗಳ ಅಣುಗಳು ಧ್ರುವೀಯ ಸಹ ವೆಲೆನ್ಸಿಯಾ ಬಂಧಗಳಿಂದ ರೂಪುಗೊಂಡಿವೆ. ಅಂತಹ ಘನವಸ್ತುಗಳಲ್ಲಿನ ಅಣುಗಳು ಒಂದಕ್ಕೊಂದು ಬಲವಾದ ದ್ವಿಧ್ರುವಿ-ದ್ವಿಧ್ರುವಿ ಪರಸ್ಪರ ಕ್ರಿಯೆಯಿಂದ ಕೂಡಿರುತ್ತವೆ. ಈ ಘನವಸ್ತುಗಳು ಮೃದುವಾಗಿದ್ದು ಮತ್ತು ವಿದ್ಯುತ್ ಅವಾಹಕಗಳಾಗಿವೆ. ಅವುಗಳ ಕರಗುವ ಬಿಂದುಗಳು ಅಧ್ರುವೀಯ ಆಣ್ವಿಕ ಘನವಸ್ತುಗಳಿಗಿಂತ ಹೆಚ್ಚಾಗಿರುತ್ತವೆ ಆದರೂ ಇವುಗಳಲ್ಲಿ ಹೆಚ್ಚಿನವು ಕೊಠಡಿ ತಾಪಮಾನ ಮತ್ತು ಒತ್ತಡದಲ್ಲಿ ಅನಿಲಗಳು ಅಥವಾ ದ್ರವಗಳಾಗಿವೆ. ಘನ SO_2 ಮತ್ತು ಘನ NH_3 ಗಳು, ಇಂತಹ ಘನಗಳಿಗೆ ಕೆಲವು ಉದಾಹರಣೆಗಳಾಗಿವೆ.

3 **ಹೈಡ್ರೋಜನ್ ಬಂಧಿತ ಆಣ್ವಿಕ ಘನವಸ್ತುಗಳು :** ಅಂತಹ ಘನಗಳ ಅಣುಗಳು H ಮತ್ತು F, O ಅಥವಾ N ಪರಮಾಣುಗಳ ನಡುವಿನ ಧ್ರುವೀಯ ಸಹ ವೆಲೆನ್ಸಿಯಾ ಬಂಧಗಳನ್ನು ಹೊಂದಿರುತ್ತವೆ. ಬಲವಾದ ಹೈಡ್ರೋಜನ್ ಬಂಧವು H_2Oನಂತಹ ಘನಗಳ ಅಣುಗಳನ್ನು ಬಂಧಿಸುತ್ತದೆ. ಅವುಗಳು ವಿದ್ಯುತ್ ಅವಾಹಕಗಳು. ಸಾಮಾನ್ಯವಾಗಿ ಅವು ಕೊಠಡಿ ಉಷ್ಣಾಂಶ ಮತ್ತು ಒತ್ತಡದಲ್ಲಿ ಬಾಷ್ಪಶೀಲ ದ್ರವ ಅಥವಾ ಮೃದು ಘನವಸ್ತುಗಳಾಗಿವೆ.

- **ಅಯಾನಿಕ್ ಘನವಸ್ತುಗಳು:-** ಅಯಾನುಗಳು ಅಯಾನಿಕ್ ಘನಗಳ ಘಟಕ ಕಣಗಳಾಗಿವೆ. ಅಂತಹ ಘನವಸ್ತುಗಳು ಮೂರು ಆಯಾಮದಲ್ಲಿ ಧನ ಮತ್ತು ಋಣ ಅಯಾನುಗಳು ಜೋಡಣೆಯಾದಾಗ ಏರ್ಪಡುತ್ತವೆ ಮತ್ತು ಬಲವಾದ ಕುಲಾಂಬಿಕ್ ಬಲದಿಂದ ಬಂಧಿಸಲ್ಪಟ್ಟಿರುತ್ತವೆ. ಈ ಘನ ವಸ್ತುಗಳು ಸ್ವಾಭಾವಿಕವಾಗಿ ಕಠಿಣ ಮತ್ತು ಪೆಡಸಾಗಿವೆ. ಅವು ಹೆಚ್ಚು ಕರಗುವ ಮತ್ತು ಕುದಿಯುವ ಬಿಂದುಗಳನ್ನು ಹೊಂದಿವೆ. ಅಯಾನುಗಳು ಮುಕ್ತವಾಗಿ ಚಲಿಸಲಾಗದೆ ಇರುವುದರಿಂದ, ಅವು ಘನ ಸ್ಥಿತಿಯಲ್ಲಿ ವಿದ್ಯುತ್ ಅವಾಹಕಗಳು. ಆದರೂ ಕರಗಿದ ಸ್ಥಿತಿಯಲ್ಲಿ ಅಥವಾ ನೀರಿನಲ್ಲಿ ಕರಗಿದಾಗ, ಅಯಾನುಗಳು ಚಲಿಸಲು ಮುಕ್ತವಾಗಿರುತ್ತವೆ ಮತ್ತು ಅವು ವಿದ್ಯುತ್ ವಾಹಕಗಳಾಗುತ್ತವೆ.


(ಮುಂದುವರಿಯುವುದು......)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ರಸಾಯನಶಾಸ್ತ್ರ ವಿಷಯದ 'ದಿ ಸಾಲಿಡ್ ಸ್ಟೇಟ್ಸ್' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/33qYUbl



ಸುಭಾಷಿತ
ಬುದ್ಧಿವಂತಿಕೆ ಜೊತೆಗೆ ವೈಚಾರಿಕತೆ ಇದ್ದರೆ ಮಾತ್ರ ಮೂಢನಂಬಿಕೆಗಳನ್ನು ನಿರ್ಲಕ್ಷಿಸಬಹುದು.
– ಬರ್ಟ್ರಂಡ್ ರಸೆಲ್

ನವೋದ್ಯಮಗಳಿಗೆ ಸರ್ಕಾರದ ನೆರವು ಆಗಬೇಕಾದ ಕೆಲಸಗಳು ಇನ್ನೂ ಹಲವು

ದೇಶದಲ್ಲಿ ಇರುವ ಒಟ್ಟು 54 ಸಾವಿರ ನವೋದ್ಯಮಗಳ ಪೈಕಿ 13 ಸಾವಿರ ನವೋದ್ಯಮಗಳು ಕರ್ನಾಟಕದಲ್ಲಿಯೇ ಇವೆ ಎಂದು ಹೇಳಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೆಂಗಳೂರಿಗೆ ಸೀಮಿತವಾಗಿರುವ ನವೋದ್ಯಮ ಚಟುವಟಿಕೆಗಳನ್ನು ರಾಜ್ಯದ ಇತರ ಕಡೆಗಳಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ. ಭಾನುವಾರ 'ನವೋದ್ಯಮ ದಿನಾಚರಣೆ'ಯ ಪ್ರಯುಕ್ತ ಪೋರ್ಟಲೊಂದನ್ನು ಲೋಕಾರ್ಪಣೆ ಮಾಡಿದ ಐ.ಟಿ., ಬಿ.ಟಿ. ಮತ್ತು ಕೌಶಲಾಭಿವೃದ್ಧಿ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಅವರು, ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಈ ಬಾರಿ ಹೆಬ್ಬಯಕೆಯಾಗಿ 75 ನವೋದ್ಯಮಗಳಿಗೆ ಮೂಲನಿಧಿಯನ್ನು ('ಸೀಡ್ ಫಂಡ್') ಸರ್ಕಾರದ ಕಡೆಯಿಂದ ನೀಡಲಾಗುವುದು ಎಂದಿದ್ದಾರೆ. ರಾಜ್ಯ ಸರ್ಕಾರವು ಈ ವರ್ಷ, ಹೆಬ್ಬಯಕೆಯ 75 ನವೋದ್ಯಮಗಳು ಸೇರಿದಂತೆ ಒಟ್ಟು 200 ನವೋದ್ಯಮಗಳಿಗೆ ಗರಿಷ್ಠ ತಲಾ ₹ 50 ಲಕ್ಷದವರೆಗೆ ಮೂಲನಿಧಿಯನ್ನು ಒದಗಿಸಲಿದೆ. ನವೋದ್ಯಮ ದಿನದ ಆಚರಣೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಹೇಳಿರುವ ಮಾತುಗಳು ಹಾಗೂ ಸಚಿವರು ಮಾಡಿರುವ ಘೋಷಣೆ ಸ್ವಾಗತಾರ್ಹ. ರಾಜ್ಯವು ಇದುವರೆಗೆ ಅಂದಾಜು ಐದುನೂರು ನವೋದ್ಯಮಗಳಿಗೆ ಮೂಲನಿಧಿಯನ್ನು ಒದಗಿಸಿದೆ. ನವೋದ್ಯಮ ಆರಂಭಿಸಲು ಬಹಳ ಅಗತ್ಯವಾದ ಇಂತಹ ನೆರವನ್ನು ಒದಗಿಸುವ ವ್ಯವಸ್ಥೆಯು ಬೇರೆ ರಾಜ್ಯಗಳಲ್ಲಿ ಇಲ್ಲ ಎಂದೂ ಸಚಿವರು ಹೇಳಿದ್ದಾರೆ. ಬೆಂಗಳೂರಿಗೆ ಭಾರತದ ನವೋದ್ಯಮಗಳ ರಾಜಧಾನಿ ಎಂಬ ಹೆಗ್ಗಳಿಕೆ ಈಗಾಗಲೇ ದೊರೆತಿದೆ. ಇದನ್ನು ಉಳಿಸಿಕೊಳ್ಳಲು, ನವೋದ್ಯಮಗಳು ಇಲ್ಲಿ ಇನ್ನಷ್ಟು ಸಂಖ್ಯೆಯಲ್ಲಿ ಜನ್ಮತಾಳುವಂತೆ ಮಾಡಲು ಇಂತಹ ಕ್ರಮಗಳು ಅಗತ್ಯ. ಹಣಕಾಸು ತಂತ್ರಜ್ಞಾನ, ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವುದು, ಕೃಷಿ, 'ಇಂಟರ್‌ನೆಟ್ ಆಫ್ ಥಿಂಗ್ಸ್' ಸಂಸ್ಥೆಯಂತಹ ಹಲವು ಕ್ಷೇತ್ರಗಳಲ್ಲಿ ನವೋದ್ಯಮಗಳು ಇಲ್ಲಿ ಹುಟ್ಟು ಪಡೆದಿವೆ. ಆದರೆ, ನೀತಿ ನಿರೂಪಕರ ಕಡೆಯಿಂದ ಇಲ್ಲಿ ಆಗಬೇಕಾದ ಕೆಲಸಗಳು ಇನ್ನೂ ಹಲವು ಇವೆ.




> ನವೋದ್ಯಮಗಳಿಗೆ ಮೂಲನಿಧಿಯನ್ನು ಒದಗಿಸುವುದರ ಜೊತೆಯಲ್ಲೇ, ಮುಂದೆ ಅವು ದೊಡ್ಡ ಪ್ರಮಾಣದಲ್ಲಿ ಬೆಳೆದು ನಿಲ್ಲಲು ಪೂರಕವಾದ ವಾತಾವರಣವನ್ನೂ ಸೃಷ್ಟಿಸಬೇಕು

ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳಲ್ಲಿ ಉತ್ತಮ ಕೌಶಲಗಳನ್ನು ತುಂಬಿ, ಅವರು ಒಳ್ಳೆಯ ನೌಕರರು ಆಗುವಂತೆ ಮಾತ್ರ ಮಾಡಬೇಕೇ ಅಥವಾ ಅವರು ಒಳ್ಳೆಯ ಉದ್ಯಮಿಗಳು ಕೂಡ ಆಗುವಂತೆ ಮಾಡಬೇಕು. ಭಾರತದ ಬೇರೆ ಬೇರೆ ಸಮುದಾಯಗಳಿಗೆ ಹೋಲಿಕೆ ಮಾಡಿದರೆ, ಕನ್ನಡನಾಡಿನ ಸಮುದಾಯಗಳಲ್ಲಿ ಉದ್ಯಮಶೀಲತೆಯು ಹೆಚ್ಚು ಕಡಿಮೆ ಎಂಬ ಮಾತುಗಳು ಇವೆ. ಈ ಮಾತು ಚರ್ಚಾರ್ಹ ಆಗಿರಬಹುದು. ರಾಜ್ಯದ ಕೆಲವು ಸಮುದಾಯಗಳಲ್ಲಿ ಉದ್ಯಮಶೀಲತೆಯು ಅತ್ಯಂತ ಸ್ಪರ್ಧಾತ್ಮಕವಾಗಿ ಬೆಳೆದಿರಬಹುದು. ಆದರೆ, ಒಟ್ಟಾರೆಯಾಗಿ ಉದ್ಯಮಶೀಲ ಮನೋಭಾವವು ನಮ್ಮಲ್ಲಿ ಕಡಿಮೆ ಎಂಬುದು ಮೇಲ್ನೋಟಕ್ಕೆ ಅರಿವಿಗೆ ಬರುವ ಸತ್ಯ. ಎಲ್ಲರಲ್ಲಿಯೂ ಈ ಮನೋಭಾವ, ಉದ್ಯಮ ಕಟ್ಟುವ ಛಲ ಮೂಡುವಂತೆ ಮಾಡುವಲ್ಲಿ ಶಿಕ್ಷಣವು ಮಹತ್ತರ ಪಾತ್ರವನ್ನು ವಹಿಸಬಹುದು. ಅದು ಸಾಧ್ಯವಾಗಬೇಕು ಎಂದಾದರೆ ನೀತಿ ನಿರೂಪಕರ ಕಡೆಯಿಂದ ಇನ್ನಷ್ಟು ಒತ್ತಾಸೆ ಸಿಗಬೇಕು. ಜಗತ್ತಿನಲ್ಲಿ ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳು, ಉದ್ಯಮಶೀಲತೆಗೆ ಒತ್ತಾಸೆ ನೀಡಿದ್ದರಿಂದ ಮತ್ತು ತಂತ್ರಜ್ಞಾನದ ವ್ಯಾಪಕ ಬಳಕೆಯ ಕಾರಣದಿಂದಾಗಿ 'ಮುಂದುವರಿದ' ಎಂಬ ಹಿರಿಮೆಗೆ ಪಾತ್ರವಾಗಿವೆ. ಉದ್ಯಮಗಳಿಗೆ ನೆಲೆ ಒದಗಿಸುವ ಪ್ರದೇಶಗಳು ಆರ್ಥಿಕವಾಗಿ ಬೆಳೆದಿವೆ. ನವೋದ್ಯಮಗಳಿಗೆ ಮೂಲನಿಧಿಯನ್ನು ಒದಗಿಸುವುದರ ಜೊತೆಯಲ್ಲೇ ಮುಂದೆ ಅವು ದೊಡ್ಡ ಪ್ರಮಾಣದಲ್ಲಿ ಬೆಳೆದು ನಿಲ್ಲಲು ಪೂರಕವಾದ ವಾತಾವರಣವನ್ನೂ ಸೃಷ್ಟಿಸಬೇಕು. ಅದು ಸರ್ಕಾರಗಳಿಂದ ಮಾತ್ರ ಸಾಧ್ಯವಾಗುವ ಕೆಲಸ.

ರಾಜ್ಯದಲ್ಲಿ ಐ.ಟಿ. ಹಾಗೂ ಬಿ.ಟಿ. ಉದ್ದಿಮೆಗಳು ಬೆಂಗಳೂರಿನ ಆಚೆಯೂ ದೊಡ್ಡ ಪ್ರಮಾಣದಲ್ಲಿ ನೆಲೆ ಕಂಡುಕೊಳ್ಳುವಂತೆ ಮಾಡಲಾಗುವುದು ಎನ್ನುವ ಮಾತನ್ನು ಸರ್ಕಾರದಲ್ಲಿ ಇರುವವರು ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ. ಆದರೆ, ಐ.ಟಿ. ಉದ್ದಿಮೆಯು ಮೈಸೂರು, ಮಂಗಳೂರು, ಹುಬ್ಬಳ್ಳಿ ಹೊರತುಪಡಿಸಿದರೆ ಬೆಂಗಳೂರಿನ ಆಚೆ ದೊಡ್ಡ ಮಟ್ಟದಲ್ಲಿ ಬೆಳೆದಿಲ್ಲ. ಲಕ್ಷಗಳ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಸುವ ಐ.ಟಿ. ಉದ್ಯಮದಲ್ಲಿ ಉದ್ಯೋಗ ಬಯಸುವವರು ಬೆಂಗಳೂರಿಗೆ ಬರಬೇಕಿದೆ. ಈ ಹಿನ್ನೆಲೆಯಲ್ಲಿ, 'ನವೋದ್ಯಮಗಳ ಚಟುವಟಿಕೆಯನ್ನು ರಾಜ್ಯದ ಇತರ ಕಡೆಗಳಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು' ಎಂಬ ಮಾತು ಕಾರ್ಯರೂಪಕ್ಕೆ ಬರುವುದು ಯಾವಾಗ ಎಂಬ ಪ್ರಶ್ನೆ ಖಂಡಿತ ಮೂಡುತ್ತದೆ. ಕೋವಿಡ್–19 ಸಂಕಟದಲ್ಲಿ ಮನೆಯಿಂದಲೇ ಕೆಲಸ ಮಾಡುವ ಅಥವಾ 'ಇಂಟರ್ನೆಟ್ ಲಭ್ಯವಿರುವ ಎಲ್ಲಿಂದಲಾದರೂ ಕೆಲಸ ಮಾಡುವ ಸಂಸ್ಕೃತಿ ವ್ಯಾಪಕವಾಗಿ ಬೆಳೆದಿದೆ. ಅಷ್ಟೇ ಅಲ್ಲ, ಕೆಲಸದ ಈ ಹೊಸ ಸಂಸ್ಕೃತಿಯು ಪರಿಣಾಮಕಾರಿಯೂ ಆಗಿದೆ. ಈ ಪರಿಸ್ಥಿತಿಯನ್ನು ಬಳಸಿಕೊಂಡು, ನವೋದ್ಯಮಗಳ ಬೇರುಗಳು ರಾಜ್ಯದ ಎಲ್ಲ ಕಡೆಗಳಲ್ಲಿಯೂ ವಿಸ್ತರಿಸುವಂತೆ ಮಾಡಲು ಸಾಧ್ಯವೇ ಎಂಬ ಬಗ್ಗೆ ಸರ್ಕಾರ ಗಮನ ನೀಡಬೇಕು. ಉದ್ಯಮ ಮತ್ತು ಅಲ್ಲಿನ ಉದ್ಯೋಗಿಗಳು ರಾಜ್ಯದ ಎಲ್ಲ ಪ್ರದೇಶಗಳಲ್ಲಿ ನೆಲೆ ಕಂಡುಕೊಂಡರೆ, ಅಲ್ಲೆಲ್ಲ ಹಣದ ಚಲಾವಣೆ ಸಹಜವಾಗಿಯೇ ಹೆಚ್ಚುತ್ತದೆ. ಅದು ನೇರವಾಗಿ ಅಭಿವೃದ್ಧಿಗೆ ನೆರವಾಗುತ್ತದೆ. ಇದನ್ನು ಸಾಧ್ಯವಾಗಿಸುವುದು ಕೂಡ ಸರ್ಕಾರದಿಂದ ಮಾತ್ರ ಆಗುವ ಕೆಲಸ.

ದಿನದ ಟ್ವೀಟ್

ಎಷ್ಟೊಂದು ಅಸಮಾನತೆ!



ಭಾರತದ 98 ಧನಿಕರು ತಳಸ್ತರದಲ್ಲಿರುವ 55.2 ಕೋಟಿ ಜನರ ಬಳಿ ಇರುವಷ್ಟು ಸಂಪತ್ತನ್ನು ಹೊಂದಿದ್ದಾರೆ! ದೇಶದಲ್ಲಿ ಕಳೆದ ವರ್ಷ 40 ಮಂದಿ ಹೊಸದಾಗಿ ಶತಕೋಟ್ಯಧೀಶರಾಗಿದ್ದಾರೆ. ಆದರೆ ಬಡವರ ಸಂಖ್ಯೆ ದುಪ್ಪಟ್ಟಾಗಿದೆ. ಅಸಮಾನತೆಯ ಮಟ್ಟ ಎಷ್ಟಿದೆಯೆಂದರೆ, ಭಾರತದ 10 ಶ್ರೀಮಂತರ ಸಂಪತ್ತು ಪ್ರತೀ ಮಗುವಿನ ಶಾಲಾ ಶಿಕ್ಷಣ ಹಾಗೂ ಉನ್ನತ ಶಿಕ್ಷಣಕ್ಕೆ 25 ವರ್ಷಗಳ ಕಾಲ ಧನಸಹಾಯ ಮಾಡಲು ಸಾಕಾಗುತ್ತದೆ!

ಪ್ರಶಾಂತ್ ಭೂಷಣ್, ವಕೀಲ

ಕಿಡಿನುಡಿ



ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ದಾವಣಗೆರೆ, ಬಳ್ಳಾರಿಯಲ್ಲಿ ಕಳಪೆ ಬೇಳೆ ಪೂರೈಕೆಯ ದೂರುಗಳಿದ್ದರೂ ಆಹಾರ ನಿಗಮದ ಅಧಿಕಾರಿಗಳು ಕಳಪೆ ಬೇಳೆ ಸರಬರಾಜು ಮಾಡುತ್ತಿರುವ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳದೇ ಇರುವುದಕ್ಕೆ ಏನು ಕಾರಣ? ಲಂಚದ ಹಣದಲ್ಲಿ ಯಾರೆಲ್ಲ ಪಾಲುದಾರರು?

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಶನಿವಾರ, 18-1-1997

• ರಾಷ್ಟ್ರೀಯ ಜಲನೀತಿ ರೂಪಿಸಲು ಪ್ರಧಾನಿಗೆ ಒತ್ತಾಯ

ಬೆಂಗಳೂರು, ಜ. 17– ಪ್ರಮುಖ ವಿರೋಧ ಪಕ್ಷಗಳ ಸಭಾತ್ಯಾಗದ ಮಧ್ಯೆ ಇಂದು ಇಲ್ಲಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ವಿವಾದ ಕುರಿತ ಸರ್ವಪಕ್ಷ ಸಭೆ, ಜಲ ವಿವಾದಗಳ ಇತ್ಯರ್ಥಕ್ಕೆ ರಾಷ್ಟ್ರೀಯ ಜಲ ನೀತಿಯನ್ನು ರೂಪಿಸುವುದಕ್ಕಾಗಿ ಅಂತರ್‌ರಾಜ್ಯ ಮಂಡಳಿ ಸಭೆ ಕರೆಯುವಂತೆ ಪ್ರಧಾನಿಯನ್ನು ಒತ್ತಾಯಿಸಲು ನಿರ್ಧರಿಸಿತು.

ಇಂಥ ಒಂದು ಮಾರ್ಗದರ್ಶಿ ಸೂತ್ರ ಅಸ್ತಿತ್ವಕ್ಕೆ ಬರುವವರೆಗೆ ಕಾವೇರಿ ನ್ಯಾಯಮಂಡಳಿ ಕಲಾಪ ಸ್ಥಗಿತಗೊಳಿಸಿ ಆದೇಶ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗುವುದಕ್ಕೂ ತೀರ್ಮಾನಿಸಿತು.

ಎರಡು ತಾಸಿನ ಸಭೆಯ ಬಳಿಕ ಸುದ್ದಿಗಾರರಿಗೆ ಈ ವಿವರ ನೀಡಿದ ಜೆ.ಎಚ್. ಪಟೇಲ್ ಅವರು, 'ನ್ಯಾಯಮಂಡಳಿ ಕಲಾಪವನ್ನು ಮಾತ್ರ ರಾಜ್ಯ ಸರ್ಕಾರ ಬಹಿಷ್ಕರಿಸುವುದಿಲ್ಲ; ಬದಲಿಗೆ ಮಂಡಳಿಯ ಮುಂದೆ ಹಾಜರಾಗಿ ತನ್ನ ನಿಲುವನ್ನು ವಿವರಿಸುತ್ತದೆ' ಎಂದು ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ
ಮಂಗಳವಾರ, 18-1-1972

• ಯುದ್ಧದಲ್ಲಿ ಗೆದ್ದಿರುವ ಪ್ರದೇಶ ಪಾಕ್ ವಶಕ್ಕೆ ವಾಪಸಿಲ್ಲ: ರಾಂ

ಪಾಟಲೀಪುತ್ರ, ಜ. 17– ಇತ್ತೀಚಿನ ಭಾರತ– ಪಾಕಿಸ್ತಾನ ಯುದ್ಧದಲ್ಲಿ ಗೆದ್ದಿರುವ ಪ್ರದೇಶವನ್ನು ಭಾರತ ಹಿಂತಿರುಗಿಸದು ಎಂದು ರಕ್ಷಣಾ ಸಚಿವ ಜಗಜೀವನರಾಂ ಅವರು ಇಂದು ಇಲ್ಲಿ ಸೂಚನೆಯಿತ್ತರು.

ವಶಪಡಿಸಿಕೊಂಡಿರುವ ಪ್ರದೇಶವನ್ನು ಪಾಕಿಸ್ತಾನಕ್ಕೆ ಹಿಂತಿರುಗಿಸಿದರೆ ರಾಷ್ಟ್ರದಾದ್ಯಂತ ಚಳವಳಿ ನಡೆಸುವುದಾಗಿ ಜನಸಂಘದ ಅಧ್ಯಕ್ಷ ಅಟಲ್ ಬಿಹಾರಿ ವಾಜಪೇಯಿ ಅವರಿತ್ತಿರುವ ಬೆದರಿಕೆ ಬಗ್ಗೆ ಜಗಜೀವನರಾಂ ಅವರು ಟೀಕಿಸುತ್ತಾ, 'ನಾವು ಅಷ್ಟು ಮೂರ್ಖರಲ್ಲ. ಬರೀ ಮಾತನಾಡುವವರಿಗಿಂತ ದೇಶಕ್ಕಾಗಿ ತ್ಯಾಗ ಮಾಡಿರುವವರಿಗೆ ನೋವು ಹೆಚ್ಚು' ಎಂದು ಹೇಳಿದರು.

• ಲೋಕಸಭೆ ಚುನಾವಣೆ ನಂತರ ಸೇರಿದವರಿಗೆ (ಆ) ಕಾಂಗ್ರೆಸ್ ಟಿಕೆಟ್ಟಿಲ್ಲ

ನವದೆಹಲಿ, ಜ. 17– ಮೈಸೂರು ರಾಜ್ಯದಲ್ಲಿ ಲೋಕಸಭೆ ಮಧ್ಯಂತರ ಚುನಾವಣೆ ನಡೆದ ನಂತರ ಆಡಳಿತ ಕಾಂಗ್ರೆಸ್ಸಿಗೆ ಸೇರಿದ ಸದಸ್ಯರುಗಳಿಗೆ ವಿಧಾನಸಭೆಗೆ ಸ್ಪರ್ಧಿಸಲು ಆ ಪಕ್ಷದ ಟಿಕೆಟ್ ಸಿಗುವುದಿಲ್ಲ. ಇಂದು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ಸಮ್ಮುಖದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಚುನಾವಣೆ ಸಮಿತಿ ಸಭೆ ಈ ನಿರ್ಧಾರ ಕೈಗೊಂಡಿತು.

ಇಂದಿನ ಜಗತ್ತಿನ ಹಲವು ಸಂಗತಿಗಳ ಬಗ್ಗೆ ಪುಸ್ತಕವೊಂದು 25 ವರ್ಷಗಳ ಹಿಂದೆಯೇ ಮಾತನಾಡಿತ್ತು

ಪುಸ್ತಕದ ಭವಿಷ್ಯವಾಣಿಯ ಸುತ್ತ



ವಿಶ್ಲೇಷಣೆ

ವಸಂತ ಶೆಟ್ಟಿ

ಕೋವಿಡ್ ಈಗ ಓಮೈಕ್ರಾನ್ ಹೆಸರಿನಲ್ಲಿ ಮತ್ತೊಮ್ಮೆ ದಾಂಗುಡಿಯಿಟ್ಟಿದೆ. ಕಳೆದ ಏಪ್ರಿಲ್- ಮೇ ತಿಂಗಳುಗಳಲ್ಲಿ ಆದಂತೆ ವಿಪರೀತದ ಸೋಂಕು, ಸಾವು-ನೋವು ಇಷ್ಟರವರೆಗೆ ಕಾಣಿಸಿಲ್ಲ ಅನ್ನುವುದು ಸದ್ಯದ ನೆಮ್ಮದಿ. ಇದನ್ನು ಕೊನೆಗಾಣಿಸಲು ದೇಶ ದೇಶಗಳ ನಡುವೆ ಜಾಗತಿಕವಾದ ಸಹಕಾರವೊಂದೇ ದಾರಿ. ಅದಿಲ್ಲದೇ ಹೋದರೆ ಪ್ರತೀ ಆರು ತಿಂಗಳಿಗೊಮ್ಮೆ ವೈರಸ್ಸಿನ ಹೊಸ ತಳಿಯ ಜೊತೆ ಜನಜೀವನ ಹೀಗೆ ಒದ್ದಾಡುವುದು ತಪ್ಪಲಿಕ್ಕಿಲ್ಲ.

ದೇಶ ದೇಶಗಳಲ್ಲಿ 'ನಮ್ಮ ದೇಶವೇ ಮೊದಲು' ಅನ್ನುವ ರಾಷ್ಟ್ರವಾದ ಹೆಚ್ಚುತ್ತಿರುವ ಹಾಗೂ ಜಾಗತಿಕ ಸಹಕಾರವನ್ನು ರೂಪಿಸುವ ಹೊಣೆ ಹೊತ್ತ ವಿಶ್ವಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ ಮುಂತಾದವು ತಮ್ಮ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ, ಜಾಗತಿಕ ಸಹಕಾರವನ್ನು ಸಾಧ್ಯವಾಗಿಸುವುದು ಸುಲಭದ ಮಾತೂ ಅಲ್ಲ. ಇನ್ನೊಂದೆಡೆ, ತಂತ್ರಜ್ಞಾನದ ದಾಪುಗಾಲು ವ್ಯಾಪಾರ, ವಲಸೆ, ಉದ್ಯೋಗ, ಪೌರತ್ವಗಳ ಕುರಿತ ನಮ್ಮ ಈಗಿನ ನಂಬಿಕೆಗಳೆಲ್ಲವನ್ನೂ ಮರುರೂಪಿಸುತ್ತಿದೆ. ಕೋವಿಡ್ ಈ ಪ್ರಕ್ರಿಯೆಗೆ ಇನ್ನಷ್ಟು ವೇಗವನ್ನು ತುಂಬಿದೆ.


ಇದೆಲ್ಲ ಮನುಕುಲದ ನಾಳೆಯನ್ನು ಹೇಗೆ ರೂಪಿಸಬಹುದು ಅನ್ನುವ ಭವಿಷ್ಯ ನುಡಿಯುವುದು ಯಾರಿಗೂ ಸಾಧ್ಯವಾಗಲಿಕ್ಕಿಲ್ಲ. ಆದರೆ ಹಿಂದಿನ ಇತಿಹಾಸ, ಇಂದಿನ ಸಮಾಜ, ಅಲ್ಲಿ ತಂತ್ರಜ್ಞಾನ, ಜಾಗತೀಕರಣ, ಪರಿಸರ ನಾಶ ಮುಂತಾದವು ತರುತ್ತಿರುವ ಬದಲಾವಣೆಗಳನ್ನು ಅರಿತು ನಾಳೆ ಏನಾಗಬಹುದು ಅನ್ನುವ ಮುನ್ನುಡಿಯನ್ನು ಕೆಲವರು ಆಡುತ್ತಾರೆ. ಅಂತಹುದೇ ಒಂದು ಪುಸ್ತಕ ಅಮೆರಿಕದ ಜೇಮ್ಸ್ ಡೇವಿಡ್‌ಸನ್ ಹಾಗೂ ವಿಲಿಯಂ ರೀಸ್‌ಮೊಗ್ 1997ರಲ್ಲಿ ಬರೆದ 'ದಿ ಸಾವರಿನ್ ಇಂಡಿವಿಜುಯಲ್: ಮಾಸ್ಟರಿಂಗ್ ದಿ ಟ್ರಾನ್ಸಿಶನ್ ಟು ದಿ ಇನ್‌ಫರ್ಮೇಶನ್ ಏಜ್'. ಇಂದು ನಾವು ಜಗತ್ತಿನಲ್ಲಿ ಕಾಣುತ್ತಿರುವ ಆರ್ಥಿಕ ತಾರತಮ್ಯ, ಸಾಂಕ್ರಾಮಿಕ ಕಾಯಿಲೆ, ದೇಶಗಳ ಗಡಿ ಇಲ್ಲದ ಕ್ರಿಪ್ಟೊ ಕರೆನ್ಸಿ, ಅತಿರೇಕದ ರಾಷ್ಟ್ರವಾದ, ಎಲ್ಲೆಲ್ಲೂ ಇರುವ ತಂತ್ರಜ್ಞಾನ ಇವೆಲ್ಲವುಗಳ ಬಗ್ಗೆ ಈ ಪುಸ್ತಕ 1997ರಲ್ಲೇ ಮಾತನಾಡಿತ್ತು. ಬಿಡುಗಡೆಯಾದ ಹೊತ್ತಿನಲ್ಲಿ ಇದೊಂದು ಕಾಲಜ್ಞಾನದ ಊಹೆಗಳ ಪುಸ್ತಕ ಎಂದು ಲೇವಡಿ ಮಾಡಲಾಗಿತ್ತಾದರೂ 25 ವರ್ಷಗಳಲ್ಲಿ ಇಲ್ಲಿನ ಹಲವು ವಿಚಾರಗಳು ನಿಜವಾಗುತ್ತ ಹೋದಂತೆ ಈ ಪುಸ್ತಕ ಈಗ ಮತ್ತೆ ಹೊಸ ಓದಿಗೆ ಕಾರಣವಾಗಿದೆ. ಏನಿದೆ ಇದರಲ್ಲಿ?

ಮನುಷ್ಯ ಬೇಟೆಯಾಡಿ ಬದುಕುತ್ತಿದ್ದ ದಿನಗಳಲ್ಲಿ ಆ ಹೊತ್ತಿಗೆ ಎಷ್ಟು ಬೇಕೋ ಅಷ್ಟೇ ಬೇಟೆಯಾಡುತ್ತಿದ್ದ ಕಾರಣಕ್ಕೆ ಭೂಮಿಯ ಒಡೆತನಕ್ಕಾಗಿ ಬಡಿದಾಡುವ ಸ್ಥಿತಿ ಇರಲಿಲ್ಲ. ಮುಂದೆ ನದಿಯಂಚಿನಲ್ಲಿ ಸಾಗುವಳಿ ಮಾಡಲು ಕಲಿತಾಗ ಫಲವತ್ತಾದ ಭೂಮಿಗಾಗಿಯೂ, ಅಲ್ಲಿ ಬೆಳೆದ ಬೆಳೆಯನ್ನು ಇನ್ನಾರೋ ಕದಿಯದಂತೆ ಕಾಯಲು ಭೂಮಿಯ ಒಡೆತನ ಮುಖ್ಯವಾಗತೊಡಗಿತು. ಈ ಕಾರಣದಿಂದ ರಾಜಪ್ರಭುತ್ವ, ಪಾಳೆಗಾರರ ಪರಿಕಲ್ಪನೆ ಒಡಮೂಡಿತು. ಬಲವಾದ ಸೈನ್ಯ ಮತ್ತು ಹಿಂಸೆಯನ್ನು ಬಳಸಿ ರಕ್ಷಣೆ ನೀಡಬಲ್ಲ ಇವರು 15ನೇ ಶತಮಾನದವರೆಗೆ ಹೆಚ್ಚು ಮುಖ್ಯವಾಗಿದ್ದರು. 15ನೇ ಶತಮಾನದ ಹೊತ್ತಿಗೆ ಮಿಲಿಟರಿ ತಂತ್ರಜ್ಞಾನ ಸುಧಾರಿಸಿದಂತೆ, ಅದರಲ್ಲೂ ಗನ್ ಪೌಡರ್ ಕಂಡುಹಿಡಿದ ಕಾರಣ ಹೆಚ್ಚು ತರಬೇತಿ ಇಲ್ಲದ, ಬಲವಾದ ಮೈಕಟ್ಟು ಇಲ್ಲದವರು ಸೈನ್ಯದಲ್ಲಿ ಇದನ್ನು ಬಳಸಿ ಯುದ್ಧ ಗೆಲ್ಲುವ ಸ್ಥಿತಿ ತಲುಪಿದಾಗ ಪಾಳೆಗಾರರು, ರಾಜಪ್ರಭುತ್ವಗಳಿಗಿದ್ದ ಹಿಡಿತ ಸಡಿಲವಾಗಿ ಆಧುನಿಕ ಪರಿಕಲ್ಪನೆಯ ದೇಶ-ರಾಷ್ಟ್ರಗಳು ಉದಯಿಸಲು ಶುರುವಾದವು.

ತಂತ್ರಜ್ಞಾನವನ್ನು ಬಳಸಿ ಬಲ ಮತ್ತು ಹಿಂಸೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ಆಳ್ವಿಕೆಯ ಪ್ರದೇಶದ ಮೇಲೆ ಚಲಾಯಿಸುವುದರ ಮೇಲೆ ಸಿಕ್ಕ ಏಕಸ್ವಾಮ್ಯದಿಂದಾಗಿ ಇವು ಹೆಚ್ಚು ಆಳವಾಗಿ ಬೇರೂರತೊಡಗಿದವು. ಮಿಲಿಟರಿ ತಂತ್ರಜ್ಞಾನದಲ್ಲಿ ಸಾಧಿಸಿದ್ದ ಮುನ್ನಡೆಯೇ ಬ್ರಿಟಿಷರಿಗೆ ಭಾರತವನ್ನು ತನ್ನ ವಸಾಹತು ಮಾಡಿಕೊಳ್ಳಲು ನೆರವಾಯಿತು ಅನ್ನುವುದನ್ನು ಇಲ್ಲಿ ನೆನೆಯಬಹುದು. ಮುಂದೆ ಔದ್ಯೋಗಿಕ ಕ್ರಾಂತಿಯಿಂದಾಗಿ ಬರೀ ಮಿಲಿಟರಿ ತಂತ್ರಜ್ಞಾನದಲ್ಲಷ್ಟೇ ಅಲ್ಲದೆ ಬದುಕಿನ ಎಲ್ಲ ಮಜಲುಗಳನ್ನು ತಟ್ಟುವ ವಿಷಯಗಳಲ್ಲೂ ದೊಡ್ಡ ಗಾತ್ರದಲ್ಲಿ ಉತ್ಪಾದನೆ, ಹಂಚಿಕೆ ಮಾಡುವ ಅನುಕೂಲ ಬಂದಿತು. ಸಹಜವಾಗಿಯೇ ಇಂತಹ ದೈತ್ಯ, ದಕ್ಷವಾದ ಉತ್ಪಾದನೆಯ ವ್ಯವಸ್ಥೆಗೆ ಬೇಕಾದ ಬಂಡವಾಳ, ರಕ್ಷಣೆ ಒದಗಿಸುವುದು ದೇಶ-ರಾಷ್ಟ್ರದ ಪರಿಕಲ್ಪನೆಗೆ ಮಾತ್ರ ಸಾಧ್ಯವಿದ್ದ ಕಾರಣದಿಂದಾಗಿ 20ನೇ ಶತಮಾನ ದೇಶ-ರಾಷ್ಟ್ರದ ಶತಮಾನವಾಗಿತ್ತು. ಆದರೆ ಮಾಹಿತಿ ತಂತ್ರಜ್ಞಾನದ 21ನೇ ಶತಮಾನ 500 ವರ್ಷದ ಹಿಂದೆ ಗನ್ ಪೌಡರ್ ಬಂದಾಗ ಹೇಗೆ ಇತಿಹಾಸದ ದಿಕ್ಕನ್ನು ಬದಲಾಯಿಸಿತೋ ಅಂತಹುದೇ ಬದಲಾವಣೆಯನ್ನು ತಂದು, ದೇಶ-ರಾಷ್ಟ್ರಗಳ ಜಾಗದಲ್ಲಿ 'ಸ್ವಾಯತ್ತ ವ್ಯಕ್ತಿ'ಕೇಂದ್ರಿತ ಸಮಾಜವನ್ನು ರೂಪಿಸಲಿದೆ ಅನ್ನುವುದು ಲೇಖಕರ ವಾದ.

ಮಾಹಿತಿ ತಂತ್ರಜ್ಞಾನ ಆಧಾರಿತ ಜಗತ್ತು ದೊಡ್ಡ ಪ್ರಮಾಣದಲ್ಲಿ ಅರ್ಥವ್ಯವಸ್ಥೆಯನ್ನು ಸೈಬರ್ ಕಾಮರ್ಸ್ ಜಗತ್ತಿಗೆ ಒಯ್ಯಲಿದೆ. ಅಲ್ಲಿಗೆ ಹೆಚ್ಚೆಚ್ಚು ಆರ್ಥಿಕ ಚಟುವಟಿಕೆ ಚಲಿಸಿದಂತೆ ಸರ್ಕಾರದ ಹಿಡಿತ ಅಲ್ಲಿ ಕಡಿಮೆಯಾಗಲಿದೆ. ಅದು ಸೈಬರ್ ಹಣದ (ಕ್ರಿಪ್ಟೊ ಕರೆನ್ಸಿಯಂಥದ್ದು) ಹುಟ್ಟಿಗೆ ಕಾರಣವಾಗಲಿದೆ. ಸರ್ಕಾರದ ನಿಯಂತ್ರಣಗಳನ್ನು ಮೀರಿದ ಇಂತಹ ವ್ಯವಸ್ಥೆ ಒಂದು ಮಟ್ಟಿಗಿನ ವ್ಯಕ್ತಿ ಸ್ವಾತಂತ್ರ್ಯ ನೀಡಲಿದೆ. ತಂತ್ರಜ್ಞಾನ ಸುಧಾರಿಸಿದಂತೆ ಎಲ್ಲಿಂದ ಬೇಕಾದರೂ ಕೆಲಸ ಮಾಡುವ ಸಾಮರ್ಥ್ಯವನ್ನು ಈ ಕ್ಷೇತ್ರ ಒದಗಿಸುವುದರಿಂದ ಯಾವ ನಾಡಿನಲ್ಲಿ ಸರ್ಕಾರಗಳು ತೆರಿಗೆ ಹೆಸರಿನಲ್ಲಿ ಹಗಲು ದರೋಡೆ ಮಾಡುವುದಿಲ್ಲವೋ ಅಲ್ಲಿಗೆ ವಲಸೆ ಹೋಗಿ ನೆಲೆಸುವ ಆಯ್ಕೆ ಒದಗಲಿದೆ. ಸುದ್ದಿ ಮಾಧ್ಯಮಗಳು ವ್ಯಕ್ತಿಕೇಂದ್ರಿತವಾಗಿ ಆಕೆಗೆ ಏನು ಬೇಕೋ ಅದನ್ನೇ ಸುದ್ದಿಯಾಗಿ ಕೊಡುವ ಮಟ್ಟಕ್ಕೆ ಮಾರ್ಪಡಲಿವೆ. ಈ ಬದಲಾವಣೆಯಲ್ಲಿ ಪಾಲ್ಗೊಳ್ಳಲು ಅವಕಾಶ ಇರುವ ಕೆಲವರು ಊಹಿಸಲಾರದಷ್ಟು ಸಿರಿವಂತಿಕೆ ಪಡೆದರೆ, ಇದಕ್ಕೆ ಬೇಕಾದ ಸ್ಕಿಲ್ಸ್ ಪಡೆಯದ ಜನರು ಹೊರಗುಳಿದು ಆರ್ಥಿಕ ತಾರತಮ್ಯ ಹೆಚ್ಚಲಿದೆ. ಹೀಗೆ ಹೊರಗುಳಿಯುವ ಜನರ ಸಿಟ್ಟು ಹಲವಾರು ದೇಶಗಳಲ್ಲಿ ಅತಿರೇಕದ ರಾಷ್ಟ್ರವಾದಕ್ಕೆ ಕಾರಣವಾಗಲಿದೆ. ಅಂತಹ ದೇಶಗಳು ಇಂತಹ ಸ್ವಾಯತ್ತ ವ್ಯಕ್ತಿಗಳನ್ನು ಶತ್ರುಗಳೆಂದು ಬಗೆದು ಅವರನ್ನು ಹತ್ತಿಕ್ಕಲು ಪ್ರಯತ್ನಿಸಲಿವೆ. ಇದೇ ಹೊತ್ತಿನಲ್ಲಿ ಅಂಕೆಯಿಲ್ಲದೆ ಬೆಳೆಯುತ್ತಿರುವ ಜಗತ್ತಿನ ಜನಸಂಖ್ಯೆಯಿಂದಾಗಿ ಸಾಂಕ್ರಾಮಿಕ ಕಾಯಿಲೆಗಳನ್ನು ಹರಡಬಲ್ಲ ಸೂಕ್ಷ್ಮಾಣುಜೀವಿಗಳು ಹೆಚ್ಚಿ ಕಾಯಿಲೆಗಳು ಪಿಡುಗಿನಂತೆ ಅಪ್ಪಳಿಸಬಹುದು. ಮಾರುಕಟ್ಟೆಯ ಸಾಟಿಯಿಲ್ಲದ ಸಾಧ್ಯತೆಗಳ ಮುಂದೆ ರಾಜಕಾರಣ ತನ್ನ ನೆಲೆ ಕಳೆದುಕೊಳ್ಳಲಿದೆ. ಪಾಳೆಗಾರಿಕೆಯ ಜಾಗದಲ್ಲಿ ದೇಶ-ರಾಷ್ಟ್ರಗಳ ಪರಿಕಲ್ಪನೆ ಬಂದಂತೆ ಅದರ ಜಾಗದಲ್ಲಿ ಸ್ವಾಯತ್ತ ವ್ಯಕ್ತಿ ನಿಲ್ಲುವ ಬದಲಾವಣೆ 21ನೇ ಶತಮಾನದಲ್ಲಿ ಆಗಲಿದೆ.

ಇಂತಹ ಹಲವು ಮುನ್ನುಡಿಗಳನ್ನು ಈ ಪುಸ್ತಕದಲ್ಲಿ ಹೇಳಲಾಗಿತ್ತು. ಕ್ರಿಪ್ಟೊ ಕರೆನ್ಸಿಯ ಜನಪ್ರಿಯತೆ, ಸೈಬರ್ ಕಾಮರ್ಸ್‌ನ ಅಗಾಧ ಬೆಳವಣಿಗೆ, ಆರ್ಥಿಕ ಅಸಮಾನತೆ, ಸಮೂಹ ಮಾಧ್ಯಮಗಳ ಕುಸಿತ, ಕೋವಿಡ್, ಅತಿರೇಕದ ರಾಷ್ಟ್ರವಾದದ ಹುಟ್ಟು ಹೀಗೆ ಹಲವು ವಿಚಾರಗಳಲ್ಲಿ ಪುಸ್ತಕದ ಮಾತುಗಳು ಈಗ ದಿಟವೆಂದು ಸಾಬೀತಾಗುತ್ತಿವೆ. ಹಾಗೆಂದ ಮಾತ್ರಕ್ಕೆ ಇಲ್ಲಿನ ಎಲ್ಲ ಮಾತುಗಳು ನಿಜವಾಗಿವೆ ಅಂತೇನೂ ಇಲ್ಲ. ಹಾಂಕ್‌ಕಾಂಗ್‌ನಂತಹ ನಗರಗಳು ಸ್ವಾಯತ್ತ ವ್ಯಕ್ತಿಕೇಂದ್ರಿತ ಸಮಾಜ ಕಟ್ಟುವ ನಗರಕ್ಕೆ ಉದಾಹರಣೆಯಾಗಬಲ್ಲವು ಅನ್ನುವ ಅವರ ವಾದ ತಲೆಕೆಳಗಾಗುವಂತೆ ಚೀನಾ ತನ್ನ ಬಿಗಿಪಟ್ಟಿನ ಮೂಲಕ ಆ ನಗರವನ್ನು ಹಿಡಿತದಲ್ಲಿ ಇರಿಸಿಕೊಂಡಿದೆ.



ಇನ್ನೊಂದೆಡೆ, ಬಲ ಮತ್ತು ಹಿಂಸೆಯ ಜೊತೆ ಮಾಹಿತಿ ತಂತ್ರಜ್ಞಾನದ ಸಾಧ್ಯತೆಗಳನ್ನು ಬಳಸಿ ಒಂದು ಪ್ರಬಲ ಆರ್ಥಿಕ ಶಕ್ತಿಯಾಗಿ ಚೀನಾ ಉದಯಿಸಬಹುದು ಅನ್ನುವುದನ್ನು ಊಹಿಸಲು ಲೇಖಕರಿಗೆ ಸಾಧ್ಯವಾಗಿರಲಿಲ್ಲ. ಜೊತೆಗೆ ಪ್ರತಿಭೆ ಇದ್ದವರಿಗೆ ಎಲ್ಲವೂ ಸಿಗುತ್ತವೆ, ಉಳಿದವರದ್ದು ಅವರ ಹಣೆಬರಹ ಅನ್ನುವಂತೆ ಇಲ್ಲಿನ ವಾದಗಳಿರುವುದರಿಂದ ಆರ್ಥಿಕ ತಾರತಮ್ಯ ತರುವ ಸಾಮಾಜಿಕ ಬಿಕ್ಕಟ್ಟುಗಳ ಬಗ್ಗೆ ಲೇಖಕರು ಅಷ್ಟು ಆಳವಾಗಿ ಚಿಂತಿಸಿಲ್ಲ ಅನ್ನುವುದು ಪುಸ್ತಕದ ಮೇಲಿರುವ ದೊಡ್ಡ ಟೀಕೆಗಳಲ್ಲಿ ಒಂದು.

ಒಟ್ಟಾರೆಯಾಗಿ 21ನೇ ಶತಮಾನದ ಮನುಕುಲದ ಭವಿಷ್ಯದ ಬಗ್ಗೆ ಯೋಚಿಸುವವರಿಗೆ ತನ್ನ ಹಲವು ಮಿತಿಗಳ ನಡುವೆಯೂ ಇದೊಂದು ಒಳ್ಳೆಯ ಪುಸ್ತಕ. ಇಂತಹದ್ದೆಲ್ಲ ಕನ್ನಡಕ್ಕೆ ಅನುವಾದವಾಗುವುದು ಯಾವಾಗ?

ಚುರುಮುರಿ



ಕಳ್ಳ-ಮಳ್ಳ ವೈರಸ್

• ಲಿಂಗರಾಜು ಡಿ.ಎಸ್.

'ಒಮೈಕ್ರಾನ್ ವೈರಸ್ಸು ದಿನದಿನಕೆ ಕಲಿಯಾಯ್ತಾದೆ. ಇನ್ನು ಮುಂದ್ಕೆ ಬದುಕೆಂಗೆ?' ನನ್ನ ಚಿಂತೆ ಹೇಳಿಕ್ಯಂಡೆ.

'ನೋಡ್ಲಾ ಅಣ್ತಮ್ಮಾ, ಕೊರೊನಾ, ಒಮೈಕ್ರಾನ್ ಬರದಂಗೆ ಹುಸಾರಾಗಿರಬೌದು. ಕಳ್ಳ ವೈರಸ್ಸು, ಮಳ್ಳ ವೈರಸ್ಸು, ಸುಳ್ಳು ವೈರಸ್ಸು ಅಂತ ಮೂರು ಡೇಂಜರ್ ವೈರಸ್ಸವೆ. ಕಳ್ಳ ವೈರಸ್ಸು ದೊಡ್ಡ ರಾಜಕಾರಣಿಗಳು, ಪುಢಾರಿಗಳಿಗೆ ಮಾತ್ರ ಅಮರಿಕ್ಯತದೆ! ಸೋಂಕಿತರಿಗೆ ಸ್ಟೀಲ್ ಬ್ರಿಡ್ಜ್ ವೈರಸ್, ನೀರಾವರಿ ವೈರಸ್, ವೈಟ್ ಟಾಪಿಂಗ್ ವೈರಸ್, ಪರ್ಸೆಂಟೇಜ್ ವೈರಸ್, ಚುನಾವಣಾ ರ‍್ಯಾಲಿ ವೈರಸ್, ಬರ್ತಡೇ ವೈರಸ್, ಮೇಕೆಘಾಟು ವೈರಸ್, ಕರ್ನಾಟಕ ಬಂದ್ ವೈರಸ್ ಅಂತ ಅಡ್ನಾಡಿ ವೈರಸ್ ಅಟ್ಯಾಕಾಗಿರತವೆ! ಈ ಸೋಂಕಿತರು ಜನ ಸೇರಿಸಿಗ್ಯಂಡು ನಮಗೆ ಕೊರೊನಾ ಕೊಟ್ಟು ಬಾಳಗೆಡಿಸಿ ತಾವು ಉದ್ಧಾರಾಯ್ತರೆ!' ತುರೇಮಣೆ ಮಾತು ನನಗರ್ಥವಾಗಲಿಲ್ಲ.

'ಏನು ಕತೆ-ಕರ್ಮ! ಮಳ್ಳ ವೈರಸ್ ಯಾವುದು ಸಾ?' ಅಂತ ವಿಚಾರಿಸಿದೆ.

'ಅಣ್ತಮ್ಮಾ, ಇದು ಪೊಗರು ಹೆಚ್ಚಾದವುಕ್ಕೆ ತಗಲಿಕ್ಯತದೆ. ಕರ್ಫ್ಯೂ ಹಾಕಿದಾಗ ಮಾಸ್ಕಾಕದೇ ಮೂತಿ ಬುಟ್ಕಂದು ಕೊತ್ತಂಬ್ರಿ ತರಕ್ಕೆ ಮಾರ್ಕೆಟ್ಟಿಗೋಯ್ತವೆ. ಪೊಲೀಸಿಗೆ ಸಿಗಾಕ್ಯಂಡಾಗ 'ನಮ್ಮಪ್ಪನ ಚಿಗಪ್ಪನ ಮಾವನ ಅತ್ತೆ ತಮ್ಮನ ಮಗಳ ಗಂಡನ ಬೀಗರಿಗೆ ಉಸಾರಿಲ್ಲ ನೋಡಕ್ಕೋಯ್ತಿದೀವಿ ಸಾ!' ಅಂತ ಗ್ವಾಗರಿತವೆ. ಇನ್ನು ಕೆಲವು 'ಎಲ್ಲ್ಯದೆ ಕೊರೊನಾ? ನಮಗೆ ಅವ್ಯಾವೂ ಬರಕುಲ್ಲ, ಮಾಸ್ಕ್ಯಾಕೆ?! ದೊಡ್ಡೋರಿಗೊಂದು ನಮಗೊಂದು ರೂಲ್ಸಾ?' ಅಂತ ಮೂಗಂಡುಗ ಮಾತಾಡ್ತವೆ. 'ಗಾಡಿ ಸೀಜ್ ಮಾಡ್ತೀವಿ! ಮಾಸ್ಕಾಕಿಲ್ಲ ದಂಡ ಕಟ್ರೀ' ಅಂತ ಕುಂಡಿ ಮ್ಯಾಲೆ ಎರಡು ಬುಟ್ರೆ 'ಪೋಲೀಸು ದೌರ್ಜನ್ಯ!' ಅಂತ ಕಣ್ಣಗೆ ನೀರಾಕ್ಕತವೆ' ಅಂತಂದ್ರು.

'ಇನ್ನು ಸುಳ್ಳು ವೈರಸ್ ಯಾವುದು?' ಕೇಳಿದೆ.

'ಬ್ಯಾರೆ ದೇಸದಿಂದ ಬಂದು ಇಲ್ಲಿ ಡ್ರಗ್ ಯವಾರ ಮಾಡವು, ವಾಟ್ಸಪ್ಪು, ಟ್ವಿಟ್ಟರಿನಗೆ ಬಂದುದ್ದನ್ನೆಲ್ಲಾ ಫಾರ್ವರ್ಡ್ ಮಾಡಿ ಕಳಿಸವು! ಈಥರಾ ಇರ್ತವೆ ಕಯ್ಯಾ!' ಅಂದ್ರಲ್ಲಾ ವೈರಸ್ ಕಾರುಬಾರಲ್ಲಿ ಯಾವುದೂ ಊರ್ಜಿತಾಗಕುಲ್ಲ ಅನ್ನಿಸ್ತು!

ಸಂಗತ

ಶಿಕ್ಷಕ ಸಮುದಾಯ: ತಾರತಮ್ಯವೇಕೆ?

ತನ್ನೊಳಗೇ ಅಸಮಾನತೆಯನ್ನು ಪೋಷಿಸಿಕೊಂಡಿರುವ ಶಿಕ್ಷಣ ವ್ಯವಸ್ಥೆ ಹೊರಗಿನ ಸಮಾಜದಲ್ಲಿ ಸಮಾನತೆಯನ್ನು ಹೇಗೆ ಸ್ಥಾಪಿಸಬಲ್ಲದು?

• ಟಿ.ಎನ್.ವಾಸುದೇವಮೂರ್ತಿ

ಸೇವಾ ಭದ್ರತೆಗಾಗಿ ಆಗ್ರಹಿಸುತ್ತಿರುವ ಅತಿಥಿ ಉಪನ್ಯಾಸಕರ ಬೇಡಿಕೆ ಕೆಲವು ಗಂಭೀರ ಪ್ರಶ್ನೆಗಳನ್ನು ಮೂಡಿಸುವುದಲ್ಲದೆ, ಸರ್ಕಾರದ ಕೆಲವು ಲೋಪಗಳನ್ನು ಸಹ ಎತ್ತಿ ತೋರಿಸುತ್ತದೆ. ಬಡಪಾಯಿ ಅತಿಥಿ ಉಪನ್ಯಾಸಕರು ವೇತನದ ಪ್ರಮಾಣವನ್ನು ಆಧರಿಸಿ ಸರ್ಕಾರಿ ಗುಮಾಸ್ತರಿಗೆ ಪ್ರತೀ ಸಂಬಳಕ್ಕೂ ಲಂಚ ನೀಡಬೇಕಾಗಿದೆ. ಅಲ್ಲದೆ '₹ 50 ಲಕ್ಷದಿಂದ 60 ಲಕ್ಷ ಹಣ ಕೊಟ್ಟು ಹುದ್ದೆ ಪಡೆಯಲು ಪೈಪೋಟಿಗೆ ಇಳಿಯುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಸ್ವತಃ ಉನ್ನತ ಶಿಕ್ಷಣ ಸಚಿವರೇ ಇತ್ತೀಚೆಗೆ ಹೇಳಿಕೆ ನೀಡಿದ್ದರು (ಪ್ರ.ವಾ., ಅ. 24). ಇಂತಹ ಸನ್ನಿವೇಶದಲ್ಲಿ ಹಣ, ಪ್ರಭಾವಗಳ ಬಲವಿಲ್ಲದ ಅರ್ಹರಾದ ಅಭ್ಯರ್ಥಿಗಳ ಕೊಡುಗೆಗಳಿಂದ ವಿದ್ಯಾರ್ಥಿ ಸಮುದಾಯ ವಂಚಿತವಾಗುತ್ತದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಯಾವುದೇ ಅಭಿವೃದ್ಧಿಶೀಲ ದೇಶವು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ತನ್ನ ಬಜೆಟ್‌ನಲ್ಲಿ ಬಹುದೊಡ್ಡ ಪಾಲನ್ನು ಶಿಕ್ಷಣಕ್ಕೆ ಮೀಸಲಿಡುವುದನ್ನು ಯಾರೂ ವಿರೋಧಿಸಲಾರರು. ಆದರೆ ಆ ಹಣ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ವಿನಿಯೋಗವಾಗುತ್ತಿದೆಯೇ ಎಂದು ಅವಲೋಕಿಸಿದರೆ ವಿಷಾದವಾಗುತ್ತದೆ.

ಏಳನೇ ಪರಿಷ್ಕೃತ ವೇತನ ಆಯೋಗದ ಶಿಫಾರಸಿನ ಪ್ರಕಾರ, ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಿಗೆ ಪಾಠ ಮಾಡುವ ಉಪನ್ಯಾಸಕರು ಸರಾಸರಿ ಒಂದೂವರೆ ಲಕ್ಷದಿಂದ ಎರಡೂವರೆ ಲಕ್ಷ ರೂಪಾಯಿಗಳವರೆಗೆ ಸಂಬಳ ಪಡೆಯುತ್ತಿದ್ದಾರೆ. ಯುಜಿಸಿಯ ಈ ದುಬಾರಿ ಉಪಕ್ರಮವು ಶೈಕ್ಷಣಿಕ ಗುಣಮಟ್ಟದ ಉನ್ನತಿಗೆ ಯಾವುದೇ ರೀತಿಯಲ್ಲಿ ನೆರವಾದಂತಿಲ್ಲ. ಬದಲಾಗಿ ಮಾರಕವಾಗಿ ಪರಿಣಮಿಸಿದ ನಿದರ್ಶನಗಳು ಇವೆ.

ಇದಕ್ಕೆ ವ್ಯತಿರಿಕ್ತವಾಗಿ ಸರ್ಕಾರಿ ಉಪನ್ಯಾಸಕರ ವೇತನದ ಶೇ 10ಕ್ಕಿಂತಲೂ ಕಡಿಮೆ ಪ್ರಮಾಣದ ವೇತನ ಪಡೆಯುತ್ತ ಅತಂತ್ರ ಸ್ಥಿತಿಯಲ್ಲಿ ಬಾಳ್ವೆ ಮಾಡುತ್ತಿರುವ ಬಹುಸಂಖ್ಯಾತರಾದ ಅತಿಥಿ ಉಪನ್ಯಾಸಕ ಸಮುದಾಯವೂ ಉಂಟು. ಶಿಕ್ಷಕ ಸಮುದಾಯದ ಅಸಹನೆಯ ಬೇರುಗಳು ಅವೈಜ್ಞಾನಿಕವಾದ ಈ ವೇತನ ತಾರತಮ್ಯದಲ್ಲಿ ಹುದುಗಿವೆ. ಶಿಕ್ಷಣದ ಮೂಲ ಆಶಯವೇ ಸಮಾನತೆಯ ಸ್ಥಾಪನೆಯಾಗಿದೆ. ಆದರೆ ತನ್ನೊಳಗೇ ಅಸಮಾನತೆಯನ್ನು ಪೋಷಿಸಿಕೊಂಡಿರುವ ಶಿಕ್ಷಣ ವ್ಯವಸ್ಥೆ ಹೊರಗಿನ ಸಮಾಜದಲ್ಲಿ ಸಮಾನತೆಯನ್ನು ಹೇಗೆ ಸ್ಥಾಪಿಸುತ್ತದೆ ಎಂಬುದು ಬಗೆಹರಿಯದ ಪ್ರಶ್ನೆಯಾಗಿದೆ. ತನ್ನ ನೌಕರಿಗಾಗಿ 60 ಲಕ್ಷ ಹಣ ಖರ್ಚು ಮಾಡಬಲ್ಲ ಶಿಕ್ಷಕನಿಂದ ಶೈಕ್ಷಣಿಕ ಕೈಂಕರ್ಯವನ್ನು ನಿರೀಕ್ಷಿಸಲೂ ಆಗದು.

ಸಮಾನತೆ ಸ್ಥಾಪನೆಯ ಪ್ರಶ್ನೆ ಹಾಗಿರಲಿ. ಈ ತಾರತಮ್ಯದ, ವಿಷಮಾನುಪಾತದ ಈ ಅವೈಜ್ಞಾನಿಕ ವೇತನ ನೀತಿಯಿಂದ ಅಂತಿಮವಾಗಿ ಓದುವ ಮಕ್ಕಳಿಗೆ ಅನ್ಯಾಯವಾಗುತ್ತಿದೆ.

ಮೊನ್ನೆ ದಿನ, ತಿಂಗಳಿಗೆ 40 ಸಾವಿರ ರೂಪಾಯಿ ಆದಾಯ ತೆರಿಗೆ ಪಾವತಿಸುವ ನನ್ನ ಸ್ನೇಹಿತರಾದ ಕೆಲವು ಸರ್ಕಾರಿ ಉಪನ್ಯಾಸಕರು ಆದಾಯ ತೆರಿಗೆ ಪಾವತಿಯಿಂದ ಬಚಾವಾಗುವ ದಾರಿಗಳನ್ನು ಹುಡುಕುತ್ತಿದ್ದರು. ವಾಮಮಾರ್ಗಗಳ ಬಗೆಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು. ಲೆಕ್ಕಾಚಾರದಲ್ಲಿ ಮುಳುಗಿದ್ದರು. ಇಂಥವರಿಂದ ಗಂಭೀರ ಅಕಡೆಮಿಕ್ ಚರ್ಚೆ ನಿರೀಕ್ಷಿಸಲು ಸಾಧ್ಯವಿಲ್ಲ.

ಇನ್ನು ಕಡಿಮೆ ವೇತನ ಪಡೆಯುವ ಉಪನ್ಯಾಸಕರು ತಮ್ಮ ಜೀವನೋಪಾಯಕ್ಕಾಗಿ ಶಿಕ್ಷಕ ವೃತ್ತಿಯಲ್ಲದೆ ಅನ್ಯ ವೃತ್ತಿ, ವ್ಯವಹಾರೋದ್ಯಮಗಳಲ್ಲಿ ಅನಿವಾರ್ಯವಾಗಿ ತೊಡಗಿಕೊಳ್ಳಬೇಕಾಗಿದೆ. ಇಂತಹವರಿಗೆ ತಮ್ಮ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವ ಅನುಕೂಲವಾಗಲೀ ವ್ಯವಧಾನವಾಗಲೀ ಇರುವುದಿಲ್ಲ. ಒಟ್ಟಿನಲ್ಲಿ ಕುರುಡು ಕಾಂಚಾಣವು ಈ ಎರಡೂ ನಮೂನೆಯ ಉಪನ್ಯಾಸಕರನ್ನು ದಾರಿ ತಪ್ಪಿಸಿದೆ. ಅಂತಿಮವಾಗಿ ವಿದ್ಯಾರ್ಥಿಗಳ ಕಲಿಕೆಗೆ ಈ ಎರಡೂ ನಮೂನೆಯ ಉಪನ್ಯಾಸಕರಿಂದ ಅನ್ಯಾಯವಾಗುತ್ತಿದೆ.



ಗುತ್ತಿಗೆ ಕಾರ್ಮಿಕರು- ಪೌರಕಾರ್ಮಿಕರು, ಅತಿಥಿ ಶಿಕ್ಷಕರು- ಉಪನ್ಯಾಸಕರು, ಅಂಗನವಾಡಿ- ಆಶಾ ಕಾರ್ಯಕರ್ತೆಯರು, ಗುತ್ತಿಗೆ ವೈದ್ಯರು ತಮ್ಮ ಬದುಕುವ ಹಕ್ಕನ್ನು ಘೋಷಿಸಿ ಧ್ವನಿ ಎತ್ತಿದಾಗಲೆಲ್ಲ ಆಳುವ ಸರ್ಕಾರಗಳು ಅಂತಹ ಬೇಡಿಕೆಗಳ ನ್ಯಾಯೋಚಿತತೆಯನ್ನು ಪರಿಗಣಿಸದೆ ಅಪರಾಧಿಗಳಂತೆ ತಲೆಮರೆಸಿಕೊಳ್ಳುವುದು, ವೇತನವನ್ನು ಅಷ್ಟಿಷ್ಟು ಹೆಚ್ಚಿಸಿ ಸಮಸ್ಯೆಯನ್ನು ತಾತ್ಕಾಲಿಕವಾಗಿ ಮುಂದೂಡುವುದು ಶೋಭೆ ತರುವ ಸಂಗತಿಯಲ್ಲ. ಇಂದು ಎಲ್ಲ ವೃತ್ತಿಗಳಲ್ಲಿ ಕಂಡುಬರುತ್ತಿರುವ ಈ ಬಗೆಯ ತಾರತಮ್ಯಗಳನ್ನು ಹಂತ ಹಂತವಾಗಿ ಕಡಿಮೆ ಮಾಡುವ, ಇಲ್ಲವಾಗಿಸುವ ದಿಸೆಯಲ್ಲಿ ಸರ್ಕಾರಗಳು ಕಾರ್ಯಪ್ರವೃತ್ತವಾಗಬೇಕಿದೆ.

ನಮ್ಮ ನಾಯಕರು ನಾಳೆ ತಮ್ಮ ಮಕ್ಕಳು, ಮೊಮ್ಮಕ್ಕಳು ಇದೇ ಕಾರ್ಮಿಕರ, ಇದೇ ಶಿಕ್ಷಕರ, ಇದೇ ವೈದ್ಯರುಗಳ ಆಶ್ರಯದಲ್ಲಿ ಬಾಳಬೇಕಾಗುತ್ತದೆ ಎಂಬ ಅರಿವಿನೊಂದಿಗೆ ಇವರ ಸಮಸ್ಯೆಗಳತ್ತ ಕಣ್ತೆರೆದು ನೋಡಬೇಕಾಗಿದೆ. ವ್ಯವಸ್ಥೆಯ ಯಾವುದೇ ಹಂತದಲ್ಲಿ ತಾರತಮ್ಯ ಕಂಡುಬಂದರೆ ಅದನ್ನು ಪ್ರಜಾಪ್ರಭುತ್ವ ವ್ಯವಸ್ಥೆ ಎನ್ನಲು ಬರುವುದಿಲ್ಲ.

ಸಮಾನತೆಯ ಮೌಲ್ಯವನ್ನರಿಯದಿದ್ದ ಮಧ್ಯಯುಗದ ಕೆಲವು ಹಿತಾಸಕ್ತಿಗಳು ತಾರತಮ್ಯ-ಶ್ರೇಣೀಕರಣವನ್ನು ಪೋಷಿಸಿಕೊಂಡಿದ್ದವು. ಆದರೆ ಪ್ರಜಾಪ್ರಭುತ್ವವನ್ನೇ ಪರಮಮೌಲ್ಯವೆಂದು ನಂಬಿರುವ ನಾವು ಅದೇಕೆ ಯಥಾಸ್ಥಿತಿಯನ್ನು ವ್ಯವಸ್ಥಿತವಾಗಿ ಮುಂದುವರಿಸಿಕೊಂಡು ಬರುತ್ತಿದ್ದೇವೆ ಎಂಬುದು ಅರ್ಥವಾಗುತ್ತಿಲ್ಲ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಜ್ಯೋತಿನಿವಾಸ್ ಕಾಲೇಜ್, ಬೆಂಗಳೂರು

ವಾಚಕರ ವಾಣಿ

ಇಬ್ಬಗೆ ಧೋರಣೆ!

ಭಾರತೀಯ ಮೂಲದ ಬ್ರಿಟನ್ ರಾಜಕಾರಣಿ ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನಿಯಾಗುವ ಸಂಭವದ ಸುದ್ದಿ (ಪ್ರ.ವಾ., ಜ. 15) ಭಾರತೀಯರಿಗೆ ಹೆಮ್ಮೆಯ ವಿಚಾರ. ಇಲ್ಲಿನ ಜಾಲತಾಣಗಳಲ್ಲಿ ಪ್ರಶಂಸೆ, ಹಾರೈಕೆ. ಈ ಮೊದಲು ನಮ್ಮ ದೇಶದಲ್ಲಿ ಇಟಲಿ ಮೂಲದ ಪ್ರಧಾನಿ ಬೇಡ (ಭಾರತದ ವಾಸಿ, ಚುನಾಯಿತ ಸದಸ್ಯೆ) ಎಂದು ಕೆಲವರು ದೇಶದಲ್ಲೆಲ್ಲಾ ಬೊಬ್ಬೆ ಹಾಕಿದ್ದು, ನಮ್ಮವರ ಇಬ್ಬಗೆಯ ಧೋರಣೆಯನ್ನು ನೆನಪಿಸಿತು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಸಣ್ಣ ರೈತರ ಕಷ್ಟ ಕೇಳುವವರಾರು?

ವಾರಾಂತ್ಯ ಕರ್ಫ್ಯೂವಿನಿಂದ ಸಣ್ಣ ರೈತರು ತೊಂದರೆ ಪಡುವಂತಾಗಿದೆ. ಎಷ್ಟೋ ಸಣ್ಣ ರೈತರು ತಾವು ಬೆಳೆದ ಹೂ, ಹಣ್ಣು, ತರಕಾರಿ, ಸೊಪ್ಪುಗಳನ್ನು ಬೀದಿ ಬದಿಯಲ್ಲಿ ವ್ಯಾಪಾರ ಮಾಡಿ ಆದಾಯ ಗಳಿಸುತ್ತಿದ್ದರು ಮತ್ತು ಅವರ ಈ ಆದಾಯ ದುಪ್ಪಟ್ಟು ಆಗುತ್ತಿದ್ದುದು ವಾರಾಂತ್ಯದಲ್ಲೇ. ರೈತರು ಬೆಳೆದ ತರಕಾರಿಗಳಾದ ಮೂಲಂಗಿ, ಮೆಂತೆ, ಕೊತ್ತಂಬರಿ, ಪಾಲಕ್‌ನಂತಹವು ಸಾರಿಗೆ ಸಂಪರ್ಕದ ಕೊರತೆಯಿಂದ ಹೊಲದಲ್ಲಿ ಕೆಡುತ್ತಿವೆ. ಇದರಿಂದ ರೈತರ ಆದಾಯ ಕ್ಷೀಣಿಸುವುದಲ್ಲದೆ, ದೇಶದಲ್ಲಿ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಬೇಗ ನಶಿಸಿ ಹೋಗುವ ರೈತರ ಬೆಳೆಗಳಿಗೆ ಸರಿಯಾದ ಮಾರುಕಟ್ಟೆ ಮತ್ತು ಬೆಲೆಯನ್ನು ಒದಗಿಸುವತ್ತ ಸರ್ಕಾರ ಗಮನ ಹರಿಸಬೇಕಾಗಿದೆ.

ಮಹೇಶ ಕೇವಂಟಗಿ, ಕಲಬುರಗಿ

ಏಕಕಾಲಕ್ಕೆ ಎರಡು ಕಡೆ ಕೆಲಸ

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ವೇತನ ಹೆಚ್ಚಳಕ್ಕೆ ಸರ್ಕಾರ ಮುಂದಾಗಿದೆ. ಆದರೆ ರಾಜ್ಯದ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಏಕಕಾಲದಲ್ಲಿ ಕೆಲಸ ಮಾಡಿಕೊಂಡು ಎರಡೂ ಕಡೆ ವೇತನ ಪಡೆಯುತ್ತಿರುವವರ ಬಗ್ಗೆ ಹಾಗೂ ಇದರಿಂದ ನೂರಾರು ಅರ್ಹ ಅಭ್ಯರ್ಥಿಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಬಹಳಷ್ಟು ಬಾರಿ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದು ಖಂಡನೀಯ.

ಏಕೆಂದರೆ ಮೊದಲನೆಯದಾಗಿ, ಒಬ್ಬ ವ್ಯಕ್ತಿ ಏಕಕಾಲಕ್ಕೆ ಎರಡು ಕಡೆ ಕೆಲಸ ಮಾಡುವುದು ತಾಂತ್ರಿಕವಾಗಿ ಅಸಾಧ್ಯ. ಎರಡನೆಯದಾಗಿ, ಒಬ್ಬನೇ ವ್ಯಕ್ತಿಗೆ ಎರಡು ಕಡೆ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟು ಇನ್ನೊಬ್ಬ ಅರ್ಹ ವ್ಯಕ್ತಿ 'ಊಟವಿಲ್ಲದೆ ಹಸಿದುಕೊಂಡು ಮಲಗುವಂತೆ ಮಾಡುವುದು' ಜವಾಬ್ದಾರಿಯುತ ಸರ್ಕಾರ ಹಾಗೂ ಸಮಾಜದ ಲಕ್ಷಣವಲ್ಲ. ಇದು ಸರ್ಕಾರವೇ ಮಾಡುತ್ತಿರುವ 'ಸಾಮಾಜಿಕ ಅನ್ಯಾಯ'. ಹೀಗಾಗಿ ಸರ್ಕಾರ ಎರಡೂ ಕಡೆ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರನ್ನು ತಕ್ಷಣ ತೆಗೆದುಹಾಕಿ ಅರ್ಹ ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಟ್ಟು 'ಸಾಮಾಜಿಕ ನ್ಯಾಯ' ದೊರಕಿಸಲಿ.

ರಾಜಶೇಖರ ಮೂರ್ತಿ, ಬೆಳಗನಹಳ್ಳಿ, ಎಚ್‌.ಡಿ.ಕೋಟೆ

ಗಾದೆ- ನ್ಯಾಯ!

'ಅತ್ತೆಯೇ ಸೊಸೆಗೆ ಚಿತ್ರಹಿಂಸೆ ನೀಡಿದಾಗ...
(ಪ್ರ.ವಾ., ಜ. 12).
'ಅತ್ತೆಗೊಂದು ಕಾಲ
ಸೊಸೆಗೊಂದು ಕಾಲ'
ಎಂಬ ಸಾರ್ವಕಾಲಿಕ
ಗಾದೆಯೇ ಇರುವಾಗ,
ಸರ್ವೋಚ್ಚ ನ್ಯಾಯಾಲಯ
ತೂರಿಸಬೇಕೇಕೆ ಮೂಗ?
(ಅಂತೂ ವಿ'ಚಿತ್ರ')

ಸಿ.ಪಿ.ಕೆ., ಮೈಸೂರು

ಬೆಳೆ ಪರಿಹಾರ ಬರೀ ಘೋಷಣೆಯಾಯಿತೇ?

ಕಳೆದ ಮಳೆಗಾಲದಲ್ಲಿ ಸುರಿದ ಮಹಾಮಳೆಗೆ ರಾಜ್ಯದ ಬಹುತೇಕ ರೈತರು ಸಮಸ್ಯೆಗೆ ಸಿಲುಕಿದರು. ಕಾಫಿ-ರಾಗಿ ಎನ್ನದೆ ಮಲೆನಾಡು-ಬಯಲುಸೀಮೆಯ ರೈತರು ಬೆಳೆನಷ್ಟ ಅನುಭವಿಸಿದ್ದಾರೆ. ಇದನ್ನು ಮನಗಂಡ ಸರ್ಕಾರ, ಬೆಳೆಗೆ ಅನ್ವಯವಾಗಿ ಬೆಳೆ ಪರಿಹಾರವನ್ನು ಘೋಷಿಸಿತು. ಹಾನಿಯಾದ ಬೆಳೆಯ ಚಿತ್ರಗಳನ್ನು ನವೆಂಬರ್ ತಿಂಗಳಲ್ಲೇ ರೈತರ ಹಣದಿಂದಲೇ ಪ್ರಿಂಟ್ ಮಾಡಿಸಿ, ಸಂಗ್ರಹಿಸಲಾಯಿತು. ನಂತರ ಡಿಸೆಂಬರ್‌ವರೆಗೂ ಮಳೆಯ ಅಬ್ಬರವೇನೂ ಕಡಿಮೆಯಾಗಲಿಲ್ಲ. ಎಷ್ಟೋ ಮಂದಿಯ ಬೆಳೆ ಸಂಪೂರ್ಣವಾಗಿ ಹಾನಿಯಾಯಿತು. ಮತ್ತೊಮ್ಮೆ ಬೆಳೆ ಪರಿಹಾರದ ಘೋಷಣೆಯೂ ನಡೆಯಿತು. ಆದರೆ, ಇಲ್ಲಿಯವರೆಗೂ ಸರ್ಕಾರ ಪರಿಹಾರ ನೀಡಿಲ್ಲ. ಎಲ್ಲಾ ಘೋಷಣೆಗಳಂತೆ ಬೆಳೆ ಪರಿಹಾರವೂ ಘೋಷಣೆಯಾಗಿ ಉಳಿಯಿತೇ ಎಂಬ ಅನುಮಾನ ರೈತರನ್ನು ಕಾಡುತ್ತಿದೆ.

ಶಾಂತರಾಜು ಎಸ್.ಮಳವಳ್ಳಿ, ಬೆಂಗಳೂರು

ಸಂಭಾವ್ಯ ಹಾನಿಯ ನಿಖರ ಅಂದಾಜು ಆಗಲಿ

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಮೇಧಾ ಪಾಟ್ಕರ್ ಅವರ ಹೇಳಿಕೆ ಹಾಗೂ ಅದಕ್ಕೆ ಡಿ.ಕೆ.ಶಿವಕುಮಾರ್ ಅವರ ಪ್ರತಿಕ್ರಿಯೆ ಓದಿ ಈ ಪತ್ರ. ಮೂಲತಃ ಇದು 'ಬೃಹತ್' ನೀರಾವರಿ ಯೋಜನೆ ಅಲ್ಲ. ಕಾವೇರಿ ನದಿ ಸದ್ಯಕ್ಕಂತೂ ಸಟ್ಲೆಜ್‌ನಂತಾಗದು. ವೃಷಭಾವತಿ ಪ್ರದೇಶದಲ್ಲಿ ಹಿಂದಿನ ವರ್ಷ ತುಸು ಸುಧಾರಣೆ ಆಗಿದೆ. ಮೇಧಾ ಅವರು ಹೇಳಿರುವ ಇತರ ಅಂಶಗಳು ಸುಮಾರು ಮೂವತ್ತು ವರ್ಷ ಹಳೆಯವು. ಈ ಯೋಜನೆಗೆ ವಿದೇಶಿ ಆರ್ಥಿಕ ನೆರವು ದೊರಕುವ ಬಗೆಗೆ ಮಾಹಿತಿ ಇಲ್ಲ. ಮುಳುಗಡೆಯಾಗುವ ಐದು ಹಳ್ಳಿಗಳಲ್ಲಿ ಆದಿವಾಸಿಗಳು ಎಷ್ಟಿದ್ದಾರೆ? ತಿಳಿಯಲಿ. ಅರಣ್ಯ ಭೂಮಿಯಲ್ಲಿ ಅಭಯಾರಣ್ಯದ ಪ್ರದೇಶವೇ ಹೆಚ್ಚು. ಸಂಭಾವ್ಯ ಹಾನಿಯ ನಿಖರ ಅಂದಾಜು ಆಗಬೇಕು.

ಮಂಡ್ಯದ ಆ್ಯಕ್ಟಿವಿಸ್ಟ್ ಒಬ್ಬರು 'ಹೆಚ್ಚುವರಿ ನೀರು ನೀರಾವರಿಗೆ ಸಿಗುತ್ತದೆ ಎಂಬುದು ಸುಳ್ಳು ಆಶ್ವಾಸನೆ' ಎಂದಿದ್ದಾರೆ. ಇದು ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆಗೆ ಸೀಮಿತವಾದ ಯೋಜನೆ. 'ಮುಂದೆ ಒಂದು ಜಿಲ್ಲೆಯನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟಬಹುದು' ಎಂದೂ ಹೆದರಿಸಿದ್ದಾರೆ. ಈಗಾಗಲೇ ಯಾವ ಕೆರೆಗೆ ನೀರು ಬಿಡಬೇಕು ಎಂಬ ಬಗೆಗೆ ತಾಲ್ಲೂಕುಗಳ ನಡುವೆಯೇ ತಿಕ್ಕಾಟ ಇಲ್ಲವೇ? ನ್ಯಾಯಾಲಯ ಇದೇ 23ರಂದು ವಿಚಾರಣೆ ನಡೆಸಲಿದೆ. ಕ್ಲಿಯರೆನ್ಸ್ ಸಿಕ್ಕರೂ ವಿವಿಧ ಇಂಪ್ಯಾಕ್ಟ್ ಅಸೆಸ್ಮೆಂಟ್ ನಡೆಯುತ್ತವೆ. ಹೀಗಿರುವಾಗ ಪಾದಯಾತ್ರೆ ಹಾಗೂ ಇಂತಹ 'ಪ್ರಚಾರ' ಕಾರ್ಯಗಳು ನಡೆಯಬೇಕೇ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

Japan - India Friendly Relations 70th Anniversary of the Establishment of Diplomatic Relations

ಭಾರತ–ಜಪಾನ್ ನಂಟು ಏಳು ದಶಕಗಳ ಬಾಂಧವ್ಯ

● ಅಕಿಕೊ ಸುಗಿತಾ



ಭಾರತ ಮತ್ತು ಜಪಾನ್ ನಡುವಣ ರಾಜತಾಂತ್ರಿಕ ಸಂಬಂಧ ಸ್ಥಾಪನೆಯಾಗಿ 70 ವರ್ಷ ತುಂಬಿವೆ. ಈ ಸಂಭ್ರಮವನ್ನು ವಿಶೇಷ ಕಾರ್ಯಕ್ರಮಗಳ ಮೂಲಕ ಸ್ಮರಣೀಯವಾಗಿಸಲು ಯೋಜಿಸಲಾಗಿದೆ. ಹಳೆಯದನ್ನು ಮೆಲುಕು ಹಾಕಲು, ವರ್ತಮಾನದ ಬಗ್ಗೆ ಜಾಗೃತವಾಗಿರಲು ಮತ್ತು ಭವಿಷ್ಯದ ದೃಷ್ಟಿಕೋನ ರೂಪಿಸಲು ಇದೊಂದು ಸುಸಂದರ್ಭ. ಜಪಾನ್–ಭಾರತ ದ್ವಿಪಕ್ಷೀಯ ಸಂಬಂಧದ 70ನೇ ವರ್ಷ ಮತ್ತು ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವವು ಜತೆಯಾಗಿ ಬಂದಿರುವುದು ಸಂಭ್ರಮವು ದುಪ್ಪಟ್ಟಾಗಲು ಕಾರಣವಾಗಿದೆ.

ಭಾರತ–ಜಪಾನ್‌ನ ದ್ವಿಪಕ್ಷೀಯ ಸಂಬಂಧ 1952ರಲ್ಲಿ ಔಪಚಾರಿಕವಾಗಿ ಆರಂಭವಾಯಿತು. ಎರಡನೇ ಜಾಗತಿಕ ಯುದ್ಧದ ನಂತರ, ಬಹುಪಕ್ಷೀಯವಾದ ಸ್ಯಾನ್ ಫ್ರಾನ್ಸಿಸ್ಕೊ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಬದಲು ಭಾರತವು ಜಪಾನ್ ಜತೆಗೆ ದ್ವಿಪಕ್ಷೀಯ ಒಪ್ಪಂದ ಮಾಡಲು ನಿರ್ಧರಿಸಿತು. ಜಪಾನ್, ಅಂತರರಾಷ್ಟ್ರೀಯ ಸಮುದಾಯವನ್ನು ಗೌರವ ಮತ್ತು ಸಮಾನತೆಯ ನೆಲೆಯಲ್ಲಿ ಸೇರಲು ಸಾಧ್ಯವಾಗುವಂತೆ ಮಾಡಲು ಭಾರತವು ಈ ಕ್ರಮ ಕೈಗೊಂಡಿತ್ತು. ಎರಡೂ ದೇಶಗಳ ಸುದೀರ್ಘ ಸ್ನೇಹಕ್ಕೆ ಇದುವೇ ನೆಲೆಗಟ್ಟು. ರಾಜತಾಂತ್ರಿಕ ಸಂಬಂಧ ಸ್ಥಾಪನೆಗೆ ಬಹಳ ಹಿಂದಿನಿಂದಲೂ ವ್ಯಾಪಾರ, ಶಿಕ್ಷಣ ಮತ್ತು ಸಾಂಸ್ಕೃತಿಕ ವಿನಿಮಯಗಳ ಮೂಲಕ ಎರಡೂ ದೇಶಗಳ ಜನರ ನಡುವೆ ಸದಭಿಪ್ರಾಯವು ಆಳವಾಗಿ ಬೇರೂರಿತ್ತು.

1951ರಲ್ಲಿ ಭಾರತವು ಮೊದಲ ಏಷ್ಯನ್ ಗೇಮ್ಸ್ ಕ್ರೀಡಾಕೂಟವನ್ನು ದೆಹಲಿಯಲ್ಲಿ ಆಯೋಜಿಸಿತ್ತು. ಈ ಕೂಟಕ್ಕೆ ಜಪಾನ್‌ನ ಕ್ರೀಡಾಪಟುಗಳನ್ನು ಆಹ್ವಾನಿಸಿತ್ತು. ಎರಡನೇ ಜಾಗತಿಕ ಮಹಾಯುದ್ಧದ ನಂತರ ಜಪಾನ್‌ನ ಧ್ವಜವು ಹಾರಾಡಿದ ಮೊದಲ ಸಂದರ್ಭ ಅದಾಗಿತ್ತು. ತಮ್ಮ ದೇಶವನ್ನು ಕಟ್ಟಲು ಹೋರಾಡುತ್ತಿದ್ದ ಜಪಾನ್‌ನ ಜನರ ಮನಸ್ಸಿಗೆ ಸಾಂತ್ವನ ಹೇಳಿದ ಸನ್ನಿವೇಶ ಅದು. 70 ವರ್ಷಗಳ ಬಹು ಆಯಾಮಗಳ ಕೊಡು-ಕೊಳುವಿಕೆಯ ನಂತರ ಈಗ ಎರಡೂ ದೇಶಗಳ ನಡುವಣ ಸಂಬಂಧವು ರಕ್ಷಣೆ ಮತ್ತು ಜಾಗತಿಕ ಪಾಲುದಾರಿಕೆಯ ವಿಶೇಷ ಘಟ್ಟಕ್ಕೆ ತಲುಪಿದೆ. ಏಷ್ಯಾ ಮತ್ತು ಅದರಾಚೆಗೆ, ಶಾಂತಿ, ಸ್ಥಿರತೆ ಮತ್ತು ಅಭಿವೃದ್ಧಿಗೆ ಒತ್ತು ನೀಡುವಿಕೆಯಲ್ಲಿ ನೀಡಿದ ಕೊಡುಗೆಗಳ ಬಗ್ಗೆ ಎರಡೂ ದೇಶಗಳಿಗೆ ಪರಸ್ಪರ ಗೌರವವಿದೆ. ಅದರ ಆಧಾರದಲ್ಲಿ ನಮ್ಮ ಪಾಲುದಾರಿಕೆಯು ನಿಂತಿದೆ. ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶವನ್ನು ಮುಕ್ತವಾಗಿ ಇರಿಸುವಲ್ಲಿ ಮತ್ತು ವಿವಿಧ ಜಾಗತಿಕ ವಿಚಾರಗಳಲ್ಲಿ ನಾವು ಸಹಜ ಪಾಲುದಾರರು ಎಂದು ಪರಿಗಣಿಸುತ್ತೇವೆ. ಉಭಯ ದೇಶಗಳ ಪ್ರಧಾನಿಗಳ ನೇತೃತ್ವದಲ್ಲಿ ಇದು ಸಾಧ್ಯವಾಗಿದ್ದಕ್ಕೆ ಹೆಮ್ಮೆ ಇದೆ.

ಜನರ ನಡುವಣ ಸಂಪರ್ಕಕ್ಕೆ ಬಹು ದೀರ್ಘ ಕಾಲದ ಇತಿಹಾಸವಿದ್ದು, ಆರನೇ ಶತಮಾನದಿಂದಲೇ ಅದನ್ನು ಗುರುತಿಸಬಹುದು. ಬೌದ್ಧ ಧರ್ಮವು ಭಾರತದಿಂದ ಜಪಾನ್‌ಗೆ ಬಂತು. 752ರಲ್ಲಿ ಭಾರತದ ಬೌದ್ಧ ಸನ್ಯಾಸಿ ಬೋಧಿಸೇನ ಅವರು ತೊಡೈ-ಜಿಯಲ್ಲಿನ ಬುದ್ಧನ ಮಹಾ ಪ್ರತಿಮೆಗೆ ಪೂಜೆ ಸಲ್ಲಿಸಿದ್ದರು. ಇದು ಜಪಾನ್‌ನ ಅತ್ಯಂತ ಮಹತ್ವದ ದೇಗುಲಗಳಲ್ಲಿ ಒಂದು. 19ನೇ ಶತಮಾನದಲ್ಲಿ ಮೈಜಿ ದೊರೆಯ ಯುಗದಲ್ಲಿ ಜಪಾನ್‌ನ ಪುನರುತ್ಥಾನ ಸಂದರ್ಭದಲ್ಲಿ ದೇಶವನ್ನು ಆಧುನಿಕಗೊಳಿಸಲು ನೈಸರ್ಗಿಕ ಸಂಪನ್ಮೂಲಗಳ ಅಗತ್ಯ ಇತ್ತು. ಜಪಾನ್‌ನ ಹಲವರು ಭಾರತಕ್ಕೆ ಬಂದು ಹತ್ತಿ, ಕಬ್ಬಿಣದ ಅದಿರು ಇತ್ಯಾದಿ ಒಯ್ದಿದ್ದರು. ಕಲಾವಿದರ ನಡುವಣ ಸಂಬಂಧವನ್ನು ಉಲ್ಲೇಖಿಸಲೇಬೇಕು. ಸಾಹಿತ್ಯದ ನೊಬೆಲ್ ಪ್ರಶಸ್ತಿ ಪುರಸ್ಕೃತ ರವೀಂದ್ರನಾಥ ಟ್ಯಾಗೋರ್ ಮತ್ತು ಒಕಕುರ ತೆನ್‌ಶಿನ್ ನಡುವಣ ಸಂವಹನವು ಇಲ್ಲಿ ಗಮನಾರ್ಹ. ತೆನ್‌ಶಿನ್ ಅವರು ಜಪಾನ್‌ನ ತತ್ವಜ್ಞಾನಿ. ಟ್ಯಾಗೋರ್ ಮತ್ತು ತೆನ್‌ಶಿನ್ ಇಬ್ಬರೂ ಸ್ವಾಮಿ ವಿವೇಕಾನಂದರಿಂದ ಸ್ಫೂರ್ತಿ ಪಡೆದವರು.

‘ನಮ್ಮ ಶತಮಾನೋತ್ಸವಕ್ಕೆ ಭವಿಷ್ಯ ನಿರ್ಮಾಣ’ ಎಂಬುದು ಭಾರತ–ಜಪಾನ್ ನಡುವಣ ದ್ವಿಪಕ್ಷೀಯ ಸಂಬಂಧದ 70ನೇ ವಾರ್ಷಿಕೋತ್ಸವದ ತಿರುಳು. ಈ ಮಂತ್ರವು ಈ ವರ್ಷ ನಮ್ಮನ್ನು ಮುನ್ನಡೆಸಲಿದೆ. ನಾವು ಒಟ್ಟಾಗಿ ನಮ್ಮ ಭವಿಷ್ಯವನ್ನು ಕಟ್ಟಿಕೊಳ್ಳಲಿದ್ದೇವೆ ಮತ್ತು 100ನೇ ವಾರ್ಷಿಕೋತ್ಸವ ಹಾಗೂ ಅದರಾಚೆಗೂ ಮುನ್ನುಗ್ಗಲಿದ್ದೇವೆ ಎಂಬುದು ಇಲ್ಲಿನ ಸಂದೇಶವಾಗಿದೆ. ನಮ್ಮ ಸಹಭಾಗಿತ್ವಕ್ಕೆ ಭವಿಷ್ಯವು ಅಪಾರ ಸಾಧ್ಯತೆಗಳನ್ನು ತೆರೆದಿರಿಸಿದೆ ಎಂಬುದನ್ನು ನಾನು ಬಲವಾಗಿ ನಂಬಿದ್ದೇನೆ.

ಮೊದಲನೆಯದಾಗಿ, ಏಷ್ಯಾದ ಪ್ರಜಾಸತ್ತಾತ್ಮಕ ರಾಷ್ಟ್ರಗಳಾಗಿ ಜಾಗತಿಕ ಶಾಂತಿ ಮತ್ತು ಸಮೃದ್ಧಿಗೆ ನಾವು ಪರಸ್ಪರ ಸಹಕರಿಸಲಿದ್ದೇವೆ. ಸಮಾನ ಮೌಲ್ಯಗಳು ಮತ್ತು ಪರಂಪರೆಗಳ ದೃಢ ನೆಲೆಗಟ್ಟಿನಲ್ಲಿ ನಾವು ರಾಜಕೀಯ ಆರ್ಥಿಕ ಮತ್ತು ರಕ್ಷಣಾ ಹಿತಾಸಕ್ತಿಗಳನ್ನು ಹಂಚಿಕೊಂಡಿದ್ದೇವೆ. ವಿಶೇಷವಾಗಿ, ನಿಯಮ ಆಧಾರಿತವಾದ ಮತ್ತು ಮುಕ್ತವಾದ ಅಂತರರಾಷ್ಟ್ರೀಯ ವ್ಯವಸ್ಥೆ ನಿರ್ಮಾಣಕ್ಕಾಗಿ ನಮ್ಮ ಶ್ರಮವನ್ನು ಮುಂದುವರಿಸಿದ್ದೇವೆ.

ಎರಡನೆಯದಾಗಿ, ಆರ್ಥಿಕ ಸಂಬಂಧವನ್ನು ಇನ್ನಷ್ಟು ಗಾಢಗೊಳಿಸಬಹುದಾಗಿದೆ. ಜಪಾನ್ ಬಹು ದೀರ್ಘ ಕಾಲ ಭಾರತಕ್ಕೆ ಅಧಿಕೃತ ಅಭಿವೃದ್ಧಿ ನೆರವಿನ ದಾನಿ ಆಗಿತ್ತು. ನಮ್ಮ ಸಹಭಾಗಿತ್ವದ ಒಂದು ಉದಾಹರಣೆ ಬೆಂಗಳೂರು ಮೆಟ್ರೊ ಮಾರ್ಗ. ಪೂರ್ವ-ಪಶ್ಚಿಮ ಮಾರ್ಗವು 2016ರಲ್ಲಿ ಮತ್ತು ದಕ್ಷಿಣ–ಉತ್ತರ ಮಾರ್ಗವು 2017ರಲ್ಲಿ ಕಾರ್ಯಾರಂಭ ಮಾಡಿದವು. ಭಾರತದಲ್ಲಿ ಅತಿ ಹೆಚ್ಚು ಹೂಡಿಕೆ ಮಾಡಿದ ದೇಶಗಳಲ್ಲಿ ಜಪಾನ್ ಕೂಡ ಒಂದು. ಸಾಮಾಜಿಕ ಮೂಲಸೌಕರ್ಯ ಮತ್ತು ಸಂಪರ್ಕವನ್ನು ವೃದ್ಧಿಸಲು ಮೂರನೇ ದೇಶಗಳಿಗೆ ಆರ್ಥಿಕ ಸಹಕಾರಕ್ಕೆ ಎರಡೂ ದೇಶಗಳು ಪ್ರೋತ್ಸಾಹ ನೀಡಿವೆ.

ಮೂರನೆಯದಾಗಿ, ಸಾಂಸ್ಕೃತಿಕ ವಿನಿಮಯದಲ್ಲಿ ಸಾಹಿತ್ಯ, ಸಿನಿಮಾ, ಸಂಗೀತ, ಅನಿಮಿ (ಜಪಾನ್‌ನ ವಿಶಿಷ್ಟವಾದ ಆ್ಯನಿಮೇಷನ್), ಕ್ರೀಡೆ ಮತ್ತು ಶಿಕ್ಷಣ ನಮ್ಮ ಸಂಬಂಧಕ್ಕೆ ಅಗತ್ಯ ಮತ್ತು ಇವು ಪರಸ್ಪರ ಗ್ರಹಿಕೆಯನ್ನು ಗಟ್ಟಿಗೊಳಿಸುತ್ತವೆ. ಜಪಾನ್‌ನ ವಿದ್ಯಾರ್ಥಿಗಳ ಸಂಖ್ಯೆ ಬೆಂಗಳೂರಿನಲ್ಲಿ ಹೆಚ್ಚುತ್ತಿರುವುದು ಸಂತಸದ ವಿಚಾರ. ಈ ಯುವ ಮತ್ತು ಚಿಂತನಶೀಲ ಮನಸ್ಸುಗಳು ನಮ್ಮ ದೇಶಗಳ ನಡುವಣ ಸಂಬಂಧವು ಭವಿಷ್ಯದಲ್ಲಿ ಇನ್ನಷ್ಟು ಸದೃಢಗೊಳ್ಳಲು ನೆಲೆಗಟ್ಟಾಗಲಿವೆ ಎಂಬ ಗಟ್ಟಿ ನಂಬಿಕೆ ನನ್ನಲ್ಲಿದೆ. ಫೆಬ್ರುವರಿ 28ರಿಂದ ಮಾರ್ಚ್ 6ರವರೆಗೆ ಜಪಾನ್ ಆಹಾರೋತ್ಸವವು ವರ್ಚುವಲ್ ಆಗಿ ನಡೆಯಲಿದೆ ಎಂಬುದು ಕೂಡ ಸಂಭ್ರಮದ ವಿಷಯವೇ. ಬೆಂಗಳೂರಿನಲ್ಲಿರುವ ಜಪಾನೀಸ್ ರೆಸ್ಟೊರೆಂಟ್‌ಗಳು, ಜಪಾನ್‌ನ ಆಹಾರ ಕಂಪನಿಗಳು ಇದರಲ್ಲಿ ಭಾಗಿ ಆಗಲಿವೆ.

ಕೋವಿಡ್ ಸಾಂಕ್ರಾಮಿಕ ಇದ್ದರೂ ನಮ್ಮ ಸಂಬಂಧವು ಬೆಳೆಯುತ್ತಲೇ ಹೋಗಲಿದೆ. ಮುಖಾಮುಖಿ ಸಂವಹನಗಳ ಮೇಲೆ ಸಾಂಕ್ರಾಮಿಕವು ಪರಿಣಾಮ ಬೀರಿದೆ. ಆದರೆ, ಅದು ನಮ್ಮ ಸಂಬಂಧವನ್ನು ದುರ್ಬಲಗೊಳಿಸಿಲ್ಲ ಎಂಬುದು ನಿಜ. ನಮ್ಮ ಸಂಬಂಧ ಎಷ್ಟು ದೃಢವಾಗಿದೆ ಎಂಬುದಕ್ಕೆ ಅದರ ಸುದೀರ್ಘ ಇತಿಹಾಸವೇ ಪುರಾವೆ. ಭವಿಷ್ಯದ ಬಗೆಗಿನ ನಮ್ಮ ಸಮಾನ ದೃಷ್ಟಿಕೋನವನ್ನು ಎಂದೂ ಯಾವುದೂ ಬಾಧಿಸದು. ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ ಮತ್ತು ಆವಿಷ್ಕಾರಕ ವಿಧಾನಗಳ ಮೂಲಕ ಸಾಂಕ್ರಾಮಿಕದ ಸಂದರ್ಭದಲ್ಲಿಯೂ ಪರಸ್ಪರರ ಜತೆ ಸಂಪರ್ಕದಲ್ಲಿ ಇರಲು ಸಾಧ್ಯ.

ವಿಶೇಷವಾದ 2022ನೇ ವರ್ಷದ ಶುಭಾಶಯಗಳನ್ನು ಹೇಳುತ್ತಾ ಲೇಖನವನ್ನು ಮುಗಿಸುತ್ತೇನೆ. ನಮ್ಮೆರಡೂ ದೇಶಗಳ ಜನರಿಗೆ ಈ ವರ್ಷವು ಸ್ಮರಣೀಯವಾಗಲಿ ಎಂದು ಹಾರೈಸುತ್ತೇನೆ.

ಲೇಖಕಿ: ಬೆಂಗಳೂರಿನಲ್ಲಿ ಜಪಾನ್‌ನ ಕಾನ್ಸುಲ್ ಜನರಲ್



ಪ್ರಧಾನಿ ನರೇಂದ್ರ ಮೋದಿ ಅವರು 2018ರಲ್ಲಿ ಜಪಾನ್‌ಗೆ ಭೇಟಿ ನೀಡಿದ್ದಾಗ ಆಗಿನ ಜಪಾನ್ ಪ್ರಧಾನಿ ಶಿಂಜೊ ಅಬೆ ಜತೆಗೆ ರಾಯಿಟರ್ಸ್ ಚಿತ್ರ

ಎಂದೂ ಬತ್ತದ ಬಂಧ

ಭಾರತ ಹಾಗೂ ಜಪಾನ್ ನಡುವಿನ ಸಂಬಂಧ ಧರ್ಮ ಹಾಗೂ ಸಂಸ್ಕೃತಿಯ ನೆಲೆಯಲ್ಲಿ ಕ್ರಿಸ್ತಶಕ 752ರಲ್ಲೇ ಶುರುವಾಗಿತ್ತು. ಬೌದ್ಧಧರ್ಮವು ಜಪಾನ್ ಜನರ ಸಾಂಸ್ಕೃತಿಕ ಜೀವನದ ಮೇಲೆ ಬಹುದೊಡ್ಡ ಪರಿಣಾಮ ಉಂಟು ಮಾಡಿದೆ. ಚೀನಾದ ಪ್ರಾದೇಶಿಕ ಬೆದರಿಕೆಯ ನಡುವೆಯೂ, ಏಷ್ಯಾದ ಈ ಪ್ರಮುಖ ದೇಶಗಳ ಸಂಬಂಧವು ಇನ್ನಷ್ಟು ಬಿಗಿಯಾಗಿದೆ

1952 ಎರಡೂ ದೇಶಗಳ ನಡುವೆ ಮೊದಲ ಅಧಿಕೃತ ರಾಜತಾಂತ್ರಿಕ ಸಂಬಂಧ ಏರ್ಪಟ್ಟಿದ್ದು 1952ರಲ್ಲಿ. ಎರಡನೇ ಮಹಾಯುದ್ಧದ ಬಳಿಕ ಜರ್ಜರಿತವಾಗಿದ್ದ ಜಪಾನ್‌ಗೆ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಆನೆಯೊಂದನ್ನು ಉಡುಗೊರೆಯಾಗಿ ನೀಡಿದ್ದರು

1957 ಯುದ್ಧದ ಬಳಿಕ ಸೊರಗಿದ್ದ ಜಪಾನ್‌ಗೆ ಭಾರತದಿಂದ ರಫ್ತು ಮಾಡಲಾದ ಕಬ್ಬಿಣದ ಅದಿರು, ಅಲ್ಲಿನ ಕೈಗಾರಿಕೆಗಳ ಅಭಿವೃದ್ಧಿಗೆ ಬಲ ತುಂಬಿತು. 1958ರಲ್ಲಿ ಭಾರತಕ್ಕೆ ಜಪಾನ್ ಮೊದಲ ಬಾರಿ ಸಾಲ ನೀಡಿತು. 1983ರಲ್ಲಿ ಭಾರತದಲ್ಲಿ ಜಂಟಿಯಾಗಿ ಮಾರುತಿ ಸುಜುಕಿ ಕಾರು ತಯಾರಿಕಾ ಘಟಕ ಆರಂಭವಾಯಿತು

1991 ಪಾವತಿ ಸಮತೋಲನ ಬಿಕ್ಕಟ್ಟಿನಿಂದ ಭಾರತವನ್ನು ಪಾರು ಮಾಡಿದ ಕೆಲವೇ ದೇಶಗಳಲ್ಲಿ ಜಪಾನ್ ಸೇರಿದೆ. ಆದರೆ, 1998ರಲ್ಲಿ ಅಣ್ವಸ್ತ್ರ ಪರೀಕ್ಷೆಯ ಕಾರಣವಾಗಿ, ಭಾರತದ ಮೇಲೆ ಜಪಾನ್ ಕಠಿಣ ನಿರ್ಬಂಧಗಳನ್ನು ಹೇರಿತು

2006 ಪ್ರಧಾನಿ ಶಿಂಜೊ ಅಬೆ ಅವರ ಭಾರತ ಭೇಟಿ ವೇಳೆ, ಉಭಯ ದೇಶಗಳು ತಮ್ಮ ಮೈತ್ರಿಯನ್ನು ‘ಜಾಗತಿಕ ಮತ್ತು ರಕ್ಷಣಾ ಪಾಲುದಾರಿಕೆ’ಯ ಮಟ್ಟಕ್ಕೆ ಏರಿಸಿದವು. ಪ್ರತೀ ವರ್ಷ ಪ್ರಧಾನಮಂತ್ರಿಗಳ ಶೃಂಗಸಭೆ ನಡೆಸಲು ಎರಡೂ ದೇಶಗಳು ಸಮ್ಮತಿಸಿದವು

2011 ವ್ಯಾಪಾರ ಹಾಗೂ ಹೂಡಿಕೆಯನ್ನು ಹೆಚ್ಚಿಸುವ ದಿಸೆಯಲ್ಲಿ ಎರಡೂ ದೇಶಗಳು ‘ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ’ಕ್ಕೆ (ಸಿಇಪಿಎ) ಬಂದವು. ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್‌ನ ಕಾರ್ಯಸಾಧ್ಯತಾ ಅಧ್ಯಯನ ಕೈಗೊಳ್ಳಲು ಒಪ್ಪಿಗೆ ಸಿಕ್ಕಿತು

2014 ಪ್ರಧಾನಿ ನರೇಂದ್ರ ಮೋದಿ ಅವರ ಜಪಾನ್ ಭೇಟಿ ವೇಳೆ ಉಭಯ ದೇಶಗಳ ಮೈತ್ರಿಯು ‘ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆ’ಯಾಗಿ ಮತ್ತೆ ಮೇಲ್ದರ್ಜೆಗೇರಿತು. ‘ಭಾರತ–ಜಪಾನ್ ಹೂಡಿಕೆ ಉತ್ತೇಜನ ಪಾಲುದಾರಿಕೆ’ ಜಾರಿಗೆ ಬಂದಿತು. ಜಪಾನ್ ಪ್ರಧಾನಿ ಅಬೆ ಅವರು ₹2.50 ಲಕ್ಷ ಕೋಟಿ ಮೊತ್ತದ ಸರ್ಕಾರಿ ಮತ್ತು ಖಾಸಗಿ ಹೂಡಿಕೆಯ ಭರವಸೆ ನೀಡಿದರು

2016 ಹಲವು ವರ್ಷಗಳ ಸಮಾಲೋಚನೆಯ ಬಳಿಕ, ಪ್ರಧಾನಿ ಮೋದಿ ಅವರ ಜಪಾನ್ ಭೇಟಿಯ ವೇಳೆ ಉಭಯ ದೇಶಗಳು ‘ನಾಗರಿಕ ಪರಮಾಣು ಸಹಕಾರ ಒಪ್ಪಂದ’ಕ್ಕೆ ಸಹಿ ಹಾಕಿದವು.

2017 ಭಾರತದ ‘ಆ್ಯಕ್ಟ್ ಈಸ್ಟ್ ಪಾಲಿಸಿ’ ಮತ್ತು ಜಪಾನ್‌ನ ‘ಮುಕ್ತ ಹಿಂದೂ ಮಹಾಸಾಗರ-ಪೆಸಿಫಿಕ್ ವಿಷನ್’ ಅಡಿಯಲ್ಲಿ ಭಾರತ-ಜಪಾನ್ ಸಹಯೋಗಕ್ಕೆ ವೇದಿಕೆಯನ್ನು ಒದಗಿಸುವ ಗುರಿಯೊಂದಿಗೆ ಆ್ಯಕ್ಟ್ ಈಸ್ಟ್ ವೇದಿಕೆ ಜನ್ಮತಳೆಯಿತು. 2019–20ರ ಅವಧಿಯಲ್ಲಿ ಉಭಯ ದೇಶಗಳ ದ್ವಿಪಕ್ಷೀಯ ವ್ಯಾಪಾರವು ₹89 ಸಾವಿರ ಕೋಟಿಗೆ ತಲುಪಿತ್ತು.

2021 ಎರಡೂ ದೇಶಗಳು ಬಂಗಾಳ ಕೊಲ್ಲಿಯಲ್ಲಿ ನಡೆದ ಮಲಬಾರ್ ಸೇನಾ ಕಸರತ್ತಿನಲ್ಲಿ ಭಾಗವಹಿಸಿದ್ದವು. ಎರಡೂ ರಕ್ಷಣಾ ಪಡೆಗಳು ಜಿಮೆಕ್ಸ್, ಶಿನ್ಯು ಮೈತ್ರಿ ಮತ್ತು ಧರ್ಮ ಗಾರ್ಡಿಯನ್ ಎಂಬ ದ್ವಿಪಕ್ಷೀಯ ಸೇನಾ ಕಸರತ್ತು ಆಯೋಜಿಸುತ್ತವೆ. 2 + 2 ಸಭೆ, ವಾರ್ಷಿಕ ರಕ್ಷಣಾ ಸಚಿವರ ಸಂವಾದ ಮತ್ತು ಕೋಸ್ಟ್ ಗಾರ್ಡ್-ಟು-ಕೋಸ್ಟ್ ಗಾರ್ಡ್ ಸಂವಾದ ಸೇರಿದಂತೆ ಜಪಾನ್ ಮತ್ತು ಭಾರತದ ನಡುವೆ ಭದ್ರತೆ ಮತ್ತು ರಕ್ಷಣಾ ಮಾತುಕತೆಗಳು ನಿರಂತರವಾಗಿವೆ. ಚೀನಾದ ಪ್ರಾದೇಶಿಕ ಬೆದರಿಕೆ ಎದುರಿಸುವ ಉದ್ದೇಶದಿಂದ ಮುಕ್ತ ಮತ್ತು ಸಮೃದ್ಧ ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶ ನಿರ್ಮಾಣ ಉದ್ದೇಶಕ್ಕಾಗಿ ಕ್ವಾಡ್ ಕೂಟ ರಚಿಸಲಾಗಿದ್ದು, ಭಾರತ–ಜಪಾನ್ ಸಕ್ರಿಯ ಪಾಲುದಾರರಾಗಿವೆ.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 21

ಬದಲಾಗುವ ಗುಣವೇ ಸೃಷ್ಟಿನಿಯಮ

ಬ್ರಹ್ಮದೇವ ಷಟ್ಕುಲೀನಮುನಿಗಳಿಗೆ ಸೃಷ್ಟಿರಹಸ್ಯ ಹೇಳುವಾಗ, ಪ್ರತಿಯೊಂದು ವಸ್ತುವಿನಲ್ಲೂ ಸತ್ವ-ರಜಸ್-ತಮ ಎಂಬ ಮೂರು ಗುಣಗಳು ಇದ್ದೇ ಇರುತ್ತವೆ. ಕೆಲವು ವಸ್ತುವಿನಲ್ಲಿ ಸತ್ವಗುಣವು ಹೆಚ್ಚಾಗಿ, ಕೆಲವು ವಸ್ತುವಿನಲ್ಲಿ ರಜೋಗುಣವೂ, ಮತ್ತೆ ಕೆಲವು ವಸ್ತುವಿನಲ್ಲಿ ತಮೋಗುಣವು ಹೆಚ್ಚಾಗಿರುತ್ತೆ. ಒಂದು ಗುಣವು ಹೆಚ್ಚಾಗಿದ್ದರೆ ಅದಕ್ಕನುಸಾರವಾಗಿ ಮತ್ತೊಂದು ಗುಣವು ಕಡಿಮೆಯಾಗುವುದು. ಆದುದರಿಂದ ಪ್ರಪಂಚದಲ್ಲಿರುವ ಸಮಸ್ತ ಪ್ರಾಣಿಗಳು ಮತ್ತು ವಸ್ತುಗಳು ಈ ಮೂರು ಗುಣಗಳಲ್ಲಿ ಒಂದನ್ನು ಅಥವಾ ಎರಡನ್ನು ಹೆಚ್ಚಾಗಿಯೂ, ಉಳಿದದ್ದನ್ನು ಕಡಿಮೆಯಾಗಿಯೂ ಹೊಂದಿರುವುವು ಅನ್ನುತ್ತಾನೆ.

ಬರೀ ಸತ್ವಗುಣವನ್ನಾಗಲಿ ಅಥವಾ ರಜೋಗುಣವನ್ನಾಗಲಿ ಅಥವಾ ತಮೋಗುಣವನ್ನಾಗಲಿ ಹೊಂದಿರುವ ವಸ್ತುವು ಜಗತ್ತಿನಲ್ಲಿ ಇಲ್ಲ; ಇರಲು ಸಾಧ್ಯವೂ ಇಲ್ಲ. ಪ್ರತಿಯೊಂದು ವಸ್ತುವಿನಲ್ಲಿಯೂ ಮೂರು ಗುಣಗಳು ಹೆಚ್ಚು ಕಡಿಮೆಯಾಗಿ ಇರಲೇಬೇಕು. ಈ ರೀತಿ ಇರುವ ವಸ್ತುಗಳೆಲ್ಲವೂ ಭಗವಂತನ ಚರಾಚರಾತ್ಮಕವಾದ ದೃಶ್ಯಪ್ರಪಂಚವಾಗಿರುತ್ತದೆ. ಸತ್ವ-ರಜಸ್-ತಮಗಳಿಂದ ಕೂಡಿರುವ ವಸ್ತುಗಳಲ್ಲಿ ಸದಾ ಬದಲಾವಣೆಯಾಗುತ್ತಲೇ ಇರುತ್ತದೆ. ಈ ಬದಲಾವಣೆ ನಿಲ್ಲಬೇಕಾದರೆ, ಈ ಗುಣಗಳು ಹೆಚ್ಚು ಕಡಿಮೆಯಿಲ್ಲದೆ ಸಮಾವಸ್ಥೆಗೆ ಬರಬೇಕು. ಸಮಸ್ಥಿತಿ ಬಂದರೆ ಪ್ರಳಯ ಸ್ಥಿತಿಯಾಗುತ್ತದೆ. ಅಂದರೆ ಕ್ಷಣಕ್ಷಣಕ್ಕೂ ಬದಲಾಗುವ ಚಲನಶೀಲತೆಯೇ ಸೃಷ್ಟಿಯ ಚೈತನ್ಯ. ಆ ಬದಲಾವಣೆ ಗುಣ ಕಳೆದುಕೊಂಡಾಗ ಸೃಷ್ಟಿ ನಿಸ್ತೇಜವಾಗುತ್ತೆ. ಆದ್ದರಿಂದಲೇ ಸದಾ ಬದಲಾಗುವ ಗುಣವೇ ಸೃಷ್ಟಿನಿಯಮ.

ಸಮಸ್ಥಿತಿಯಲ್ಲಿರುವ ವಸ್ತುವಿಗೆ ನಾಮರೂಪಭೇದಗಳೂ ದೇಶಕಾಲಾದಿ ಪರಿಮಿತಿಯೂ ಇರುವುದಿಲ್ಲ. ಅಂತಹ ಸ್ಥಿತಿಯಲ್ಲಿರುವ ವಸ್ತುವೇ ನಿತ್ಯಮಯವಾದ ನಿರ್ಗುಣಬ್ರಹ್ಮ. ಇದು ಕೇವಲ ಸಚ್ಚಿದಾನಂದ ರೂಪಾತ್ಮಕವಾಗಿರುತ್ತದೆ. ಇದಕ್ಕೆ ಸದೃಶವಾದ ವಸ್ತುವು ಮತ್ತೊಂದು ಇರುವುದಿಲ್ಲ. ಸತ್ವ-ರಜಸ್-ತಮೋಗುಣಗಳು ಪರಬ್ರಹ್ಮದಲ್ಲಿರುವಾಗ ಸಮವಾಗಿರುತ್ತವೆ. ಇವು ಸೃಷ್ಟಿಕಾಲದಲ್ಲಿ ಹೆಚ್ಚುಕಡಿಮೆಯಾಗಿ ಬದಲಾವಣೆಯ ರೂಪ ತಾಳಿ, ಪ್ರಪಂಚ ಸೃಷ್ಟಿಯಾಗುತ್ತೆ. ಈ ರೀತಿ ಪ್ರಪಂಚಸೃಷ್ಟಿಗೆ ಕಾರಣವಾದ ಪರಬ್ರಹ್ಮವಸ್ತುವೇ ಪರಮೇಶ್ವರನೆಂದೂ, ಈತನೇ ಎಲ್ಲರಿಗಿಂತಲೂ ಶ್ರೇಷ್ಠ, ಜಗತ್ತಿಗೆಲ್ಲ ಒಡೆಯನೆಂದು ಶ್ರುತಿಯಲ್ಲಿಯೂ ಉಪನಿಷತ್ತುಗಳಲ್ಲಿಯೂ ಹೇಳಲ್ಪಟ್ಟಿದೆ. ಪರಬ್ರಹ್ಮವಸ್ತುವನ್ನು ಮಾತುಗಳಿಂದ ತಿಳಿಸಲು ಅಸಾಧ್ಯ. ಕಣ್ಣಿನಿಂದ ನೋಡುವುದಕ್ಕೆ ಆಗದ ಮತ್ತು ಮನಸ್ಸಿನಿಂದ ಯೋಚಿಸುವುದಕ್ಕಾಗದ ವಸ್ತುವನ್ನು ಶಬ್ದಗಳಿಂದ ವರ್ಣಿಸುವುದು ಸಾಧ್ಯವಿಲ್ಲ. ಆದುದರಿಂದ ಶ್ರುತಿಸ್ಮೃತಿ ವೇದಾಂತಗಳೇ ಇದನ್ನು ಸಂಪೂರ್ಣವಾಗಿ ವರ್ಣಿಸಲು ಆಗದೆಂದು ಹೇಳಿರುವಾಗ, ಇಲ್ಲಿ ಅದನ್ನು ವಿವರಿಸುತ್ತೇನೆಂದು ಹೇಳುವುದು ಅಸಂಗತವಾಗುತ್ತೆ. ಇಂತಹ ಪರಮೇಶ್ವರನನ್ನು ಅಸಾಧಾರಣವಾದ ಭಕ್ತಿಯಿಂದ ಮಾತ್ರ ನೋಡಬಹುದು ಅನ್ನುತ್ತಾನೆ ಬ್ರಹ್ಮದೇವ.

ಮುನಿಗಳು ಮತ್ತೆ ‘ಬ್ರಹ್ಮದೇವನೇ, ವೇದದಲ್ಲಿ ಹೇಳಿರುವ ಶ್ರೇಷ್ಠವಾದ ಸಾಧನೆ ಎಂದರೆ ಯಾವುದು? ಸಾಧಿಸಬೇಕಾದ ಮಾರ್ಗ ಯಾವುದು? ಸಾಧನೆಗೆ ಉತ್ಕೃಷ್ಟಸಾಧನ ಯಾವುದು? ಅದನ್ನು ಸಾಧಿಸುವವನು ಎಂತಹವನು? ಹೇಳು’ ಅಂತ ವಿನಂತಿಸುತ್ತಾರೆ. ಆಗ ಬ್ರಹ್ಮದೇವ ಶಿವಲೀಲವನ್ನು ಪಡೆಯುವುದೇ ಸಾಧನೆ ಅಂತ ಹೇಳುತ್ತಾನೆ. ಈಶ್ವರಪಥದಲ್ಲಿ ನಡೆಯುವುದೇ ಸಾಧನಾಮಾರ್ಗ. ಶಿವನ ಸೇವೆಯೇ ಸಾಧನೆಗಿರುವ ಸಾಧನ. ಶಿವನ ಸೇವೆಯಿಂದ ಸಿಗುವ ಅನುಭೂತಿಯೇ ವೈರಾಗ್ಯ. ಅನಿತ್ಯವಸ್ತುಗಳಲ್ಲಿ ವೈರಾಗ್ಯವುಳ್ಳವನೇ ಸಾಧಕ. ಅಂದರೆ, ಶಿವನ ಪ್ರೀತಿಗೆ ಪಾತ್ರನಾದವನು ಎಂದರ್ಥ. ಕಿವಿಯಿಂದ ಶಿವನ ನಾಮವನ್ನು ಕೇಳುವುದು, ಬಾಯಿಂದ ಶಿವನನ್ನೇ ಸ್ತುತಿಸುವುದು, ಮನಸ್ಸಿನಿಂದ ಆ ಪರಮೇಶ್ವರನನ್ನೇ ಧ್ಯಾನಿಸುವುದು ಶ್ರೇಷ್ಠವಾದ ಸಾಧನಗಳು.

ಪ್ರತ್ಯಕ್ಷವಾದ ಅಂದರೆ, ಕಣ್ಣಿಗೆ ಕಾಣುವ ವಸ್ತುವನ್ನು ಕಣ್ಣಿನಿಂದ ನೋಡಿ ಜನ ತಿಳಿಯುತ್ತಾರೆ. ಆದರೆ ಪ್ರತ್ಯಕ್ಷವಲ್ಲದ ವಸ್ತುವನ್ನು ಕಿವಿಯಿಂದ ಕೇಳಿ ತಿಳಿಯುತ್ತಾರೆ. ಆದಕಾರಣ ವಿವೇಕಿಯು ಮೊದಲು ಗುರುಮುಖದಿಂದ ಈಶ್ವರನ ಸ್ವರೂಪವನ್ನು ಕೇಳಿ, ಬಳಿಕ ಕೀರ್ತನ ಮತ್ತು ಮನನ ಮಾಡಬೇಕು. ಹೀಗೆ ಶಿವಮಾರ್ಗವನ್ನನುಸರಿಸಿ, ಶಿವಭಕ್ತಿ ಸಾಧನಗಳನ್ನು ಪಡೆದರೆ, ಅವರು ಮುಂದೆ ಶಿವಲೋಕ ಸೇರುವರು ಎಂದು ಬ್ರಹ್ಮದೇವ ಮುನಿಗಳಿಗೆ ಹೇಳುವುದರೊಂದಿಗೆ ಶ್ರೀಶಿವಮಹಾಪುರಾಣದ ವಿದ್ಯೇಶ್ವರಸಂಹಿತೆಯ ಮೂರನೆ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಸಮಾಜವಾದಿ ಪಕ್ಷದ (ಎಸ್‌ಪಿ) ನಡುವೆ ಬಿರುಸಿನ ಪೈಪೋಟಿ ನಡೆಯುತ್ತಿರುವ ವೇಳೆಯೇ, ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಮಾಡಿದ್ದಾರೆ ಎನ್ನಲಾದ ಟ್ವೀಟ್ ವೈರಲ್ ಆಗಿದೆ. ‘ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬಂದರೆ ರಾಮ ಮಂದಿರದ ಜಾಗದಲ್ಲಿ ಬಾಬರಿ ಮಸೀದಿ ಕಟ್ಟುತ್ತೇವೆ ಎಂದು ನಾವು ಮುಸ್ಲಿಂ ಸಹೋದರರಿಗೆ ಭರವಸೆ ನೀಡುತ್ತೇವೆ’ ಎಂದು ಅಖಿಲೇಶ್ ಟ್ವೀಟ್ ಮಾಡಿದ್ದಾರೆ ಎಂದು ಬಿಂಬಿಸಲಾಗಿದೆ. ಬಿಜೆಪಿ ಫಾರ್ ನ್ಯೂ ಇಂಡಿಯಾ ಸೇರಿ ಹಲವಾರು ಪೇಜ್‌ಗಳಲ್ಲಿ ಈ ಟ್ವೀಟ್ ಅತಿ ಹೆಚ್ಚು ಬಾರಿ ಶೇರ್ ಆಗಿದೆ.



✓ ಅಖಿಲೇಶ್ ಯಾದವ್ ಈ ಟ್ವೀಟ್ ಮಾಡಿಲ್ಲ ಎಂದು ಆಲ್ಟ್ ನ್ಯೂಸ್ ವೇದಿಕೆ ವರದಿ ಮಾಡಿದೆ. ಅಖಿಲೇಶ್ ಅವರ ಟ್ವಿಟರ್ ಟೈಮ್‌ಲೈನ್‌ನಲ್ಲಿ ಈ ಟ್ವೀಟ್ ಇಲ್ಲ. ಇದನ್ನು ಅಳಿಸಲಾಗಿದೆಯೇ ಎಂದು ತಿಳಿಯಲು ಆರ್ಖೈವ್ ವೆಬ್‌ಸೈಟ್‌ನಲ್ಲಿ ಹುಡುಕಾಡಲಾಯಿತು. ಅಲ್ಲಿ ಕೂಡಾ ಈ ಟ್ವೀಟ್ ಸಿಗಲಿಲ್ಲ. ಅಖಿಲೇಶ್ ಅವರು ಮಾಡಿದ್ದ ಟ್ವೀಟ್‌ನ ಸ್ಕ್ರೀನ್‌ಶಾಟ್ ಅನ್ನು ತೆಗೆದುಕೊಂಡು ಅದನ್ನು ತಿರುಚಿರುವುದು ವೈರಲ್ ಆಗಿರುವ ಟ್ವೀಟ್‌ಅಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ ಎಂದು ಆಲ್ಟ್ ನ್ಯೂಸ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಮನ-ಬುದ್ಧಿ ದಾಂಪತ್ಯ

ಭಾವದಾವೇಶದಿಂ ಮನವಶ್ವದಂತಿರಲಿ |
ಧೀವಿವೇಚನೆಯದಕೆ ದಕ್ಷರಾಹುತನು ||
ತೀವಿದೊಲವಿನ ದಂಪತಿಗಳಾಗೆ ಮನಬುದ್ಧಿ |
ಜೀವಿತವು ಚೈತ್ರಕಥೆ- ಮಂಕುತಿಮ್ಮ || 543 ||

ಪದ-ಅರ್ಥ: ಭಾವದಾವೇಶದಿಂ = ಭಾವದ + ಆವೇಶದಿಂ(ಆವೇಶದಿಂದ), ಮನವಶ್ವದಂತಿರಲಿ = ಮನ + ಅಶ್ವದಂತೆ + ಇರಲಿ, ಧೀವಿವೇಚನೆಯದಕೆ = ಧೀ(ಬುದ್ಧಿ) + ವಿವೇಚನೆ + ಅದಕೆ, ದಕ್ಷರಾಹುತ = ದಕ್ಷ(ಸಮರ್ಥನಾದ) + ರಾಹುತ(ಕುದುರೆಸವಾರಿ), ತೀವಿದೊಲವಿನ = ತೀವಿದ(ತುಂಬಿದ) + ಒಲವಿನ, ಚೈತ್ರಕಥೆ = ಚೈತ್ರ(ವಿಜಯ) + ಕಥೆ.

ವಾಚ್ಯಾರ್ಥ: ಭಾವದ ಆವೇಶದಿಂದ ಮನಸ್ಸು ಕುದುರೆಯ ಹಾಗೆ ಇರಲಿ. ಬುದ್ಧಿಯ ವಿವೇಚನೆ ಎನ್ನುವುದು ಸಮರ್ಥ ಸವಾರನಿದ್ದಂತೆ. ಮನಸ್ಸು ಮತ್ತು ಬುದ್ಧಿಗಳು ತುಂಬಿದ ಪ್ರೀತಿಯ ದಂಪತಿಗಳಂತೆ ಅನ್ಯೋನ್ಯವಾಗಿದ್ದರೆ, ಬದುಕು ಜಯದ ಗಾಥೆಯಾಗುತ್ತದೆ.

ವಿವರಣೆ: ಕಠೋಪನಿಷತ್ತಿನ ಒಂದು ಸುಂದರವಾದ ರೂಪಕ ಹೀಗಿದೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು
ಬುದ್ಧಿಂ ತು ಸಾರಥಿಂವಿದ್ಧಿ ಮನ: ಪ್ರಗ್ರಹಮೇವ ಚ||
ಇಂದ್ರಿಯಾಣಿ ಹಯಾನ್ಯಾಹು: ವಿಷಯಾಂಸ್ತೇಷು
ಗೋಚರಾನ್ ||

“ಶರೀರವನ್ನು ರಥವೆಂದೂ, ಆತ್ಮನು ಅದರಲ್ಲಿ ಪಯಣಿಸುವ ರಥಿಯೆಂದೂ ತಿಳಿ. ಬುದ್ಧಿಯು ಸಾರಥಿ, ಮನಸ್ಸು ಕಡಿವಾಣ ಮತ್ತು ಇಂದ್ರಿಯಗಳು ಕುದುರೆಗಳು. ಇಂದ್ರಿಯ ವಿಷಯಗಳು ರಥ ಸಾಗುವ ದಾರಿ”.

ಈ ಶ್ಲೋಕ ಕಗ್ಗಕ್ಕೆ ಎಷ್ಟು ಸಂವಾದಿಯಾಗಿದೆ! ಸಾರಥಿಯಾಗಿದ್ದ ಬುದ್ಧಿ ಸದಾ ಎಚ್ಚರದಿಂದಿದ್ದು, ಮನಸ್ಸೆಂಬ ಕಡಿವಾಣವನ್ನು ಬಿಗಿಯಾಗಿ ಹಿಡಿದುಕೊಂಡಿದ್ದರೆ, ಇಂದ್ರಿಯಗಳೆಂಬ ಕುದುರೆಗಳು ಸರಿಯಾದ ದಾರಿಯಲ್ಲಿ ಹೋಗುತ್ತವೆ. ಆಗ ರಥ ನಿರ್ದಿಷ್ಟವಾದ ಗುರಿಯನ್ನು ಸೇರುತ್ತದೆ.

ನಾವು ಯಾವುದೇ ಕಾರ್ಯವನ್ನು ಮಾಡುವಾಗ ಮನಸ್ಸು ಕಾರ್ಯವನ್ನು ಕುರಿತು ಯೋಚಿಸಬೇಕು. ಅದರಲ್ಲಿ ಆಸಕ್ತಿಯನ್ನು ಹೊಂದಬೇಕು. ಆಸಕ್ತಿ ಪ್ರಬಲವಾಗಬೇಕು. ಅದನ್ನೇ ಕಗ್ಗ ಭಾವದ ಆವೇಶದಿಂದ ಮನಸ್ಸು ಶಕ್ತಿಶಾಲಿಯಾದ ಕುದುರೆಯಂತಿರಬೇಕು ಎನ್ನುತ್ತದೆ. ಅಶಕ್ತವಾದ, ಅನಾಸಕ್ತವಾದ ಮನಸ್ಸು ಯಾವುದನ್ನೂ ಮಾಡಲಾರದು. ಮನಸ್ಸು ವಿಚಾರಗಳ ಮೂಲ. ಅದೊಂದು ಭಾವನೆಗಳ ಮಹಾಪ್ರವಾಹ. ಅದು ಕ್ರಿಯಾಶೀಲವೂ ಹೌದು, ವಿಕಾರಶೀಲವೂ ಹೌದು. ಅದು ಇಂದ್ರಿಯಗಳ ಸಹಾಯದಿಂದ ಶಬ್ದ, ಸ್ಪರ್ಶ, ರೂಪ, ರಸ, ಗ್ರಂಥಗಳನ್ನು ತಿಳಿಯುತ್ತದೆ. ನಾವು ಇಂದ್ರಿಯಗಳ ಗುಲಾಮರಾದರೆ ಒಂದು ಮಾತು, ಒಂದು ದೃಶ್ಯ ನಮ್ಮ ಭಾವೋದ್ವೇಗವನ್ನು ಕೆರಳಿಸುತ್ತವೆ. ಆಗ ಮನಸ್ಸು ಇಂದ್ರಿಯಗಳನ್ನು ನಿಗ್ರಹಿಸುವ ಬದಲು ಇಂದ್ರಿಯಗಳು ಮನಸ್ಸನ್ನು ನಿಯಂತ್ರಿಸುತ್ತವೆ. ಬದುಕಿನ ಪ್ರಯಾಣದ ದಾರಿ ತಪ್ಪುತ್ತದೆ. ಕುದುರೆ ಬಲಶಾಲಿಯಾದಷ್ಟೂ ಅದರ ಸವಾರ ಹೆಚ್ಚು ಸಮರ್ಥನಾಗಬೇಕಾಗುತ್ತದೆ. ಎಲ್ಲಿಯವರೆಗೂ ಕುದುರೆ ಸವಾರನ ನಿಯಂತ್ರಣದಲ್ಲಿದೆಯೋ ಅಲ್ಲಿಯವರೆಗೆ ಅದು ಅಪೇಕ್ಷಿತ ದಾರಿಯಲ್ಲಿಯೇ ಸಾಗುತ್ತದೆ. ಆದರೆ ಸವಾರ ಅಶಕ್ತನಾದರೆ ಕುದುರೆ ಅವನನ್ನು ಕೆಳಗೆ ಕೆಡವಿ, ಅವನ ಮಾತನ್ನು ಕೇಳದೆ ತನ್ನ ದಾರಿಯಲ್ಲೇ ಹೋಗಿ ಬಿಡುತ್ತದೆ. ನಿಜವಾದ ಬುದ್ಧಿ ಆಸೆಗಳನ್ನು ಹತ್ತಿಕ್ಕುವುದಿಲ್ಲ, ಅವುಗಳನ್ನು ಪ್ರಚೋದಿಸುತ್ತದೆ. ಆದರೆ ಅದು ಅತಿಯಾಗದಂತೆ ನಿಯಂತ್ರಿಸುತ್ತದೆ. ಆಸೆಗಳಿಲ್ಲದ ಮನಸ್ಸು ಸತ್ತ ಕುದುರೆ. ಅದಕ್ಕೆ ಸವಾರ ಯಾಕೆ ಬೇಕು? ಅತಿಯಾದ ಆಸೆಯ ಮನಸ್ಸು ಬುದ್ಧಿಯನ್ನು ಕೆಡಿಸುತ್ತದೆ. ಆದ್ದರಿಂದ ಬುದ್ಧಿ ಶಿಸ್ತುಗೊಳಿಸಲ್ಪಟ್ಟು ಏಕನಿಷ್ಠವಾಗಿರಬೇಕು. ಅಂಥ ಮನಸ್ಸನ್ನು ಗೀತೆ “ವ್ಯವಸಾಯಾತ್ಮಿಕಾ ಬುದ್ಧಿ:” ಎನ್ನುತ್ತದೆ. ಈ ಕಗ್ಗದ ಸಂದೇಶವೆಂದರೆ, ಎಲ್ಲಿ ಮನಸ್ಸು ಮತ್ತು ಬುದ್ಧಿಗಳು ಪರಸ್ಪರ ತುಂಬ ಒಲವಿನಿಂದ ಕೂಡಿದ ದಂಪತಿಗಳ ಹಾಗೆ ಅನ್ಯೋನ್ಯವಾಗಿರುತ್ತವೆಯೋ, ಆ ಬದುಕಿನ ಪ್ರಯಾಣ ಒಂದು ಯಶಸ್ಸಿನ ಕಥೆಯಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಜನವರಿ 18, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 04 ನೇ ದಿನ
ತಿಥಿ: (ಪೌಷ ಕೃಷ್ಣ) ಪ್ರತಿಪದ್ ಅಹೋರಾತ್ರ ನಕ್ಷತ್ರ: ಪುಷ್ಯ ಗಂ. 30-42 ಯೋಗ: ವಿಷ್ಕಂಭ ಗಂ. 16-08, ಕರಣ: ಬಾಲವ ಗಂ. 18-09. ರಾಹುಕಾಲ : ಮಧ್ಯಾಹ್ನ 03:00 – 04:30
ಸೂರ್ಯೋದಯ : 07-01 ಸೂರ್ಯಾಸ್ತ : 06-20 ಮುಸ್ಲಿಂ ದಿನಾಂಕ : 23 ಜುಮಾದುಸ್ಸಾನಿ
ದಿನ ವಿಶೇಷ : ಫ್ಲೋಟಿಂಗ್ ಫೆಸ್ಟಿವಲ್/ತೈಪೂಸಮ್,
ಅದೃಷ್ಟ ಸಂಖ್ಯೆ: 01, 12

ಮೇಷ: ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯುವುದು. ಹಿಂದೆಯೇ ಬರಬೇಕಾಗಿದ್ದ ಸಾಲದ ಹಣವು ಬಂಧು ಒಬ್ಬರ ನೆರವಿನಿಂದ ನಿಮ್ಮ ಕೈಸೇರಲಿದೆ. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕಾಗಿ ಹೆಚ್ಚು ಓಡಾಡುವ ಸಂದರ್ಭ ಬರುವುದು.

ವೃಷಭ: ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಜೋರಾಗಿರುವುದು. ನಿಧಾನಗತಿಯಲ್ಲಿ ಸಾಗುತ್ತಿರುವ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು.

ಮಿಥುನ: ನೀವು ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಮಿತ ವ್ಯಯ ಪ್ರಯತ್ನಿಸಿ. ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆ ನಡೆಯಲು ಒಪ್ಪುವಿರಿ.

ಕರ್ಕಾಟಕ: ನೂತನ ಉದ್ಯೋಗ ದೊರೆತು ಸಮಾಧಾನವಗುವುದು. ದೇವತಾ ಕಾರ್ಯಗಳಿಗಾಗಿ ಪ್ರಯಾಣ ಮಾಡಲಿದ್ದೀರಿ. ಕುಟುಂಬದವರ ಆರೋಗ್ಯ ಉತ್ತಮವಾಗಿರುವುದು. ಸಿವಿಲ್ ಇಂಜಿನೀಯರುಗಳಿಗೆ ಉತ್ತಮ ಅವಕಾಶ.

ಸಿಂಹ: ಈ ದಿನ ಅಪವಾದಗಳು ನಿಮ್ಮಿಂದ ದೂರವಾಗಲಿವೆ. ಯಾರ ನೆರವೂ ಇಲ್ಲದೆ ನಿಮ್ಮೆಲ್ಲ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಂತಾಗಲಿದೆ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ.

ಕನ್ಯಾ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶ. ಸರ್ಕಾರಿ ಸಂಸ್ಥೆಗಳಲ್ಲಿ ಅಧ್ಯಾಪಕ ವೃತ್ತಿ ಕೈಗೊಳ್ಳುವ ಅವಕಾಶವಿದೆ. ಮಗಳ ಮದುವೆ ಮುಂತಾದ ಮಂಗಳ ಕಾರ್ಯಗಳ ಬಗ್ಗೆ ಯೋಚಿಸಿ.

ತುಲಾ: ಜಮೀನು ಅಥವಾ ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಸರ್ವತೋಮುಖ ಅಭಿವೃದ್ಧಿ. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿದೆ.

ವೃಶ್ಚಿಕ: ಹಣ್ಣು ತರಕಾರಿ ವ್ಯಾಪಾರಿಗಳಿಗೆ ಉತ್ತಮ ಆದಾಯ. ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚಿ ಗ್ರಂಥ ಸಂಪಾದನೆ, ಪ್ರಕಟಣೆ ಕಾರ್ಯಗಳಲ್ಲಿ ತೊಡಗುವಿರಿ. ಶ್ರೀ ವಿಷ್ಣುಸಹಸ್ರನಾಮದ ಪಠನೆಯಿಂದ ಕಾರ್ಯಸಿದ್ಧಿ.

ಧನು: ವರ್ಗಾವಣೆಯಿಂದಾಗಿ ದೂರದ ಊರಿನಲ್ಲಿ ವಾಸಿಸುವ ಸಂದರ್ಭ ಬರಲಿದೆ. ವೈದ್ಯ ವೃತ್ತಿಯವರಿಗೆ ವಿಶೇಷ ಲಾಭವಿದೆ. ಮಹಿಳೆಯರಿಗೆ ಆದರ ಮನ್ನಣೆ ಹೆಚ್ಚಲಿದ್ದು ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ.

ಮಕರ: ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ಉತ್ತಮ ಉದ್ಯೋಗ. ಕ್ರೀಡಾಪಟುಗಳು ಮತ್ತು ಕಲಾವಿದರಿಗೆ ಸರ್ಕಾರದಿಂದ ಪ್ರಶಸ್ತಿ ಮತ್ತು ಸನ್ಮಾನ. ಪುಣ್ಯಕ್ಷೇತ್ರಗಳಿಗೆ ಹೋಗಿಬರುವ ಯೋಗವುಂಟು.

ಕುಂಭ: ರಫ್ತು ಮಾರಾಟಗಳಿಂದ ಆದಾಯ ಹೆಚ್ಚಲಿದೆ. ಉತ್ತಮ ಸಂತಾನ ಪ್ರಾಪ್ತಿ. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವಿರಿ. ಆತ್ಮಸ್ಥೈರ್ಯ ಹೆಚ್ಚಾಗಿ ಕೆಲಸ ಕಾರ್ಯಗಳನ್ನು ಹುರುಪಿನಿಂದ ಸಾಗುವುದು.


ಮೀನ: ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಪರಿಣಿತರಿಂದ ಸುಲಭವಾದ ಉಪಾಯ. ಅವಿವಾಹಿತರು ಆದಷ್ಟು ಬೇಗ ವಿವಾಹದ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಿ. ಲಕ್ಷ್ಮೀ ವೇಂಕಟರಮಣನ ಸೇವೆಯಿಂದ ಶುಭ.

ಪದಬಂಧ 4842

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಆತಂಕ ಹುಟ್ಟಿಸಿದ ಮೃತ್ಯುದೇವತೆ (3)
7.ವ್ಯತಿರಿಕ್ತವಾದುದನ್ನು ಹೀಗೂ ಹೇಳುವರು (3)
9.ಪಾಯ ಹಾಕುವಾಗ ಮಾಡಿದ ಸಿಹಿ ಭಕ್ಷ್ಯ (3)
11.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
12.ಸಾವು ಹೀಗೆ ಬಂದಿದೆ (3)
14.ಉದ್ಯೋಗಕ್ಕೊಂದು ಪರ್ಯಾಯ ಪದ (3)
16.ನೂಲು ತೆಗೆಯುವ ಸಾಧನ (3)

ಮೇಲಿಂದ ಕೆಳಕ್ಕೆ
1.ಮೊಟ್ಟೆಯೊಡೆದು ಹುಟ್ಟುವ ಪ್ರಾಣಿಯಿಲ್ಲಿ ಉಲ್ಟಾ ಆಗಿದೆ (3)
2.ಇದು ಸ್ವಾಭಾವಿಕವಲ್ಲದುದು (3)
3. ಜಿಪುಣನಿಲ್ಲಿ ತಿರುಗಿದ್ದಾನಲ್ಲಾ! (2)
5.ಶಿರವನ್ನು ಕಡಿಯುವವನು (5)
6.ರಾಕ್ಷಸರ ಶಿಲ್ಪಿ (2)
7.ಬಿಡುವು ಹೀಗೆ ಸಿಕ್ಕಿದೆ (3)
8. ಮಣ ಭಾರದ ಹೆಣವನ್ನು ಸಾಗಿಸಿದ ಸ್ಮಶಾನ (3)
9.ಪಾಕವಾದ ಮೇಲೆ ಕುಡಿದಿರುವ ಶರತ್ತು(3)
10.ಬೂಬು ಹೇಳಿದ ಕಾರಣ! (3)
13.ತೇರು ಇಲ್ಲಿದೆ (2)
15.ಸುಳ್ಳನ್ನು ಹೀಗೆ ಹೇಳಿ (2)
16. ರಾಟೆ ಹಿಡಿದಿದ್ದಕ್ಕೇ ಈ ಆಕ್ಷೇಪಣೆ! (3)
17.ಲೀಲಾಜಾಲವಾಗಿ ಹಾಕಿದ ಹರಾಜು! (3)



4841ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತಾಮಸ 3.ಗಾವುದ
5.ಭಿನ್ನಾಭಿಪ್ರಾಯ 7.ನಾಸಿಕ
8.ಕಹಳೆ 9.ಸರಿಗೆ
11.ಗರತಿ 13.ಉದ್ಯಾನ
15.ಉಕ್ಕಾನು 16.ವಿಮಾನಯಾನ
17.ಕೊಳಲು 18.ಕರ್ಮಠ

ಮೇಲಿಂದ ಕೆಳಕ್ಕೆ:
2.ಸಭಿಕ 3.ಗಾಯಕ 6.ಭಿಕಾರಿ
9.ಸರಾಗ 10.ಗೆಳತಿ 12.ರಸನ
14.ನವಿಲು 15.ಉನಕ

ಸುಡೊಕು 5228

	4				7		8	3
8			1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5227 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ನಿರಂತರ ಜಾಗೃತಿಗಾಗಿ ರಾತ್ರಿ ಕರ್ಫ್ಯೂ ಅಗತ್ಯ– ಸೋಂಕು ಪ್ರಕರಣಗಳು ಹೆಚ್ಚು, ತೀವ್ರತೆ ಕಡಿಮೆ: ಸಚಿವ ಡಾ.ಕೆ. ಸುಧಾಕರ್

ಕೋವಿಡ್: ಫೆಬ್ರುವರಿ ಅಂತ್ಯಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೆಬ್ರುವರಿ ಅಂತ್ಯಕ್ಕೆ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತದೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ತಿಳಿಸಿದರು.

'ಪ್ರಜಾವಾಣಿ' ಕಚೇರಿಯಲ್ಲಿ ಸೋಮವಾರ ನಡೆದ 'ಫೋನ್ ಇನ್' ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಯ ನಾಗರಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, 'ಮೂರನೇ ಅಲೆಯಲ್ಲಿ ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಆದರೆ, ತೀವ್ರತೆ ಮತ್ತು ಮರಣ ಪ್ರಮಾಣ ಕಡಿಮೆ ಇದೆ. ಅಂತರರಾಷ್ಟ್ರೀಯ ಸಂಚಾರ ಮತ್ತು ಅಗತ್ಯ ಸೇವೆಗಳಿಗೆ ನಿರ್ಬಂಧ ಹೇರಲು ಸಾಧ್ಯವಿಲ್ಲ. ಹೀಗಾಗಿ, ಓಮೈಕ್ರಾನ್ ಸಂಪೂರ್ಣ ನಿಗ್ರಹ ಸಾಧ್ಯವಿಲ್ಲ' ಎಂದು ಹೇಳಿದರು.

'ಪ್ರತಿ ವರ್ಷ ಡಿಸೆಂಬರ್, ಜನವರಿ ಮತ್ತು ಫೆಬ್ರುವರಿಯಲ್ಲಿ ಫ್ಲೂ ರೀತಿಯ ಲಕ್ಷಣಗಳು ಕಾಣಿಸುವುದು ಸಾಮಾನ್ಯ. ನೆಗಡಿ, ಕೆಮ್ಮು ಬಂದರೆ ಆತಂಕ ಬೇಡ. ಮೂರನೇ ಅಲೆಯಲ್ಲಿ ಕೆಲವರಲ್ಲಿ ವಿಭಿನ್ನ ಲಕ್ಷಣಗಳು ಸಹ ಕಾಣಿಸಿಕೊಂಡಿವೆ. ಕೆಲವರಿಗೆ ನಿಶ್ಯಕ್ತಿ, ಭೇದಿ ಲಕ್ಷಣಗಳಿವೆ. ಹೀಗಾಗಿ, ಪರೀಕ್ಷೆ ಮಾಡಿಸಿಕೊಂಡು ಖಚಿತಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ವಾರಾಂತ್ಯ ಮತ್ತು ರಾತ್ರಿ ಕರ್ಫ್ಯೂ ಏಕೆ ಎನ್ನುವ ಹಲವರ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, 'ಕೊರೊನಾ ವೈರಸ್ ರಾತ್ರಿ ಮಾತ್ರ ಹಬ್ಬುವುದಿಲ್ಲ ಎನ್ನುವುದು ನಮಗೂ ಗೊತ್ತಿದೆ. ಆದರೆ, ಜನರನ್ನು ನಿರಂತರವಾಗಿ ಜಾಗೃತಗೊಳಿಸಲು ಇಂತಹ ಕ್ರಮಗಳು ಅಗತ್ಯ. ಹೆಚ್ಚಿನ ಜನರಿಗೆ ಸೋಂಕು ತಗುಲಿ ಶೇಕಡ 5ರಷ್ಟು ಮಂದಿ ಆಸ್ಪತ್ರೆಗೆ ದಾಖಲಾದರೂ ಆರೋಗ್ಯ ವ್ಯವಸ್ಥೆ ಮೇಲೆ ಒತ್ತಡ ಹೆಚ್ಚಾಗುತ್ತದೆ' ಎಂದು ಪ್ರತಿಪಾದಿಸಿದರು.

ಆಯ್ದ ಕೆಲವು ಪ್ರಶ್ನೆಗಳು ಮತ್ತು ಉತ್ತರಗಳು ಇಲ್ಲಿವೆ.:

- **ನಾಲ್ಕು ಹೊಸ ವೈದ್ಯಕೀಯ ಕಾಲೇಜುಗಳಲ್ಲಿ ಇದೇ ವರ್ಷ ಪ್ರವೇಶ ದೊರೆಯುವುದೇ?**

ಲಿಂಗರಾಜು, ರಾಯಚೂರು

ಈ ಬಗ್ಗೆ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ) ಪತ್ರ ಬರೆಯಲಾಗಿದೆ. ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ನೇಮಕಾತಿ ಹಾಗೂ ಕಟ್ಟಡಗಳ ನಿರ್ಮಾಣದ ಬಗ್ಗೆ ಎನ್‌ಎಂಸಿ ವಿವರ ಕೋರಿತ್ತು. ಈಗ ತಾತ್ಕಾಲಿಕ ಕಟ್ಟಡ ವ್ಯವಸ್ಥೆ ಮಾಡಲಾಗಿದೆ. ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರಿನ ಕಾಲೇಜುಗಳಿಗೆ ಬೋಧಕರ ನೇಮಕಾತಿ ಪ್ರಕ್ರಿಯೆ ಈಗಾಗಲೇ ಮುಗಿದಿದೆ. ಇನ್ನೆರಡು ಕಾಲೇಜುಗಳಲ್ಲಿಯೂ ಶೀಘ್ರ ಮುಗಿಯಲಿದೆ. ಹೀಗಾಗಿ, ಅನುಮತಿ ನೀಡುವಂತೆ ಕೋರಿ ಮನವಿ ಮಾಡಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲೇ ಎಂಬಿಬಿಎಸ್ ಮೊದಲನೇ ವರ್ಷದ ತರಗತಿಗಳನ್ನು ಈ ನಾಲ್ಕು ಕಾಲೇಜುಗಳಲ್ಲಿ ಆರಂಭಿಸುವ ವಿಶ್ವಾಸ ಇದೆ. ಪ್ರಸಕ್ತ ವರ್ಷ ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಹೆಚ್ಚಿಸುವುದಿಲ್ಲ. ಈಗಿರುವ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ಹೊರೆ ಹೆಚ್ಚಿಸಲು ಸರ್ಕಾರ ಬಯಸುವುದಿಲ್ಲ.

- **ಲಸಿಕೆಯ ಎರಡನೇ ಡೋಸ್ ಪಡೆಯುವ ಮುನ್ನವೇ ಸಂದೇಶ ಬಂದಿದೆ?**

ವಿಲಾಸ್, ದಾವಣಗೆರೆ

ಕೋವಿನ್ ಪೋರ್ಟಲ್‌ನಲ್ಲಿ ತಾಂತ್ರಿಕ ಸಮಸ್ಯೆಯಿಂದ ಈ ಸಂದೇಶ ಬಂದಿರಬಹುದು. ಪರಿಶೀಲಿಸುತ್ತೇವೆ.

- **ಪ್ಯಾರಾವೈದ್ಯಕೀಯ ಕೋರ್ಸ್ ಮುಗಿಸಿ ಐದು ವರ್ಷಗಳಾಗಿದ್ದರೂ ಉದ್ಯೋಗ ಸಿಗುತ್ತಿಲ್ಲ. ಗುತ್ತಿಗೆ ಆಧಾರದ ಮೇಲೆ ಸೇರಿಸಿಕೊಳ್ಳಲು ಖಾಸಗಿ ಏಜೆನ್ಸಿಗಳು ₹2–3ಲಕ್ಷ ಕೇಳುತ್ತಿದ್ದಾರೆ.**

ಮಕ್ಸೂದ್, ವಿಜಯಪುರ

ಹೊಸ ನೇಮಕಾತಿಗೆ ಪ್ರಸ್ತಾವ ಕಳುಹಿಸಲಾಗುವುದು. ಹಣಕಾಸು ಇಲಾಖೆಯ ಅನುಮೋದನೆ ಬೇಕಾಗುತ್ತದೆ. ಮುಖ್ಯಮಂತ್ರಿ ಜತೆ ಮಾತನಾಡಿ ಕೆಲವೇ ದಿನಗಳಲ್ಲಿ ನೇಮಕಾತಿಯ ಅಧಿಸೂಚನೆ ಪ್ರಕಟಿಸಲಾಗುವುದು.

ವೈದ್ಯರ ಕೊರತೆ: ಸ್ಥಳದಲ್ಲೇ ಮಾಹಿತಿ ಪಡೆದ ಸಚಿವ

ರಾಯಚೂರು ಜಿಲ್ಲೆಯ ಮುದಗಲ್‌ನಲ್ಲಿ ವೈದ್ಯರ ಕೊರತೆ ಇದೆ ಎಂದು ನೇಮಿಚಂದ್ರ ನಾಯಕ್ ಎನ್ನುವವರು ಗಮನಸೆಳೆದಾಗ ತಕ್ಷಣವೇ ಜಿಲ್ಲಾ ಆರೋಗ್ಯಾಧಿಕಾರಿಗೆ ಕರೆ ಮಾಡಿ ಮಾಹಿತಿ ಪಡೆದ ಸಚಿವ ಸುಧಾಕರ್, ಅವರಿಂದಲೇ ವಿವರವನ್ನೂ ಕೊಡಿಸಿದರು. ಅಲ್ಲಿ ಡಾ. ಅನಂತಕುಮಾರ್ ಎನ್ನುವ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಹೇಳಿದರು. ಆಗ ಮಾತನಾಡಿದ ಸುಧಾಕರ್, ನಿಮ್ಮ ಊರಿನಲ್ಲಿ ಸಮಸ್ಯೆ ಇದ್ದರೆ ಹೇಳಿ; ಪರಿಹರಿಸಲು ಕ್ರಮ ಕೈಗೊಳ್ಳುತ್ತೇವೆ. ವೈದ್ಯರು ಇದ್ದರೂ ಸುಖಾಸುಮ್ಮನೇ ರಾಜಕೀಯ ಕಾರಣಕ್ಕಾಗಿ ಈ ರೀತಿ ಕರೆ ಮಾಡಬೇಡಿ ಎಂದು ಕಿವಿ ಮಾತು ಹೇಳಿದರು.



ಡಾ.ಕೆ. ಸುಧಾಕರ್

'ಮೆಡಿಕಲ್ ಮಾಫಿಯಾಗೆ ಮಣಿಯುವುದಿಲ್ಲ'

'ಸರ್ಕಾರ ಯಾವುದೇ ರೀತಿಯ ಮಾಫಿಯಾಗೆ ಮಣಿಯುವುದಿಲ್ಲ. ವೈದ್ಯಕೀಯ ವಲಯವನ್ನು ಮಾಫಿಯಾ ನಿಯಂತ್ರಿಸಲು ಸಾಧ್ಯವಿಲ್ಲ' ಎಂದು ಸುಧಾಕರ್ ಸ್ಪಷ್ಟಪಡಿಸಿದರು.

ಕೋವಿಡ್‌ನ ಈ ಸಂದರ್ಭದಲ್ಲಿ 'ಮೆಡಿಕಲ್ ಮಾಫಿಯಾ' ಪ್ರಬಲವಾಗಿದೆ ಎನ್ನುವ ಮಾತು ಸಾರ್ವಜನಿಕ ವಲಯದಲ್ಲಿದೆ. ಈ ಮಾಫಿಯಾ ನಿಯಂತ್ರಿಸಲು ಸರ್ಕಾರ ಏನು ಕ್ರಮಕೈಗೊಳ್ಳುತ್ತದೆ ಎಂದು ಬೆಂಗಳೂರಿನ ಉಷಾ ಎನ್ನುವವರ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದರು.

'ಮೆಡಿಕಲ್ ಮಾಫಿಯಾ ಎನ್ನುವುದೇ ಉತ್ಪ್ರೇಕ್ಷೆಯ ಮತ್ತು ಅಸಹನೀಯ ಮಾತು. ನಮ್ಮ ರಾಜ್ಯದಲ್ಲಿ ಮಾಫಿಯಾ ಹಾವಳಿ ಇರುವುದು ಗಮನದಲ್ಲಿ ಇಲ್ಲ. ನಿಮ್ಮ ಬಳಿ ಮಾಹಿತಿ ಇದ್ದರೆ ಕೊಡಿ' ಎಂದು ಹೇಳಿದರು.



ಬಾದಾಮಿ ಬಳಿ ಬನಶಂಕರಿಯಲ್ಲಿ ಸೋಮವಾರ ಜರುಗಿದ ದೇವಿಯ ರಥೋತ್ಸವದ ವೇಳೆ ನಿರ್ಬಂಧ ಮೀರಿ ರಥೋತ್ಸವ ಮೈದಾನಕ್ಕೆ ನುಗ್ಗಿದವರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರು

ಭಕ್ತರ ಉತ್ಸಾಹದ ಮುಂದೆ ಪೊಲೀಸರು ಅಸಹಾಯಕ

ನಿಷೇಧ ಮೀರಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಬಾದಾಮಿ ಸಮೀಪದ ಬನಶಂಕರಿಯಲ್ಲಿ ದೇವಿಯ ರಥೋತ್ಸವ ಸೋಮವಾರ ವೈಭವದಿಂದ ಜರುಗಿತು. ಕೋವಿಡ್ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ವಿಧಿಸಿದ್ದ ನಿಷೇಧವನ್ನು ಕಡೆಗಣಿಸಿ, ಪೊಲೀಸರ ಲಘು ಲಾಠಿ ಪ್ರಹಾರಕ್ಕೂ ಜಗ್ಗದೇ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಮುಸ್ಸಂಜೆಯಲ್ಲಿ ಬನಶಂಕರಿಯ ಮಲಪ್ರಭೆಯ ತಟದಲ್ಲಿ 'ಶಂಭೂಕೋ' ಜಯಘೋಷ ಮಾರ್ದನಿಸಿತು. ಕರ್ನಾಟಕ ಸೇರಿ ನೆರೆಯ ಮಹಾರಾಷ್ಟ್ರ, ಆಂಧ್ರ, ತೆಲಂಗಾಣದಿಂದ ಬಂದಿದ್ದ ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು.

ಕೋವಿಡ್ ಕಾರಣದಿಂದ ಜಿಲ್ಲಾಡಳಿತ ಜಾತ್ರೆ ರದ್ದುಪಡಿಸಿತ್ತು. ದೇಗುಲಕ್ಕೆ ಜ. 31ರವರೆಗೆ ಭಕ್ತರಿಗೆ ಪ್ರವೇಶ ನಿಷೇಧಿಸಿತ್ತು. ಅರ್ಚಕರ ನೇತೃತ್ವದಲ್ಲಿ ಧಾರ್ಮಿಕ, ಪೂಜಾ ಕಾರ್ಯಕ್ರಮಗಳು ಮತ್ತು ಹುಣ್ಣಿಮೆ ದಿನ ಸರಳವಾಗಿ ರಥೋತ್ಸವ ಆಚರಣೆಗೆ ಅವಕಾಶ ನೀಡಲಾಗಿತ್ತು. ಭಕ್ತರ ತಡೆಯಲು ಬನಶಂಕರಿ ಸಂಪರ್ಕ ರಸ್ತೆಗಳಿಗೆ ಬ್ಯಾರಿಕೇಡ್ ಹಾಕಿ, ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಬ್ಯಾರಿಕೇಡ್ ಕಿತ್ತರು: ಸಂಜೆ ಗೋಧೂಳಿ ಹೊತ್ತಿಗೆ ಸಮೀಪದ ಮಾಡಲಗೇರಿಯಿಂದ ರಥ ಎಳೆಯುವ ಹಗ್ಗ ಹೊತ್ತು ತಂದ ಬಂಡಿಗಳನ್ನು ಗದಗ ರಸ್ತೆ (ಚೊಳಚಗುಡ್ಡ) ಭಾಗದಿಂದ ಒಳಗೆ ಬಿಡಲಾಯಿತು. ಆಗ ಭಾರೀ ಸಂಖ್ಯೆಯಲ್ಲಿ ಬಂದ ಭಕ್ತರ ಗುಂಪು ಬ್ಯಾರಿಕೇಡ್‌ಗಳನ್ನು ಕಿತ್ತು ರಥೋತ್ಸವದ ಮೈದಾನಕ್ಕೆ ನುಗ್ಗಿತು. ಆಗ ನೂಕು–ನುಗ್ಗಲು ತಡೆಯಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರು. ಕೊನೆಗೆ ಭಕ್ತರ ಉತ್ಸಾಹದ ನಡುವೆ ಅಸಹಾಯಕರಾಗಿ ನಿಂತರು.

ಅದಕ್ಕೂ ಮುನ್ನ ದೇವಿಯ ಉತ್ಸವ ಮೂರ್ತಿಯನ್ನು ವಾದ್ಯ ವೈಭವದೊಂದಿಗೆ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಅರ್ಚಕರು ರಥಾಂಗ ಹೋಮ ಕೈಗೊಂಡರು. ದೇವಾಲಯದಿಂದ ಪಾದಗಟ್ಟೆಯವರೆಗೆ ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಶಾಕಾಂಬರಿ ಮೂರ್ತಿಯನ್ನು ಅರ್ಚಕರು ಪಲ್ಲಕ್ಕಿಯಲ್ಲಿ ತಂದು ತೇರಿನಲ್ಲಿ ಪ್ರತಿಷ್ಠಾಪಿಸಿದ್ದರು. ಭಕ್ತಿಯ ಪರಾಕಾಷ್ಠೆ ನಡುವೆ ಮಾಸ್ಕ್, ಸುರಕ್ಷಿತ ಅಂತರ ಎಲ್ಲವೂ ಮಾಯವಾಗಿತ್ತು.

'ಟ್ರಸ್ಟ್ ಕಮಿಟಿ ವಿರುದ್ಧ ಪ್ರಕರಣ'

'ರಥೋತ್ಸವದ ವೇಳೆ ಕೋವಿಡ್ ನಿರ್ಬಂಧ ಪಾಲನೆಗೆ ತಾಲ್ಲೂಕು ಆಡಳಿತಕ್ಕೆ ಯಾವುದೇ ರೀತಿಯ ಸಹಕಾರ ನೀಡದ ದೇವಸ್ಥಾನ ಟ್ರಸ್ಟ್ ಸಮಿತಿ ಹಾಗೂ ಗದಗ ಜಿಲ್ಲೆ ರೋಣ ತಾಲ್ಲೂಕಿನ ಮಾಡಲಗೇರಿಯಿಂದ ರಥದ ಹಗ್ಗಗಳ ತಂದಿದ್ದವರ ವಿರುದ್ಧ ಬಾದಾಮಿ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ' ಎಂದು ಬಾಗಲಕೋಟೆ ಎಸ್ಪಿ ಲೋಕೇಶ ಜಗಲಾಸರ್ ತಿಳಿಸಿದ್ದಾರೆ.

ವೈದ್ಯರ ವಿರುದ್ಧ ವೃಥಾ ಆರೋಪ: ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧಾವಂತದ ಜಗತ್ತಿನಲ್ಲಿರುವ ಜನರಿಗೆ, ಸಣ್ಣ ಪುಟ್ಟ ಅವಕಾಶ ಸಿಕ್ಕರೂ ಸಾಕು ವೈದ್ಯರ ವಿರುದ್ಧ ಇಲ್ಲಸಲ್ಲದ ಆಪಾದನೆ ಹೊರಿಸುವ ಕೀಳು ಅಭಿರುಚಿ ಬೆಳೆಯುತ್ತಿದೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

'ವೈದ್ಯರ ನಿರ್ಲಕ್ಷ್ಯದಿಂದ ತಾಯಿ ಸಾವನ್ನಪ್ಪಿದ್ದಾರೆ' ಎಂದು ಆರೋಪಿಸಿದ್ದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅಂಕಿ ಅಂಶ ಆಧರಿಸಿ ಹೇಳುವುದಾದರೆ, ವೈದ್ಯರು, ಅಧಿಕಾರಿಗಳ ವಿರುದ್ಧ ದಾಖಲಾಗುವ ಮೊಕದ್ದಮೆಗಳಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಹುರುಳೇ ಇರುವುದಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಬಹುತೇಕ ರೋಗಿಗಳು ವೈದ್ಯರ ಔಷಧಿ ಉಪಚಾರಗಳಿಂದ ಗುಣಮುಖರಾಗುತ್ತಾರೆ. ಆದರೆ, ಕೆಲವೇ ವ್ಯಕ್ತಿಗಳು ಇದಕ್ಕೆ ಅಪವಾದವಾಗಿ ಸಾವನ್ನಪ್ಪುತ್ತಾರೆ. ಅಂತಹ ಪ್ರಕರಣಗಳಲ್ಲಿ ರೋಗಿಗೆ ಉಂಟಾಗುವ ಎಲ್ಲ ತೊಂದರೆಗಳೂ ವೈದ್ಯಕೀಯ ನಿರ್ಲಕ್ಷ್ಯದಿಂದ ಆಗುತ್ತವೆ ಎಂದು ಭಾವಿಸುವುದು ಸರಿಯಲ್ಲ. ನಿಜವಾಗಿಯೂ ವೈದ್ಯರೂ ನಿರ್ಲಕ್ಷ್ಯ ತೋರಿದ್ದಾರೆ ಎಂದು ಕಂಡು ಬಂದಾಗ ಕ್ರಮ ಕೈಗೊಳ್ಳುವುದು ಸೂಕ್ತ' ಎಂದು ನ್ಯಾಯಪೀಠ ತೀರ್ಪಿನಲ್ಲಿ ತಿಳಿಸಿದೆ.

'ಈ ಪ್ರಕರಣದಲ್ಲಿ ಮೃತ ಮಹಿಳೆ ಆ್ಯಂಜಿಯೊಪ್ಲಾಸ್ಟಿ ಮಾಡಿಸಿಕೊಳ್ಳುವ ಮುನ್ನ ಜೀವನದ ಸಂಧ್ಯಾಕಾಲದಲ್ಲಿ ಎಲ್ಲರ ಪಾಲಿನ ಅನಿರೀಕ್ಷಿತ ಅತಿಥಿಗಳು ಎನಿಸಿದಂತಹ ಮಧುಮೇಹ, ನರರೋಗ ಸೇರಿದಂತೆ ಇತರೆ ದೈಹಿಕ ಸಮಸ್ಯೆಗಳಿಂದ ಬಳಲುತ್ತಿದ್ದರು. ಇದು ಮೇಲ್ನೋಟಕ್ಕೆ ದಾಖಲೆಗಳನ್ನು ಪರಿಶೀಲಿಸಿದಾಗ ತಿಳಿದು ಬರುತ್ತದೆ' ಎಂದು ನ್ಯಾಯಪೀಠ ವಿವರಿಸಿದೆ.

ಹಲಸೂರಿನ 65 ವರ್ಷದ ವೃದ್ಧೆ ಆ್ಯಂಜಿಯೊಪ್ಲಾಸ್ಟಿ ಮಾಡಿಸಿಕೊಂಡ ಆರು ತಿಂಗಳ ನಂತರ ಸಾವನ್ನಪ್ಪಿದ್ದರು. 'ಇದು ಆ್ಯಂಜಿಯೊಪ್ಲಾಸ್ಟಿ ನೆರವೇರಿಸಿದ ವೈದ್ಯರ ವೃತ್ತಿಯ ನಿರ್ಲಕ್ಷ್ಯ' ಎಂದು ಆರೋಪಿಸಿ ಮೃತ ವೃದ್ಧೆಯ ಪುತ್ರ ಕರ್ನಾಟಕ ವೈದ್ಯಕೀಯ ಮಂಡಳಿಗೆ ದೂರು ಸಲ್ಲಿಸಿದ್ದರು.

ವೈದ್ಯಕೀಯ ಮಂಡಳಿ, 'ಈ ಪ್ರಕರಣದಲ್ಲಿ ವೈದ್ಯರ ವೃತ್ತಿದೋಷವೇ ಸಾವಿಗೆ ಕಾರಣ' ಎಂದು ತೀರ್ಮಾನಿಸಿ ಶಿಕ್ಷೆಯ ಎಚ್ಚರಿಕೆ ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಡಾ.ಗಣೇಶ್ ನಾಯಕ್ ಹೈಕೋರ್ಟ್ ಮೆಟ್ಟಿಲೇರಿದ್ದರು.



ತಮ್ಮ ಮೇಲೆ ಹಲ್ಲೆ ನಡೆಸಿದವರ ಕ್ಷಮೆ ಕೇಳುವ ವೈದ್ಯರನ್ನು ನೋಡಿದಾಗ, ಇದು ಸುಶಿಕ್ಷಿತ ಸಮಾಜದ ಲಕ್ಷಣವಲ್ಲ ಎನಿಸುತ್ತದೆ.

ಕೃಷ್ಣ ಎಸ್.ದೀಕ್ಷಿತ್ ನ್ಯಾಯಮೂರ್ತಿ

'ಹಳಸುತ್ತಿರುವ ಸಂಬಂಧ'

'ಆಸ್ಪತ್ರೆಗಳಲ್ಲಿ ಸಂಭವಿಸಿದ ಸಾವನ್ನು ವೈದ್ಯರ ನಿರ್ಲಕ್ಷ್ಯದಿಂದಲೇ ಸಂಭವಿಸಿದ ಸಾವು ಎಂದು ಆರೋಪಿಸುವ ಹಲವಾರು ಪ್ರಕರಣಗಳಲ್ಲಿ ರೋಗಿಯು ದೀರ್ಘಕಾಲೀನ ರೋಗಗಳಿಂದ ಬಳಲುವ ಕಾರಣಗಳನ್ನು ಮರೆಗೆ ಸರಿಸಲಾಗುತ್ತದೆ. ಇದರಿಂದಾಗಿ ವೈದ್ಯರು ಮತ್ತು ರೋಗಿಗಳ ನಡುವಿನ ಆರೋಗ್ಯಕರ ಸಂಬಂಧ ಹಳಸುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.

ಹೈಕೋರ್ಟ್ ಕಲಾಪ: ಯೂ ಟ್ಯೂಬ್‌ನಲ್ಲಿ ನೇರ ಪ್ರಸಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ದಿನದ ಸಂಪೂರ್ಣ ಕಲಾಪವನ್ನು ಇದೇ ಮೊದಲ ಬಾರಿಗೆ ಸೋಮವಾರ ಪ್ರಾಯೋಗಿಕವಾಗಿ ಯೂ ಟ್ಯೂಬ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು.

ಪ್ರಧಾನಪೀಠದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠದ ಕಲಾಪವನ್ನು ಒಂದೂವರೆ ಗಂಟೆ ಕಾಲ ನೇರ ಪ್ರಸಾರ ಮಾಡಲಾಗಿದ್ದು ಸುಮಾರು 2,400 ಜನ ವೀಕ್ಷಿಸಿದ್ದಾರೆ.

ನ್ಯಾಯಮೂರ್ತಿ ಎಸ್.ಸುಜಾತಾ ನೇತೃತ್ವದ ವಿಭಾಗೀಯ ನ್ಯಾಯಪೀಠದ ಕಲಾಪವನ್ನು ಒಂದೂಕಾಲು ಗಂಟೆಗೂ ಹೆಚ್ಚು ಸಮಯ ನೇರ ಪ್ರಸಾರ ಮಾಡಲಾಗಿದ್ದು, ಒಂದೂವರೆ ಸಾವಿರ ಜನ ವೀಕ್ಷಿಸಿದ್ದಾರೆ.

ಕೋರ್ಟ್ ಹಾಲ್ 2 ಮತ್ತು ನಾಲ್ಕರ ಕಲಾಪವನ್ನು ನೇರ ಪ್ರಸಾರ ಮಾಡಲು ಸಿದ್ಧತೆ ನಡೆಸಲಾಗಿತ್ತಾದರೂ ತಾಂತ್ರಿಕ ಕಾರಣಗಳಿಂದ ಪ್ರಸಾರವಾಗಿಲ್ಲ.

'ಕಲಬುರಗಿ ಹಾಗೂ ಧಾರವಾಡ ಪೀಠಗಳ ಕಲಾಪವನ್ನು ನೇರ ಪ್ರಸಾರ ಮಾಡಿಲ್ಲ' ಎಂದು ಹೈಕೋರ್ಟ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ರಾಗಿ–ಭತ್ತ ಬೆಂಬಲ ಬೆಲೆ ಪರಿಷ್ಕರಿಸಲು ಒತ್ತಾಯ

ಬೆಂಗಳೂರು: 'ಸರ್ಕಾರ ರಾಗಿ ಮತ್ತು ಭತ್ತದ ಬೆಂಬಲ ಬೆಲೆ ಪರಿಷ್ಕರಿಸಿ, ಖರೀದಿ ಪ್ರಮಾಣ ಹೆಚ್ಚಿಸಲು ಕ್ರಮಕೈಗೊಳ್ಳಬೇಕು' ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಆಹಾರ ಸಚಿವ ಉಮೇಶ ಕತ್ತಿ ಅವರಿಗೆ ಪತ್ರ ಬರೆದಿದ್ದಾರೆ.

'ಬೆಂಬಲ ಬೆಲೆಯಡಿ ಕಳೆದ ವರ್ಷ 2,06,722 ರೈತರಿಂದ ಕ್ವಿಂಟಲ್‌ಗೆ ₹3,295ರಂತೆ 47.53 ಲಕ್ಷ ಕ್ವಿಂಟಲ್ ರಾಗಿಯನ್ನು ಸರ್ಕಾರ ಖರೀದಿಸಿತ್ತು. ಮಂಡ್ಯ ಜಿಲ್ಲೆಯ 19,993 ರೈತರಿಂದ 3,98,323 ಕ್ವಿಂಟಲ್ ರಾಗಿ ಹಾಗೂ 27,825 ರೈತರಿಂದ 9,06,188 ಕ್ವಿಂಟಲ್ ಭತ್ತ ಖರೀದಿಸಲಾಗಿತ್ತು. ಪ್ರತಿ ರೈತರಿಂದ ಗರಿಷ್ಠ 75 ಕ್ವಿಂಟಲ್ ಮಿತಿಯನ್ನು ನಿಗದಿಪಡಿಸಲಾಗಿತ್ತು'.

'ಆದರೆ, ಪ್ರಸಕ್ತ ಸಾಲಿನಲ್ಲಿ ಬೆಂಬಲ ಬೆಲೆಯಡಿ ಎಕರೆಗೆ 10 ಕ್ವಿಂಟಲ್‌ನಂತೆ ಅಥವಾ ಒಬ್ಬ ರೈತನಿಂದ 20 ಕ್ವಿಂಟಲ್ ಮಾತ್ರ ಖರೀದಿಸಲು, ಭತ್ತಕ್ಕೆ ಪ್ರತಿ ರೈತನಿಂದ 40 ಕ್ವಿಂಟಲ್ ಅಥವಾ ಎಕರೆಗೆ 25 ಕ್ವಿಂಟಲ್ ಮಿತಿ ನಿಗದಿಪಡಿಸಿ ಸರ್ಕಾರ ಹೊರಡಿಸಿರುವ ಆದೇಶ ಹೊರಡಿಸಿದೆ. ಇದು, ರೈತರ ಪಾಲಿಗೆ ಮುಳುವಾಗಿದೆ' ಎಂದಿದ್ದಾರೆ.

'ಕೋವಿಡ್ ಸಂಕಷ್ಟ, ಅತಿವೃಷ್ಟಿಗಳಿಂದ ರೈತರ ಬದುಕು ದುಸ್ತರವಾಗಿದೆ. ಈ ವಿಷಮ ಸ್ಥಿತಿಯಲ್ಲೂ ರೈತರು ರಾಗಿ ಮತ್ತು ಭತ್ತ ಬೆಳೆದಿದ್ದಾರೆ. ಬೆಂಬಲ ಬೆಲೆಯ ಮೊತ್ತ ಹಾಗೂ ಖರೀದಿ ಮಿತಿಯನ್ನು ಹೆಚ್ಚಿಸುವ ಮೂಲಕ ಸಂಕಷ್ಟದಲ್ಲಿರುವ ರೈತರ ನೆರವಿಗೆ ಸರ್ಕಾರ ಧಾವಿಸಬೇಕು. ಈ ಸಂಬಂಧ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಚರ್ಚಿಸಿ, ಪರಿಷ್ಕೃತ ಆದೇಶ ಹೊರಡಿಸಲು ನಿರ್ದೇಶನ ನೀಡಬೇಕು' ಎಂದೂ ಒತ್ತಾಯಿಸಿದ್ದಾರೆ.



ಪರಿಷತ್ ಚುನಾವಣೆ: ಪಟ್ಟಿ ಪ್ರಕಟ

ಬೆಂಗಳೂರು: ವಿಧಾನಪರಿಷತ್ತಿನ ವಾಯವ್ಯ, ಪಶ್ಚಿಮ ಶಿಕ್ಷಕರ ಕ್ಷೇತ್ರ, ವಾಯವ್ಯ ಮತ್ತು ದಕ್ಷಿಣ ಪದವೀಧರರ ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ.

ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಒಟ್ಟು 19,505 (ಗಂಡು–13,653, ಹೆಣ್ಣು–5,852, ಇತರರು–0), ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಒಟ್ಟು 17,244 (ಗಂಡು–10,601, ಹೆಣ್ಣು–6,642, ಇತರರು–1), ವಾಯವ್ಯ ಪದವೀಧರರ ಕ್ಷೇತ್ರದಲ್ಲಿ ಒಟ್ಟು 72,674 (ಗಂಡು–52,104, ಹೆಣ್ಣು–20,564, ಇತರರು–6), ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ ಒಟ್ಟು 1,33,073 (ಗಂಡು–77,291, ಹೆಣ್ಣು–55,761, ಇತರರು–21) ಮತದಾರರು ಇದ್ದಾರೆ.

ಬೆಳಗಾವಿ ಮತ್ತು ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಚೇರಿ, ತಹಶೀಲ್ದಾರ್‌ಗಳ ಕಚೇರಿ ಮತ್ತು ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಎಲ್ಲ ಮತಗಟ್ಟೆಗಳಲ್ಲಿ ಮತದಾರ ಪಟ್ಟಿ ಪ್ರಕಟಿಸಲಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಅತಿಥಿ ಉಪನ್ಯಾಸಕರ ನೇಮಕ: ಅರ್ಜಿ ಸಲ್ಲಿಸಲು 21 ಕೊನೆ ದಿನ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021-21ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಅತಿಥಿ ಉಪನ್ಯಾಸಕರ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

'ಅತಿಥಿ ಉಪನ್ಯಾಸಕರಾಗಿ ಹೆಚ್ಚಿನ ಅವಧಿ ಸೇವೆ ಸಲ್ಲಿಸಿದವರಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುವುದು. ಅಲ್ಲದೆ, ವಿದ್ಯಾರ್ಹತೆ ಮತ್ತು ಸೇವಾ ವಿವರಗಳ ಆಧಾರದ ಮೇಲೆ, ನಾನಾ ಮಾನದಂಡಗಳ ಅನ್ವಯ ರಾಜ್ಯ ವ್ಯಾಪ್ತಿಯ ಮೆರಿಟ್ ಪಟ್ಟಿ ಸಿದ್ಧಪಡಿಸಲಾಗುವುದು. ಅರ್ಜಿ ಸಲ್ಲಿಸಲು ಇದೇ 21 ಕೊನೆಯ ದಿನ' ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ತಿಳಿಸಿದ್ದಾರೆ.

ಅಭ್ಯರ್ಥಿಗಳು ಅರ್ಜಿಯಲ್ಲಿ ತಮ್ಮ ಇಷ್ಟದ 10 ಸರ್ಕಾರಿ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಆಯ್ಕೆಯಾದವರಿಗೆ ಈ ಕಾಲೇಜುಗಳಲ್ಲೇ ಕಾರ್ಯನಿರ್ವಹಿಸಲು ಅವಕಾಶ ನೀಡಲಾಗುವುದು. ಒಂದು ವೇಳೆ, ಅಭ್ಯರ್ಥಿಗಳ ಆಯ್ಕೆಯ ಕಾಲೇಜುಗಳಲ್ಲಿ ವಾರಕ್ಕೆ 15 ಗಂಟೆಗಳ ಕಾರ್ಯಭಾರ ಇಲ್ಲದಿದ್ದರೆ ಬೇರೆ ಕಾಲೇಜುಗಳಲ್ಲಿ ಅವಕಾಶ ಕಲ್ಪಿಸಿ ಕೊಡಲಾಗುವುದು ಎಂದು ಅವರು ಹೇಳಿದ್ದಾರೆ.

ವಿದ್ಯಾರ್ಹತೆ ಮತ್ತು ಅಂಕಗಳ ವಿವರ: ನೇಮಕಾತಿಗೆ 100 ಅಂಕಗಳನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಯ ಎರಡು ವರ್ಷಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಪೈಕಿ ಶೇ 15ರಷ್ಟನ್ನು ಗಣನೆಗೆ ತೆಗೆದುಕೊಂಡು, ಅದಕ್ಕೆ ಗರಿಷ್ಠ 25 ಅಂಕ ನೀಡಲಾಗುವುದು ಎಂದಿದ್ದಾರೆ.

ಉಳಿದಂತೆ, ಪಿಎಚ್.ಡಿ., ನೆಟ್, ಕೆ-ಸೆಟ್, ಕೆ-ಸೆಟ್ ಮತ್ತು ಎಂ.ಫಿಲ್ ಪದವಿ ಹೆಚ್ಚುವರಿ ವಿದ್ಯಾರ್ಹತೆ ಎಂದು ಪರಿಗಣಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ. ಅರ್ಜಿ ಸಲ್ಲಿಸಲು– https://dec.karnataka.gov.in

ಕೆಪಿಎಸ್‌ಸಿ ಫಲಿತಾಂಶ ಶೀಘ್ರ ಪ್ರಕಟಿಸಿ: ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ನಾನಾ ಇಲಾಖೆಗಳ ಗೆಜೆಟೆಡ್ ಪ್ರೊಬೇಷನರಿ 106 ಹುದ್ದೆಗಳಿಗೆ 2021ರ ಫೆಬ್ರುವರಿಯಲ್ಲಿ ನಡೆಸಿದ ಮುಖ್ಯಪರೀಕ್ಷೆಯ ಫಲಿತಾಂಶವನ್ನು ಶೀಘ್ರ ಪ್ರಕಟಿಸುವಂತೆ ಕೆಪಿಎಸ್‌ಸಿಗೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಪತ್ರ ಬರೆದಿದ್ದಾರೆ.



ಸುರೇಶ್ ಕುಮಾರ್

'2017ನೇ ಸಾಲಿನ ಈ ಹುದ್ದೆಗಳ ನೇಮಕಾತಿಗೆ 2020ರ ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಿ ಅದೇ ವರ್ಷ ಆಗಸ್ಟ್‌ನಲ್ಲಿ ಪೂರ್ವಭಾವಿ ಪರೀಕ್ಷೆ ನಡೆಸಲಾಗಿತ್ತು. 2021ರ ಫೆ. 13ರಿಂದ 16ರವರೆಗೆ ಮುಖ್ಯ ಪರೀಕ್ಷೆ ನಡೆದಿದೆ. 11 ತಿಂಗಳು ಕಳೆದರೂ ಫಲಿತಾಂಶ ಹೊರಬಿದ್ದಿಲ್ಲ. ಕೆಪಿಎಸ್‌ಸಿಯ ಒಳಗಿನ ಮಾಹಿತಿ ಪ್ರಕಾರ ಇನ್ನೂ ಮೌಲ್ಯಮಾಪನವೇ ಆರಂಭವಾಗಿಲ್ಲ. ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ಇದರಿಂದ ತೀವ್ರ ನಿರಾಶೆ ಆಗಿದೆ. ಕೆಪಿಎಸ್‌ಸಿಯ ಈ ನಡವಳಿಕೆ ಅತ್ಯಂತ ಕ್ರೂರವಾದುದು' ಎಂದೂ ಪತ್ರದಲ್ಲಿ ಅವರು ಅಭಿಪ್ರಾಯಪಟ್ಟಿದ್ದಾರೆ.

'ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರ ಹುದ್ದೆಗೆ ಪೂರ್ಣ ಪ್ರಮಾಣದ ಅಧಿಕಾರಿ ಇಲ್ಲದಿರುವುದು ಕೂಡಾ ಫಲಿತಾಂಶ ವಿಳಂಬಕ್ಕೆ ಕಾರಣವಾಗಿದೆ. ಈಗ ಪ್ರಭಾರ ಹೊಂದಿರುವ ಅಧಿಕಾರಿ, ಮೌಲ್ಯಮಾಪನ ಮತ್ತು ಫಲಿತಾಂಶ ಪ್ರಟಿಸಲು ಜವಾಬ್ದಾರಿ ನನಗೇಕೆ ಎಂಬಂತೆ ವರ್ತಿಸುತ್ತಿದ್ದಾರೆಂದು ಕೆಪಿಎಸ್‌ಸಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ತಕ್ಷಣ ಗಮನಹರಿಸಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

ಕಡತ ಮಂಡಿಸುವಂತೆ ಸಿಎಸ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ

ಕೆಪಿಎಸ್‌ಸಿ: 362 ಅಭ್ಯರ್ಥಿಗಳ ಪರ ಎಚ್‌ಡಿಡಿ

• ರಾಜೇಶ್ ರೈ ಚಟ್ಲ

ಬೆಂಗಳೂರು: 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮೂಲಕ ನ್ಯಾಯ ಕೊಡಿಸಬೇಕೆಂದು ರಾಜ್ಯಸಭೆ ಜೆಡಿಎಸ್ ಸದಸ್ಯ ಎಚ್.ಡಿ ದೇವೇಗೌಡ ಅವರ ಪತ್ರ ಆಧರಿಸಿ ಕ್ರಮ ತೆಗೆದುಕೊಳ್ಳಲು ಕಡತ ಮಂಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮುಖ್ಯ ಕಾರ್ಯದರ್ಶಿಗೆ (ಸಿಎಸ್) ಸೂಚಿಸಿದ್ದಾರೆ.

ವ್ಯಾಪಕ ಭ್ರಷ್ಟಾಚಾರ ನಡೆದಿದೆಯೆಂಬ ಕಾರಣಕ್ಕೆ ಈ ಸಾಲಿನ ನೇಮಕಾತಿಯನ್ನು ರದ್ದುಗೊಳಿಸಿ 2018ರ ಮಾರ್ಚ್ 9ರಂದು ಹೈಕೋರ್ಟ್ ತೀರ್ಪು ನೀಡಿತ್ತು. ಅದೇ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು. ಆ ಬಳಿಕ, ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯನ್ನೂ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

'ಈ ಹಿಂದಿನ ಸರ್ಕಾರ ತೆಗೆದುಕೊಂಡ ತಪ್ಪು ನಿರ್ಧಾರ ಹಾಗೂ ನ್ಯಾಯಾಲಯಕ್ಕೆ ನೀಡಿದ ತಪ್ಪು ಮಾಹಿತಿಯಿಂದಾಗಿ ಯಾವ ತಪ್ಪುಗಳನ್ನೂ ಮಾಡದ, ಆಯ್ಕೆಗೊಂಡ 362 ಅಭ್ಯರ್ಥಿಗಳು ಅವಕಾಶ ವಂಚಿತರಾಗಿ ಅನ್ಯಾಯಕ್ಕೆ ಒಳಗಾಗಿದ್ದಾರೆ. ಏಳೆಂಟು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಈ ಪ್ರಕರಣದಿಂದ ಅನೇಕ ಪ್ರತಿಭಾನ್ವಿತ ಅಭ್ಯರ್ಥಿಗಳ ಜೀವನ ಕತ್ತಲೆಯಲ್ಲಿದೆ. ಈ ಬಗ್ಗೆ, ನಮಗೆ ನ್ಯಾಯ ಒದಗಿಸಿಕೊಡುವಂತೆ ಕೋರಿ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿಗಳು ನನಗೆ ಮನವಿ ಸಲ್ಲಿಸಿದ್ದಾರೆ' ಎಂದು ದೇವೇಗೌಡ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈ ಹಿಂದಿನ ಸರ್ಕಾರದ ತಪ್ಪು ನಿರ್ಧಾರ ಮತ್ತು ನ್ಯಾಯಾಂಗ ನಿಂದನೆ ಆಗದಿರುವ ಬಗ್ಗೆ ಕಾರಣಗಳು ಮತ್ತು ಈಗಿನ ಸರ್ಕಾರ ತೀರ್ಮಾನ ತೆಗೆದುಕೊಳ್ಳಲು ಪೂರಕವಾದ ಅಂಶಗಳನ್ನು ಸಾಕಷ್ಟು ವಿಸ್ತಾರವಾಗಿ ನನಗೆ ವಿವರಿಸಿದ್ದಾರೆ. ಈ ಮನವಿಯನ್ನು ಪರಿಶೀಲಿಸಿ, ಆಯ್ಕೆಯಾದ ಎಲ್ಲ 362 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕು' ಎಂದೂ ಪತ್ರದಲ್ಲಿ ಮನವಿ ಮಾಡಿದ್ದಾರೆ. ಅದೇ ಪತ್ರದ ಮೇಲೆ, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಟಿಪ್ಪಣಿ ಬರೆದಿರುವ ಮುಖ್ಯಮಂತ್ರಿ, ಕಡತ ಮಂಡಿಸುವಂತೆ ಸೂಚಿಸಿದ್ದಾರೆ.

ಪ್ರಕರಣದ ಇತಿಹಾಸ ವಿವರಿಸಿ ದೇವೇಗೌಡರಿಗೆ ಪತ್ರ ಬರೆದಿದ್ದ ಈ ಸಾಲಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳು, 'ನಮ್ಮ ನೇಮಕಾತಿ ವಿಷಯದಲ್ಲಿ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ನಮಗೆ ನ್ಯಾಯ ದೊರಕಿಸಿಕೊಡಬೇಕು' ಎಂದು ಮನವಿ ಮಾಡಿದ್ದರು.

ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಿಕೊಡುವಂತೆ ಸಿರಿಗೆರೆಯ ತರಳುಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಸಿದ್ಧಗಂಗಾ ಶ್ರೀಗಳೂ ಈ ಹಿಂದೆ ಪತ್ರ ಬರೆದಿದ್ದರು.

ಸಿಐಡಿ ವರದಿಯಲ್ಲಿ ಏನಿದೆ?

- ನೇಮಕಾತಿ ಅಕ್ರಮದ ತನಿಖೆಯನ್ನು ರಾಜ್ಯ ಸರ್ಕಾರ 2013ರ ಜೂನ್ 6ರಂದು ಸಿಐಡಿಗೆ ವಹಿಸಿತ್ತು.
- 215 ಸಾಕ್ಷಿಗಳು, 700 ಮೊಬೈಲ್‌ಗಳು, 75 ಬ್ಯಾಂಕ್ ಶಾಖೆಗಳ ದಾಖಲೆಗಳು, ಕೆಪಿಎಸ್‌ಸಿಯಿಂದ 337 ಕಡತಗಳ ಜಪ್ತಿ, ಅಭ್ಯರ್ಥಿಗಳಿಂದ 160 ದೂರು ಸಲ್ಲಿಕೆ.
- ಇಡೀ ಮುಖ್ಯ ಪರೀಕ್ಷೆ ಮೌಲ್ಯಮಾಪನ ತ್ವರಿತಗತಿಯಲ್ಲಿ ನಡೆದಿರುವುದನ್ನು ಸಿಐಡಿ ಸಂಶಯಿಸಿತ್ತು.
- ಗ್ರಾಮೀಣಾಭಿವೃದ್ಧಿ ವಿಷಯದ ಪ್ರಾಧ್ಯಾಪಕರು ಲಭ್ಯವಿದ್ದರೂ ಗ್ರಾಮೀಣಾಭಿವೃದ್ಧಿ ಮತ್ತು ಕೋ–ಆಪರೇಟಿವ್ ವಿಷಯದ ಉತ್ತರ ಪತ್ರಿಕೆಗಳನ್ನು ಸಮಾಜ ಶಾಸ್ತ್ರದ ಮತ್ತು ಅರ್ಥಶಾಸ್ತ್ರ ವಿಷಯದ ಪ್ರಾಧ್ಯಾಪಕರಿಂದ ಮೌಲ್ಯಮಾಪನ.
- ಕನ್ನಡ ಪ್ರಾಧ್ಯಾಪಕರಿಂದ ಆಂಗ್ಲ, ಆಂಗ್ಲ ವಿಷಯದ ಪ್ರಾಧ್ಯಾಪಕರಿಂದ ಕನ್ನಡ ಉತ್ತರ ಪತ್ರಿಕೆಗಳ ಮೌಲ್ಯಮಾಪನ.
- ಅಭ್ಯರ್ಥಿಗಳು, ಮೌಲ್ಯಮಾಪಕರು, ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರು, ಸಿಬ್ಬಂದಿ ಮಧ್ಯೆ ದೂರವಾಣಿ, ಎಸ್‌ಎಂಎಸ್ ಸಂವಾದ.
- ತರಾತುರಿಯಲ್ಲಿ ಅಂಕಗಳ ಮರು ಕೂಡಿಸುವ (ರಿ ಟೋಟಲಿಂಗ್) ಪ್ರಕ್ರಿಯೆ
- ಮುಖ್ಯ ಪರೀಕ್ಷೆಯ ಉತ್ತರಗಳನ್ನು ತಿದ್ದಿರುವುದು ಎಫ್‌ಎಸ್‌ಎಲ್ ವರದಿಯಲ್ಲಿ ಸಾಬೀತು
- ವಿಶ್ವವಿದ್ಯಾಲಯಗಳು ನೀಡಿದ್ದ ಪಟ್ಟಿಯಲ್ಲಿ ಇಲ್ಲದ ಪ್ರಾಧ್ಯಾಪಕರಿಂದ ಬಹುತೇಕ ವಿಷಯಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ
- ಕೆಪಿಎಸ್‌ಸಿ ಪಟ್ಟಿಯಲ್ಲಿ 13,663 ಉಪನ್ಯಾಸಕರಿದ್ದರೂ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಲು, ನಿವೃತ್ತ, ಪದವಿ ಕಾಲೇಜುಗಳ ಉಪನ್ಯಾಸಕರಿಂದ ಮೌಲ್ಯಮಾಪನ.
- ತಜ್ಞ ಮೌಲ್ಯಮಾಪಕರು ಮಾಡಿದ ಮೌಲ್ಯಮಾಪನಕ್ಕೂ ಸಿಐಡಿ ಮನವಿಯಂತೆ ವಿವಿಧ ವಿಶ್ವವಿದ್ಯಾಲಯಗಳ ಉಪನ್ಯಾಸಕರು ಮತ್ತು ಕೆಪಿಎಸ್‌ಸಿ ಪಟ್ಟಿಯಲ್ಲಿದ್ದ ಉಪನ್ಯಾಸಕರು ಮಾಡಿದ ಮೌಲ್ಯಮಾಪನ ಅಂಕಗಳ ಮಧ್ಯೆ ಭಾರಿ ಅಂತರ (ಶೇ 225ರಷ್ಟು).
- ಹಣ ನೀಡಿದವರಿಗೆ ಮುಖ್ಯ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಹೆಚ್ಚು ಅಂಕ.
- ಸಿಸಿಟಿವಿ ಕ್ಯಾಮೆರಾದ ತುಣುಕು ನಾಶ. ನಿಜವಾದ ಡಿವಿಡಿಗಳನ್ನು ಬದಲಿಸಿ ನಕಲಿ ಡಿವಿಡಿಗಳ ಸೃಷ್ಟಿ.

ಸರ್ಕಾರ– ಡಿಪಿಎಆರ್ ವಿರುದ್ಧ ನಿಲುವು?

362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಪರ ರಾಜ್ಯ ಸರ್ಕಾರ ನಿಲುವು ಹೊಂದಿದ್ದರೂ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಅಭಿಪ್ರಾಯ ಇದಕ್ಕೆ ಪೂರಕವಾಗಿಲ್ಲ ಎಂದು ಗೊತ್ತಾಗಿದೆ.

ಈ ಪ್ರಕರಣದಲ್ಲಿ ಎಲ್ಲ ಕೋರ್ಟ್‌ಗಳು ಒಂದೇ ನಿಲುವು ತಾಳಿವೆ. ಹೀಗಿರುವಾಗ, ಸಂವಿಧಾನದ ಅನುಚ್ಛೇದ 323 (2)ರ ಪ್ರಕಾರ, ರಾಜ್ಯ ಸರ್ಕಾರ ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸಿದರೆ ಅಥವಾ ಹಿಂಪಡೆದರೆ ಆ ವಿಷಯವನ್ನು ಕೆಪಿಎಸ್‌ಸಿ ತನ್ನ ವಾರ್ಷಿಕ ವರದಿಯಲ್ಲಿ ಪ್ರಕಟಿಸಬೇಕು. ಆ ವರದಿಯನ್ನು ವಿಧಾನ ಮಂಡಲದ ಎರಡೂ ಸದನಗಳಲ್ಲಿ ಮಂಡಿಸಬೇಕು. ಆದರೆ, 2011ನೇ ಸಾಲಿನ ವರದಿಯನ್ನು ಸದನದಲ್ಲಿ ಮಂಡಿಸುವ ವೇಳೆ ರೀತಿ–ರಿವಾಜು ಪಾಲನೆ ಆಗಿಲ್ಲ ಎಂಬ ಕಾರಣ ನೀಡಿ ಆಯ್ಕೆಯಾದವರಿಗೆ ಹುದ್ದೆ ನೀಡುವ ತೀರ್ಮಾನ ಕೈಗೊಂಡರೆ 'ನ್ಯಾಯಾಂಗ ನಿಂದನೆ' ಆಗಬಹುದೆಂಬ ಆತಂಕ ಡಿಪಿಎಆರ್ ಅಧಿಕಾರಿಗಳದ್ದಾಗಿದೆ.

ಆಯ್ಕೆ ಪ್ರಕ್ರಿಯೆ ರದ್ದು- ಸರ್ಕಾರದ ನಿರ್ಧಾರ ಸರಿ: ಸುಪ್ರೀಂ ಕೋರ್ಟ್

ಹೈಕೋರ್ಟ್ ತೀರ್ಪು ಪ್ರಶ್ನಿಸಿದ್ದ ಮೇಲ್ಮನವಿ ಪರಿಶೀಲಿಸಿ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್, ಹೈಕೋರ್ಟ್ ನೀಡಿದ ಆದೇಶದಂತೆ ಅಕ್ರಮವಾಗಿ ನೇಮಕಾತಿ ಹೊಂದಿದ, ಅರ್ಹರಲ್ಲದ, ಪ್ರಾಮಾಣಿಕತೆ ಇಲ್ಲದ ವ್ಯಕ್ತಿಗಳಿಗೆ ಸರ್ಕಾರದಲ್ಲಿ ನೇಮಕಾತಿ ಕೊಡುವುದು ಕಾನೂನು ಪ್ರಕಾರ ಸಮ್ಮತವಲ್ಲ. ಸಂವಿಧಾನದ ಪ್ರಕಾರ ನ್ಯಾಯಸಮ್ಮತ ಆಯ್ಕೆಯೇ ಮಾನದಂಡ ಆಗಬೇಕು' ಎಂದಿದೆ. ಆಯ್ಕೆ ಪಟ್ಟಿಯಲ್ಲಿ ಹೆಸರಿದ್ದಾಕ್ಷಣ ನೇಮಕಾತಿ ನೀಡಿ ಎಂದು ಕೇಳುವ ಹಕ್ಕು ಇಲ್ಲ. ಆದ್ದರಿಂದ, ನೇಮಕಾತಿ ಆದೇಶ ನೀಡಿ ಎಂದು ಕೆಎಟಿ ನೀಡಿದ ಆದೇಶ ದೋಷಪೂರಿತವಾಗಿದೆ ಹಾಗೂ ಸರ್ಕಾರದ ನಿಲುವಿಗೆ ವಿರುದ್ದವಾಗಿದೆ. ಹೈಕೋರ್ಟ್ ಬಹಳಷ್ಟು ದಾಖಲೆಗಳನ್ನು ಪರಿಶೀಲಿಸಿದೆ. ಅಭ್ಯರ್ಥಿಗಳ ಹಾಗೂ ಸಂದರ್ಶಕರ ದೂರವಾಣಿ ಕರೆಗಳನ್ನು ಕಲೆ ಹಾಕಿದೆ. ಕೆಪಿಎಸ್‌ಸಿ ಡಿಜಿಟಲ್ ವಿಡಿಯೊ ದಾಖಲೆಗಳನ್ನು ಬದಲಾಯಿಸಿರುವುದು ಸಾಕ್ಷಿ ನಾಶಪಡಿಸುವುದಕ್ಕಾಗಿಯೇ ಎಂದು ಆದೇಶಿಸಿರುವುದು ಸರಿಯಾಗಿದೆ. ಅಲ್ಲದೇ ಒಂದು ಆಯ್ಕೆ ಪ್ರಕ್ರಿಯೆಯಲ್ಲಿ ಸಂಪೂರ್ಣ ದೋಷವಿದ್ದಾಗ ಕೆಲವರು ಒಳ್ಳೆಯವರು, ಕೆಲವರು ಕೆಟ್ಟವರು ಎಂದು ವಿಂಗಡಿಸಲು ಸಾಧ್ಯವಾಗದು. ಆದ್ದರಿಂದ, ಈ ಪ್ರಕರಣದಲ್ಲಿ ಸಂಪೂರ್ಣ ಆಯ್ಕೆ ಪ್ರಕ್ರಿಯೆಯನ್ನೇ ರದ್ದು ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರ ಅತ್ಯಂತ ಯೋಗ್ಯವಾಗಿದೆ. ಇದರಲ್ಲಿ ಹಸ್ತಕ್ಷೇಪ ಮಾಡುವುದು ಸರಿಯಲ್ಲ ಎಂದೂ ಹೇಳಿದೆ.

ಅಂತಿಮ ಆಯ್ಕೆ ಪಟ್ಟಿ ಕಾನೂನುಬಾಹಿರ– ಹೈಕೋರ್ಟ್

362 ಅಭ್ಯರ್ಥಿಗಳ ನೇಮಕಾತಿ ಆದೇಶವನ್ನು 2018ರ ಮಾರ್ಚ್ 9ರಂದು ರದ್ದುಪಡಿಸಿದ್ದ ಹೈಕೋರ್ಟ್, 'ಕೆಪಿಎಸ್‌ಸಿ ಆಯ್ಕೆಯಲ್ಲಿ ಭಾರಿ ಅಕ್ರಮ ನಡೆದಿರುವುದು ಸಿಐಡಿ ವರದಿಯಿಂದ ವೇದ್ಯವಾಗಿದೆ. ಹೀಗಾಗಿ, 2014ರ ಮಾರ್ಚ್ 21ರಂದು ಕೆಪಿಎಸ್‌ಸಿ ಪ್ರಕಟಿಸಿದ್ದ ಅಂತಿಮ ಆಯ್ಕೆ ಪಟ್ಟಿ ಕಾನೂನು ಬಾಹಿರ' ಎಂದು ಅಭಿಪ್ರಾಯಪಟ್ಟಿದೆ. 'ಮರು ಎಣಿಕೆಯಲ್ಲಿ ಅಂಕಗಳನ್ನು ತಿದ್ದಿರುವುದು ಸ್ಪಷ್ಟವಾಗಿದೆ. ಸಂದರ್ಶನದಲ್ಲಿ ಕೆಪಿಎಸ್‌ಸಿ ಸದಸ್ಯರು ನಿರ್ದಿಷ್ಟ ಅಭ್ಯರ್ಥಿಗೆ ಒಂದೇ ರೀತಿಯಲ್ಲಿ ಅಂಕಗಳನ್ನು ನೀಡಿದ್ದಾರೆ. ಅಂದರೆ, 566 ಅಭ್ಯರ್ಥಿಗಳಿಗೆ ಎಲ್ಲ ಸದಸ್ಯರೂ ಒಂದೇ ತೆರನಾಗಿ ಅಂಕ ನೀಡಿದ್ದಾರೆ. ಇದರಿಂದ ಎಲ್ಲ ಸದಸ್ಯರೂ ಅಂಕಗಳನ್ನು ಏಕರೀತಿ ನೀಡುವುದಕ್ಕೆ ಪೂರ್ವ ನಿರ್ಧಾರ ಮಾಡಿದ್ದರು ಎಂಬುದು ತಿಳಿದುಬರುತ್ತದೆ. ಕೆಪಿಎಸ್‌ಸಿ ಅಧ್ಯಕ್ಷರಿಗೆ ಖಾಸಗಿ ಕಾರ್ಯದರ್ಶಿಯಾಗಿದ್ದ ಗೋಪಾಲಕೃಷ್ಣ ಪ್ರತಿ ದಿನ ಸಂದರ್ಶನ ನಡೆದ ನಂತರ ಅಧ್ಯಕ್ಷರು ಹಾಗೂ ಸದಸ್ಯರ ಜೊತೆ ಅಭ್ಯರ್ಥಿಗಳು ಪರೀಕ್ಷೆಯಲ್ಲಿ ತೋರಿದ ಸಾಧನೆಯ ಬಗ್ಗೆ ಚರ್ಚಿಸುತ್ತಿದ್ದರು ಎಂಬುದನ್ನು ಹೈಕೋರ್ಟ್ ತೀರ್ಪು ಉಲ್ಲೇಖಿಸಿದೆ.

ವಿಷಾನಿಲ ಸೋರಿಕೆ: 10 ಎಕರೆ ಬೆಳೆ ನಾಶ

ಮಂಡ್ಯ: ತಾಲ್ಲೂಕಿನ ಕಾರೇಕಟ್ಟೆ ಗ್ರಾಮ ಸಮೀಪ ರಾಸಾಯನಿಕ ಘಟಕದಿಂದ ಸೋಮವಾರ ಸಲ್ಫರಿಕ್ ಆ್ಯಸಿಡ್ ಅನಿಲ ಸೋರಿ ಸುತ್ತಮುತ್ತಲಿನ 10 ಎಕರೆಯಲ್ಲಿ ಬೆಳೆ ನಾಶವಾಗಿದೆ.

ಮೂರು ದಿನದ ಹಿಂದೆ ಕೀರ್ತಿ ರಾಸಾಯನಿಕ ಘಟಕ ಚಟುವಟಿಕೆ ಆರಂಭಿಸಿತ್ತು. ಬೆಳಿಗ್ಗೆ ರೈತರು ಜಮೀನಿಗೆ ಭೇಟಿ ನೀಡಿದಾಗ ರಾಗಿ, ಭತ್ತ, ಕಬ್ಬು ಒಣಗಿರುವುದು, ತೆಂಗಿನ ಮರಗಳಿಗೂ ತೊಂದರೆಯಾಗಿರುವುದು ಗೊತ್ತಾಗಿದೆ. ಹಸುಗಳೂ ಪ್ರಜ್ಞೆ ತಪ್ಪಿರುವುದು ಬೆಳಕಿಗೆ ಬಂದಿದೆ. ರೈತರು ಕೂಡಲೇ ಕಂದಾಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ತಹಶೀಲ್ದಾರ್ ಚಂದ್ರಶೇಖರ್ ಶಂ ಗಾಳಿ, ವಿವಿಧ ಅಧಿಕಾರಿಗಳು ಸ್ಥಳ ಪರಿಶೀಲಿಸಿದ್ದಾರೆ. ವಿಷಾನಿಲ ಸೋರಿಕೆ ದೃಢ ಪಟ್ಟಿದ್ದು, ಘಟಕ ಸ್ಥಗಿತಗೊಳಿಸಲು ಆದೇಶಿಸಿದ್ದಾರೆ.

ಸೊಪ್ಪು ರಸ್ತೆಗೆ ಎಸೆದ ರೈತನಿಗೆ ಪರಿಹಾರ

ವಿಜಯಪುರ: ತರಕಾರಿ ಮಾರಲು ಪೊಲೀಸರು ತಡೆಯೊಡ್ಡಿದ್ದರು ಎಂದು ಆರೋಪಿಸಿ ರಸ್ತೆ ಮೇಲೆ ಸೊಪ್ಪು ಎಸೆದು ಪ್ರತಿಭಟಿಸಿದ್ದ ಡೋಮನಾಳ ಗ್ರಾಮದ ರೈತ ಭೀಮನಗೌಡ ಬಿರಾದಾರಗೆ ತೋಟಗಾರಿಕೆ ಸಚಿವ ಮುನಿರತ್ನ ಸೋಮವಾರ ವಿಡಿಯೊ ಕರೆ ಮಾಡಿ ಸಾಂತ್ವನ ಹೇಳಿದ್ದಾರೆ.

'ಸಚಿವರು ನನ್ನೊಂದಿಗೆ ಮಾತನಾಡಿ ವಿಷಾದಿಸಿದಿರು. ಸರ್ಕಾರ ರೈತರ ಪರವಾಗಿದೆ. ತೊಂದರೆಯಾಗದಂತೆ ನೋಡಿಕೊಳ್ಳುವ ಭರವಸೆ ನೀಡಿ, ಪರಿಹಾರವಾಗಿ ₹ 5 ಸಾವಿರವನ್ನು ಫೋನ್ ಪೇ ಮೂಲಕ ನೀಡಿದರು' ಎಂದು ರೈತ ಬಿರಾದಾರ ಹೇಳಿದರು.

ಘಟನೆಯ ವಿವರ: ವಾರಾಂತ್ಯ ಕರ್ಫ್ಯೂ ನಡುವೆ ನಗರದ ಗೋದಾವರಿ ಹೋಟೆಲ್ ಬಳಿ ಭಾನುವಾರ ಸಂತೆಯಲ್ಲಿ ಕಡಿಮೆ ದರಕ್ಕೆ ಸೊಪ್ಪು ಮಾರುತ್ತಿದ್ದು, ಗ್ರಾಹಕರು ಗುಂಪುಗೂಡಿದ್ದರು.

ಜನರು ಗುಂಪುಗೂಡಿದ್ದನ್ನು ಕಂಡ ಪೊಲೀಸರು ಮಾರಾಟಕ್ಕೆ ತಡೆಯೊಡ್ಡಿದ್ದರು.

ಮುಂಬೈ ಧಾರಣೆ

ಶೇಂಗಾ 17-1-2022	
ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9000-9050
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1140 (1142)
ಪಾಮ್ ವಾರದ ಡೆಲಿವರಿ	1160 (1159)
ಸೂರ್ಯಕಾಂತಿ ಎಣ್ಣೆ ಕಚ್ಚಾ	1175 (1175)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	47,950 (47,850)
ಬೆಳ್ಳಿ ಕೆ.ಜಿ	61,750 (61,500)


ಆವರಣದಲ್ಲಿ ಶನಿವಾರದ ಧಾರಣೆ

ಕಾರೆನ್ಸ್‌ಗೆ 7,738 ಬುಕಿಂಗ್

ನವದೆಹಲಿ (ಪಿಟಿಐ): 'ಕಾರೆನ್ಸ್' ವಾಹನವು ಮೊದಲ ದಿನವೇ 7,738 ಬುಕಿಂಗ್ ಪಡೆದಿದೆ ಎಂದು ಕಿಯಾ ಇಂಡಿಯಾ ಕಂಪನಿಯು ಸೋಮವಾರ ತಿಳಿಸಿದೆ.

ಈ ವಾಹನದ ಪ್ರೀ-ಬುಕಿಂಗ್‌ಅನ್ನು ಕಂಪನಿಯು ಜನವರಿ 14ರಂದು ಆರಂಭಿಸಿತ್ತು. ₹ 25 ಸಾವಿರ ಪಾವತಿಸಿ ಬುಕ್ ಮಾಡಬಹುದು. 'ಪ್ರೀ-ಬುಕಿಂಗ್ ಶುರು ಮಾಡಿದ ಮೊದಲ 24 ಗಂಟೆಗಳಲ್ಲಿ ಇಷ್ಟು ವಾಹನಗಳಿಗೆ ಬುಕಿಂಗ್ ಬಂದಿದೆ. ನಮ್ಮ ಯಾವುದೇ ಉತ್ಪನ್ನಕ್ಕೆ ಭಾರತದಲ್ಲಿ ಮೊದಲ ದಿನ ಬಂದಿರುವ ಅತಿಹೆಚ್ಚಿನ ಬುಕಿಂಗ್ ಇದು' ಎಂದು ಕಂಪನಿಯ ಸಿಇಒ ತಾಯ್-ಜಿನ್ ಪಾರ್ಕ್ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,255
ಇಂದಿನ ಅಂತ್ಯ25	18,308
▲	53
ದಿನದ ಗರಿಷ್ಠ	18,321

ವಿನಿಮಯ ದರ

$ ಡಾಲರ್	74.25
£ ಪೌಂಡ್	101.60
€ ಯುರೊ	84.89
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1205 (1205)
ಸೂರ್ಯಕಾಂತಿ (ರಿಫೈನ್ಡ್)	₹1230 (1235)
ಪಾಮೋಲಿನ್	₹1162 (1161)

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

ಸಂಪತ್ತಿನ ಅಸಮಾನ ಹಂಚಿಕೆಯ ಕುರಿತು ಆಕ್ಸ್‌ಫ್ಯಾಮ್ ಸಮೀಕ್ಷಾ ವರದಿ

ಮಕ್ಕಳ ಶಿಕ್ಷಣ ವೆಚ್ಚ ನಿಭಾಯಿಸಲು ಸಾಕು 10 ಸಿರಿವಂತರ ಸಂಪತ್ತು

ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸುರಕ್ಷತೆಯ ಮೇಲೆ ಸರ್ಕಾರ ಮಾಡುವ ವೆಚ್ಚವು ಕಡಿಮೆ ಆಯಿತು. ಆ ಹೊತ್ತಿನಲ್ಲಿಯೇ ಆರೋಗ್ಯ ಮತ್ತು ಶಿಕ್ಷಣದ ಖಾಸಗೀಕರಣ ಕೂಡ ಹೆಚ್ಚಾಗಿದೆ ಎಂದು ವರದಿ ಹೇಳಿದೆ.

ನವದೆಹಲಿ/ದಾವೋಸ್ (ಪಿಟಿಐ): ಭಾರತದ 10 ಅತ್ಯಂತ ಸಿರಿವಂತರ ಬಳಿ ಇರುವ ಸಂಪತ್ತಿನಿಂದ ಮುಂದಿನ 25 ವರ್ಷಗಳವರೆಗೆ ದೇಶದ ಮಕ್ಕಳ ಶಾಲೆ ಮತ್ತು ಉನ್ನತ ಶಿಕ್ಷಣಕ್ಕೆ ಅಗತ್ಯವಿರುವ ಹಣ ಒದಗಿಸಬಹುದು ಎಂದು ಆಕ್ಸ್‌ಫ್ಯಾಮ್ ಇಂಡಿಯಾ ವರದಿ ಹೇಳಿದೆ.

ವಿಶ್ವ ಆರ್ಥಿಕ ವೇದಿಕೆಯ ದಾವೋಸ್ ಶೃಂಗದ ಮೊದಲ ದಿನವಾದ ಸೋಮವಾರ ಆಕ್ಸ್‌ಫ್ಯಾಮ್ ಇಂಡಿಯಾ ಸಂಸ್ಥೆಯು ಸಂಪತ್ತಿನ ಅಸಮಾನ ಹಂಚಿಕೆಯ ಕುರಿತಾದ ತನ್ನ ವಾರ್ಷಿಕ ಸಮೀಕ್ಷಾ ವರದಿಯನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ, ಭಾರತದ ಶತಕೋಟ್ಯಧಿಪತಿಗಳ ಸಂಪತ್ತು ಮೌಲ್ಯವು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಎರಡು ಪಟ್ಟಿಗಿಂತ ಹೆಚ್ಚು ಏರಿಕೆ ಆಗಿದೆ. ದೇಶದಲ್ಲಿನ ಶತಕೋಟ್ಯಧಿಪತಿಗಳ ಸಂಖ್ಯೆಯು 142ಕ್ಕೆ ತಲುಪಿದೆ.

ಶ್ರೀಮಂತಿಕೆಯ ಏಣಿಯ ಮೇಲ್ಭಾಗದಲ್ಲಿನ ಶೇಕಡ 10ರಷ್ಟು ಜನರ ಬಳಿ ದೇಶದ ಒಟ್ಟು ಸಂಪತ್ತಿನ ಶೇಕಡ 45ರಷ್ಟು ಕ್ರೂಢೀಕೃತವಾಗಿದೆ. ಶ್ರೀಮಂತಿಕೆಯ ಏಣಿಯ ತಳಭಾಗದಲ್ಲಿ ಇರುವ ಶೇ 50ರಷ್ಟು ಜನರ ಬಳಿ ಇರುವುದು ಶೇ 6ರಷ್ಟು ಸಂಪತ್ತು ಮಾತ್ರ.

ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸುರಕ್ಷತೆಯ ಮೇಲೆ ಸರ್ಕಾರ ಮಾಡುವ ವೆಚ್ಚವು ಕಡಿಮೆಯಾದ ಹೊತ್ತಿನಲ್ಲಿಯೇ ಆರೋಗ್ಯ ಮತ್ತು ಶಿಕ್ಷಣದ ಖಾಸಗೀಕರಣ ಕೂಡ ಹೆಚ್ಚಾಯಿತು. ಹೀಗಾಗಿಯೇ ಕೋವಿಡ್-19 ಸಾಂಕ್ರಾಮಿಕದಿಂದ ರಕ್ಷಣೆ ಪಡೆಯಲು ಬೇಕಾದ ಸವಲತ್ತುಗಳಿಂದ ಜನಸಾಮಾನ್ಯರು ವಂಚಿತರಾದರು ಎಂದು ವರದಿಯು ಹೇಳಿದೆ.

ವರಮಾನ ಸೃಷ್ಟಿಸುವ ಪ್ರಾಥಮಿಕ ಮೂಲಗಳ ಬಗ್ಗೆ ಮರುಚಿಂತನೆ ಮಾಡುವಂತೆ ವರದಿಯು ಸರ್ಕಾರಕ್ಕೆ ಮನವಿ ಮಾಡಿದೆ. ಹೆಚ್ಚು ಪ್ರಗತಿಪರ ತೆರಿಗೆ ವಿಧಾನ ಅಳವಡಿಸಿಕೊಳ್ಳುವಂತೆ ಮತ್ತು ಶ್ರೀಮಂತರ ಬಳಿ ಸಂಪತ್ತು ಕ್ರೋಢೀಕರಣ ಆಗುತ್ತಿರುವುದಕ್ಕೆ ತೆರಿಗೆ ವಿಧಾನದಲ್ಲಿ ಇರುವ ಸಾಂಸ್ಥಿಕ ಸಮಸ್ಯೆಗಳನ್ನು ಪರಿಶೀಲಿಸುವಂತೆ ವರದಿಯು ಸಲಹೆ ನೀಡಿದೆ.

ಸಿರಿವಂತರ ಸಂಪತ್ತು ಅದೆಷ್ಟು ಅಗಾಧ!

- ದೇಶದ 10 ಜನ ಅತ್ಯಂತ ಸಿರಿವಂತರು ದಿನಕ್ಕೆ ತಲಾ ₹ 7 ಕೋಟಿ ಖರ್ಚು ಮಾಡಿದರೆ ಅವರ ಬಳಿ ಈಗ ಇರುವ ಸಂಪತ್ತು ಖಾಲಿಯಾಗಲು 84 ವರ್ಷಗಳು ಬೇಕಾಗಲಿವೆ. ಸಿರಿವಂತರು ಮತ್ತು ಅತಿ ಸಿರಿವಂತರಿಗೆ ವಿಧಿಸುವ ಸಂಪತ್ತು ತೆರಿಗೆಯಿಂದ ವಾರ್ಷಿಕವಾಗಿ ಬರುವ ₹ 5.79 ಲಕ್ಷ ಕೋಟಿಯಿಂದ ಸರ್ಕಾರದ ಆರೋಗ್ಯ ಬಜೆಟ್‌ಅನ್ನು ಶೇ 271ರಷ್ಟು ಹೆಚ್ಚಿಸಬಹುದು
- ಅತ್ಯಂತ ಸಿರಿವಂತರಾದ ಶೇಕಡ 10ರಷ್ಟು ಜನರ ಮೇಲೆ ಶೇ 1ರಷ್ಟು ಹೆಚ್ಚುವರಿ ತೆರಿಗೆ ವಿಧಿಸಿದರೆ ಬರುವ ವರಮಾನದಿಂದ, 17.7 ಲಕ್ಷ ಹೆಚ್ಚುವರಿ ಆಮ್ಲಜನಕ ಸಿಲಿಂಡರ್ ಪೂರೈಸಬಹುದು
- 98 ಸಿರಿವಂತ ಕುಟುಂಬಗಳ ಮೇಲೆ ಹೆಚ್ಚುವರಿಯಾಗಿ ತಲಾ ಶೇ 1ರಷ್ಟು ಸಂಪತ್ತು ತೆರಿಗೆ ವಿಧಿಸಿದರೆ ಅದರಿಂದ ಬರುವ ಮೊತ್ತದಿಂದ ಆಯುಷ್ಮಾನ್ ಭಾರತ್ ಯೋಜನೆಗೆ ಏಳು ವರ್ಷಕ್ಕೂ ಹೆಚ್ಚು ಕಾಲ ಹಣ ಪೂರೈಸಬಹುದು
- ಭಾರತದ 142 ಸಿರಿವಂತರ ಬಳಿ ಇರುವ ಸಂಪತ್ತಿನ ಒಟ್ಟು ಮೌಲ್ಯವು ₹ 53 ಲಕ್ಷ ಕೋಟಿ. ಇವರ ಪೈಕಿ 98 ಸಿರಿವಂತರ ಬಳಿ ಇರುವ ಸಂಪತ್ತಿನ ಮೌಲ್ಯವು ದೇಶದ 55.5 ಕೋಟಿ ಜನರ ಬಳಿ ಇರುವ ಒಟ್ಟು ಸಂಪತ್ತಿಗೆ (₹49 ಲಕ್ಷ ಕೋಟಿ) ಸಮ
- ₹ 10 ಕೋಟಿಗೂ ಅಧಿಕ ಆದಾಯ ಹೊಂದಿರುವವರಿಗೆ ಶೇ 2ರಷ್ಟು ತೆರಿಗೆ ವಿಧಿಸಿದರೆ ಅದರಿಂದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಬಜೆಟ್ ಅನುದಾನವನ್ನು ಶೇ 121ರಷ್ಟು ಹೆಚ್ಚಿಸಬಹುದು
- ಮೊದಲ 100 ಸಿರಿವಂತರ ಸಂಪತ್ತನ್ನು ಒಟ್ಟುಗೂಡಿಸಿದರೆ ಸಿಗುವ ಮೊತ್ತದಿಂದ, ಮಹಿಳೆಯರಿಗಾಗಿ ಸ್ವಸಹಾಯ ಗುಂಪುಗಳನ್ನು ರಚಿಸುವ ಜವಾಬ್ದಾರಿಯನ್ನು ಹೊಂದಿರುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಗೆ ಮುಂದಿನ 365 ವರ್ಷಗಳವರೆಗೆ ಹಣ ನೀಡಬಹುದು
- ಭಾರತದಲ್ಲಿನ 98 ಅತಿಶ್ರೀಮಂತ ಕುಟುಂಬಗಳ ಮೇಲೆ ವಿಧಿಸುವ ಶೇ 4ರಷ್ಟು ಸಂಪತ್ತು ತೆರಿಗೆಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ ಎರಡು ವರ್ಷಗಳಿಗೂ ಹೆಚ್ಚು ಅವಧಿಗೆ ಬೇಕಾದ ಹಣ ಸಿಗುತ್ತದೆ
- ಭಾರತದಲ್ಲಿನ 98 ಮಂದಿ ಶತಕೋಟ್ಯಧಿಪತಿಗಳ ಸಂಪತ್ತಿನ ಮೇಲಿನ ಶೇ 1ರಷ್ಟು ತೆರಿಯಿಂದ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಬರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಒಟ್ಟು ವಾರ್ಷಿಕ ವೆಚ್ಚವನ್ನು ನಿಭಾಯಿಸಬಹುದು. ಇವರ ಸಂಪತ್ತಿನ ಮೇಲೆ ಶೇ 4ರಷ್ಟು ತೆರಿಗೆಯಿಂದ 17 ವರ್ಷಗಳವರೆಗೆ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ವೆಚ್ಚಗಳನ್ನು ನಿಭಾಯಿಸಬಹುದು ಅಥವಾ ಆರು ವರ್ಷಗಳವರೆಗೆ ಸಮಗ್ರ ಶಿಕ್ಷಣ ಅಭಿಯಾನ ನಡೆಸಬಹುದು.
- ಅಂತೆಯೇ, 98 ಮಂದಿ ಶತಕೋಟ್ಯಧಿಪತಿಗಳ ಮೇಲಿನ ಶೇ 4ರಷ್ಟು ತೆರಿಗೆಯಿಂದ ಪೋಷಣ್ 2.0 ಯೋಜನೆಗೆ ಹಣಕಾಸಿನ ನೆರವು ಒದಗಿಸಬಹುದು.




ಸುದ್ದಿ 2 ನಿಮಿಷ

ದಾಖಲೆ ಮಟ್ಟಕ್ಕೆ ಬಿಎಸ್‌ಇ ಕಂಪನಿಗಳ ಬಂಡವಾಳ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ದಾಖಲೆಯ ಮೊತ್ತವಾದ ₹ 280 ಲಕ್ಷ ಕೋಟಿಗೆ ಹೆಚ್ಚಳ ಆಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರ 85 ಅಂಶ ಏರಿಕೆ ಕಂಡು 61,308 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 52 ಅಂಶ ಏರಿಕೆ ಕಂಡಿತು.



'ಆಟೊಮೊಬೈಲ್ ಕಂಪನಿಗಳ ಷೇರುಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂತು. ಆಟೊಮೊಬೈಲ್ ಕಂಪನಿಗಳು ವಾಹನಗಳ ಬೆಲೆ ಹೆಚ್ಚಿಸಿದ್ದು, ವಿದ್ಯುತ್ ಚಾಲಿತ ವಾಹನಗಳಿಗೆ ಆದ್ಯತೆ ಸಿಗುತ್ತಿರುವುದು ಇದಕ್ಕೆ ಕಾರಣ. ಅಲ್ಲದೆ, ಆಟೊಮೊಬೈಲ್ ವಲಯಕ್ಕೆ ಸಂಬಂಧಿಸಿದಂತೆ ವಿನಿಮಯ ವಹಿವಾಟು ನಿಧಿ (ಇಟಿಎಫ್) ಆರಂಭವಾಗಿದ್ದು ಕೂಡ ಒಂದು ಕಾರಣ' ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆಯು ಶೇಕಡ 0.26ರಷ್ಟು ಇಳಿಕೆ ಆಗಿದ್ದು, ಪ್ರತಿ ಬ್ಯಾರೆಲ್‌ಗೆ 85.84 ಡಾಲರ್‌ಗೆ ತಲುಪಿದೆ.

ಪಾಲಿಸಿಕ್ಯೂ ವಹಿವಾಟು ಆರಂಭ

ಬೆಂಗಳೂರು: ಪಾಲಿಸಿಕ್ಯೂ ಕಂಪನಿಯು ದೇಶದಲ್ಲಿ ವಿವಿಧ ವಿಮಾ ಸೇವೆಗಳನ್ನು ಒದಗಿಸುವ ವಹಿವಾಟನ್ನು ಆರಂಭಿಸಿರುವುದಾಗಿ ತಿಳಿಸಿದೆ. ಕಂಪನಿಯು ತಾನು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (ಐಆರ್‌ಡಿಎಐ) ಅಗತ್ಯ ಪರವಾನಗಿ ಪಡೆದಿರುವುದಾಗಿ ಹೇಳಿದೆ.

ವಿಮಾ ಉತ್ಪನ್ನಗಳನ್ನು ಖರೀದಿಸಲು ಬಯಸುವವರು ಈ ಕಂಪನಿಯ ವೆಬ್‌ಸೈಟ್ (www.policicue.com) ಮೂಲಕ ತಮಗೆ ಅಗತ್ಯವಿರುವ ವಿಮೆಯನ್ನು ಪಡೆದುಕೊಳ್ಳಬಹುದು. ವಿಮಾ ಕ್ಲೇಮ್‌ಗಳ ಇತ್ಯರ್ಥಕ್ಕೆ ತನ್ನಲ್ಲಿ ಅನುಭವಿ ತಂಡ ಇದೆ ಎಂದು ಕಂಪನಿ ಹೇಳಿದೆ.

'ನಮ್ಮ ವಹಿವಾಟು ಆರಂಭಿಸುತ್ತಿರುವುದು ಸಂತಸ ತಂದಿದೆ. ವಿಮಾ ಉತ್ಪನ್ನಗಳನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ನಾವು ಬದಲಾವಣೆ ತರಲಿದ್ದೇವೆ ಎಂಬ ಭರವಸೆ ಇದೆ' ಎಂದು ಕಂಪನಿಯ ಸಿಇಒ ಸಂಜಯ್ ವತ್ಸ್ ತಿಳಿಸಿದ್ದಾರೆ.



ತಾಲೀಮು... ಮುಂಬರುವ ಗಣರಾಜ್ಯೋತ್ಸವಕ್ಕಾಗಿ ನವದೆಹಲಿಯಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಒಂಟೆ ಪಡೆ ಗುರುವಾರ ತಾಲೀಮು ನಡೆಸಿತು –ಪಿಟಿಐ ಚಿತ್ರ

ಪೆಟ್ರೋಲ್ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಜನವರಿ 1ರಿಂದ 15ರವರೆಗಿನ ಅವಧಿಯಲ್ಲಿ ಪೆಟ್ರೋಲ್, ಡೀಸೆಲ್ ಮಾರಾಟ ಇಳಿಕೆ ಆಗಿದೆ.

ಪೆಟ್ರೋಲ್ ಮಾರಾಟ 9.64 ಲಕ್ಷ ಟನ್ ಆಗಿದ್ದು ಡಿಸೆಂಬರ್‌ನ ಇದೇ ಅವಧಿಗೆ ಹೋಲಿಸಿದರೆ ಶೇ 13.81ರಷ್ಟು ಇಳಿಕೆ ಆಗಿದೆ. ಡೀಸೆಲ್ ಮಾರಾಟವು 24.7 ಲಕ್ಷ ಟನ್ ಆಗಿದ್ದು, ಡಿಸೆಂಬರ್‌ನ ಇದೇ ಅವಧಿಗೆ ಹೋಲಿಸಿದರೆ ಶೇ 14.1ರಷ್ಟು ಇಳಿಕೆ ಆಗಿದೆ ಎಂದು ತೈಲ ಮಾರಾಟ ಕಂಪನಿಗಳು ತಿಳಿಸಿವೆ.

ಐಐಟಿ ವಿದ್ಯಾರ್ಥಿ ಆತ್ಮಹತ್ಯೆ

ಮುಂಬೈ: ಬಾಂಬೆ ಐಐಟಿಯ ಸ್ನಾತಕೋತ್ತರ ವಿದ್ಯಾರ್ಥಿ ಸೋಮವಾರ ಮುಂಜಾನೆ ಪೊವಾಯಿಯ ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್‌ನ 7 ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ವಿದ್ಯಾರ್ಥಿಯನ್ನು ದರ್ಶನ್ ಮಾಳವೀಯ ಎಂದು ಗುರುತಿಸಲಾಗಿದೆ. ಆಕಸ್ಮಿಕ ಸಾವು ಪ್ರಕರಣ ದಾಖಲಾಗಿದೆ. ತನ್ನ ಸಾವಿಗೆ ಯಾರನ್ನೂ ಹೊಣೆ ಮಾಡಬಾರದು ಎಂದು ವಿದ್ಯಾರ್ಥಿಯು ಆತ್ಮಹತ್ಯಾ ಪತ್ರದಲ್ಲಿ ಬರೆದಿದ್ದಾನೆ. ಐಐಟಿಗೆ ಪ್ರವೇಶ ಪಡೆಯುವ ಮುನ್ನ ಖಿನ್ನತೆಯಿಂದ ಬಳಲುತ್ತಿದ್ದರು. ಇದಕ್ಕಾಗಿ ಚಿಕಿತ್ಸೆಯನ್ನೂ ಪಡೆಯುತ್ತಿದ್ದರು ಎಂದು ಪೊಲೀಸರ ಪ್ರಾಥಮಿಕ ವರದಿಗಳು ಹೇಳಿವೆ.

'ದೇಶದ 50 ನವೋದ್ಯಮಗಳಿಗಿದೆ ಯೂನಿಕಾರ್ನ್ ಆಗುವ ಸಾಮರ್ಥ್ಯ'

ಮುಂಬೈ (ಪಿಟಿಐ): ಭಾರತದಲ್ಲಿನ 50 ನವೋದ್ಯಮಗಳು 2022ರಲ್ಲಿ ಯೂನಿಕಾರ್ನ್ ಆಗುವ ಸಾಮರ್ಥ್ಯವನ್ನು ಹೊಂದಿವೆ ಎಂದು ಪಿಡಬ್ಲ್ಯುಸಿ ಇಂಡಿಯಾ ಸಂಸ್ಥೆಯು ಸೋಮವಾರ ತಿಳಿಸಿದೆ.

2022ರ ವರ್ಷಾಂತ್ಯದ ವೇಳೆಗೆ ಕನಿಷ್ಠ 100 ಯೂನಿಕಾರ್ನ್‌ಗಳು (₹ 7,500 ಕೋಟಿಗಿಂತ ಹೆಚ್ಚಿನ ಬಂಡವಾಳ ಮೌಲ್ಯ ಹೊಂದಿರುವ ನವೋದ್ಯಮ) ದೇಶದಲ್ಲಿ ಇರಲಿವೆ ಎಂದು ಹೇಳಿದೆ. 2021ರಲ್ಲಿ ಹೊಸದಾಗಿ 43 ನವೋದ್ಯಮಗಳು ಸೃಷ್ಟಿಯಾಗಿದ್ದು, ಯೂನಿಕಾರ್ನ್‌ಗಳ ಸಂಖ್ಯೆಯು 68ಕ್ಕೆ ತಲುಪಿದೆ.

ಅಕ್ಟೋಬರ್-ಡಿಸೆಂಬರ್ ತ್ರೈಮಾಸಿಕದಲ್ಲಿಯೇ ದೇಶದ ನವೋದ್ಯಮಗಳಲ್ಲಿ ₹ 74 ಸಾವಿರ ಕೋಟಿ ಹೂಡಿಕೆ ಆಗಿದೆ ಎಂದು ತನ್ನ ವರದಿಯಲ್ಲಿ ತಿಳಿಸಿದೆ.

ಮಾರುಕಟ್ಟೆ ಪರಿಸ್ಥಿತಿಯು ನವೋದ್ಯಮಗಳಿಗೆ ಪೂರಕವಾಗಿದೆ. ಹೀಗಾಗಿ 2022ರ ಅಂತ್ಯದೊಳಗೆ ಯೂನಿಕಾರ್ನ್‌ಗಳ ಸಂಖ್ಯೆಯು 100ನ್ನು ದಾಟಲಿದೆ ಎಂದು ಸಂಸ್ಥೆಯ ನವೋದ್ಯಮಗಳ ಪಾಲುದಾರ ಅಮಿತ್ ನೌಕಾ ಹೇಳಿದ್ದಾರೆ.

ಸೆಲೆರಿಯೊ ಎಸ್–ಸಿಎನ್‌ಜಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ಸೆಲೆರಿಯೊ ಕಾರಿನ ಸಿಎನ್‌ಜಿ ಆವೃತ್ತಿಯನ್ನು ದೇಶದ ಮಾರುಕಟ್ಟೆಗೆ ಸೋಮವಾರ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 6.58 ಲಕ್ಷ ಇದೆ.

ಇದು ಮುಂದಿನ ಪೀಳಿಗೆಯ ಕೆ-ಸರಣಿಯ 1 ಲೀಟರ್ ಎಂಜಿನ್ ಹೊಂದಿದೆ. ಎಸ್-ಸಿಎನ್‌ಜಿ ತಂತ್ರಜ್ಞಾನದೊಂದಿಗೆ ಹೊಸ ಸೆಲೆರಿಯೊ ಸಿಎನ್‌ಜಿಯ ಪ್ರತಿ ಕೆ.ಜಿ.ಗೆ 35.60 ಕಿಲೋ ಮೀಟರ್ ಮೈಲೇಜ್ ನೀಡಲಿದೆ. ಸಿಎನ್‌ಜಿ ಟ್ಯಾಂಕ್ ಸಾಮರ್ಥ್ಯವು 60 ಲೀಟರ್ ಇದೆ ಎಂದು ಕಂಪನಿಯು ತಿಳಿಸಿದೆ. ಹೊಸ ಸೆಲೆರಿಯೊ ಎಸ್-ಸಿಎನ್‌ಜಿಯ ಇಂಧನ ಸಾಮರ್ಥ್ಯದ ಬಗ್ಗೆ ಗ್ರಾಹಕರು ಮೆಚ್ಚುಗೆ ವ್ಯಕ್ತಪಡಿಸುವ ವಿಶ್ವಾಸವಿದೆ ಎಂದು ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	45229-45689
ಬೆಟ್ಟೆ	37219-37699
ಕೆಂಪುಗೋಟು	31600-32000
ರಾಶಿ	44739-45169
ಕುಮಟ	
ಚಿಪ್ಪು	24689-34089
ಕೋಕ	19509-26899
ಫ್ಯಾಕ್ಟರಿ	10569-17969
ಹೊಸಚಾಲಿ	36289-41009
ಹಳೆಚಾಲಿ	47809-50179
ಸಿದ್ದಾಪುರ	
ಬಿಳಿಗೋಟು	24699-33609
ಚಾಲಿ	47899-48399
ಕೋಕ	24299-34618
ಹೊಸಚಾಲಿ	32699-39699
ಕೆಂಪುಗೋಟು	28989-34899
ರಾಶಿ	42009-46699
ತಟ್ಟಿಬೆಟ್ಟೆ	36899-44109
ಶಿರಸಿ	
ಬೆಟ್ಟೆ	31796-46341
ಬಿಳಿಗೋಟು	22299-42699
ಚಾಲಿ	31119-49242
ರಾಶಿ	38699-47615
ಯಲ್ಲಾಪುರ	
ಬಿಳಿಗೋಟು	25699-33499
ಚಾಲಿ	36899-48897
ಕೋಕ	22699-32199
ಕೆಂಪುಗೋಟು	28968-36099
ರಾಶಿ	44899-49849
ತಟ್ಟಿಬೆಟ್ಟೆ	37919-44400
ರಾಮನಗರ ರೇಷ್ಮೆ	
ಮಿಶ್ರತಳಿ	335-630
ದ್ವಿತಳಿ	236-805

ಮೂಡಿಗೆರೆ ಕಾಫಿ (50ಕೆ.ಜಿಗೆ	ಮುದ್ರೆಮನೆ
ಎಪಿ	₹15600
ಎಸಿ	₹7195
ಆರ್‌ಪಿ	₹6750
ಆರ್‌ಸಿ	₹3795

ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರದ ಹೇಳಿಕೆ

ಒತ್ತಾಯದಿಂದ ಲಸಿಕೆ ನೀಡುವುದಿಲ್ಲ

ನವದೆಹಲಿ: ದೇಶದಲ್ಲಿ ಒತ್ತಾಯದಿಂದ ಯಾರಿಗೂ ಲಸಿಕೆ ನೀಡುವುದಿಲ್ಲ. ಅಂತಹ ಯಾವುದೇ ಸೂಚನೆಯನ್ನು ಕೇಂದ್ರ ಸರ್ಕಾರ ಅಥವಾ ಆರೋಗ್ಯ ಸಚಿವಾಲಯ ಹೊರಡಿಸಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಹೇಳಿಕೆ ನೀಡಿದೆ.

ಲಸಿಕೆ ಪಡೆಯುವುದನ್ನು ಕಡ್ಡಾಯ ಮಾಡಲಾಗುತ್ತಿದೆ ಮತ್ತು ಮನೆ ಮನೆಗೆ ತೆರಳಿ ಲಸಿಕೆ ನೀಡಲಾಗುತ್ತಿದೆ ಎಂದು ಇವಾರ ಫೌಂಡೇಶನ್ ಎಂಬ ಎನ್‌ಜಿಒ ಒಂದು ಸಲ್ಲಿಸಿದ್ದ ಅರ್ಜಿಗೆ ಕೇಂದ್ರ ಸರ್ಕಾರ ಈ ಉತ್ತರ ನೀಡಿದೆ.

ಲಸಿಕೆ ನೀಡುವುದು ಮತ್ತು ಲಸಿಕೆ ಪಡೆದ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸುವ ಕ್ರಮವನ್ನು ಎಲ್ಲಿಯೂ ಜಾರಿಗೆ ತಂದಿಲ್ಲ.

ಜನರ ಹಿತಾಸಕ್ತಿಯಿಂದ ಮತ್ತು ಕೊರೊನಾ ಸೋಂಕು ಎಲ್ಲೆಡೆ ಹರಡುವುದನ್ನು ತಪ್ಪಿಸಲು ಲಸಿಕೆ ಪಡೆಯುವುದು ಮತ್ತು ಲಸಿಕೆ ಪ್ರಮಾಣಪತ್ರ ಹೊಂದಿರುವುದನ್ನು ಆರೋಗ್ಯ ಸಚಿವಾಲಯ ಅಭಿಯಾನ ಕೈಗೊಂಡಿದೆ. ಆದರೆ ಒತ್ತಾಯದಿಂದ ಯಾರ ಮೇಲೂ ಅದನ್ನೂ ಹೇರಿಲ್ಲ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದೆ.

ಎಲ್ಲರೂ ಲಸಿಕೆ ಪಡೆದು ಕೋವಿಡ್ ಸೋಂಕಿನ ವಿರುದ್ಧ ಹೋರಾಡುವಂತೆ ಸೂಚಿಸಲಾಗಿದೆ. ಆದರೆ ಯಾರಿಗೂ ಅವರ ಇಚ್ಛೆಗೆ ವಿರುದ್ಧವಾಗಿ ಲಸಿಕೆ ನೀಡಿಲ್ಲ ಎಂದು ಕೇಂದ್ರ ಸ್ಪಷ್ಟಪಡಿಸಿದೆ.

ಶವಸಂಸ್ಕಾರ ಅಗತ್ಯ: ಕೋವಿಡ್ ಸೋಂಕಿತ ರೋಗಿಗಳ ಮೃತ ದೇಹಗಳನ್ನು ಹೂಳದೆ ಅಥವಾ ಶವಸಂಸ್ಕಾರ ಮಾಡದೆ ತೆರೆದಿಡುವುದು ಸೂಕ್ತ ಮಾರ್ಗವಲ್ಲ ಎಂದು ಕೂಡ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಿದೆ.

ಕೋವಿಡ್ ರೋಗಿಗಳ ಮೃತ ದೇಹಗಳ ಸೂಕ್ತ ನಿರ್ವಹಣೆ ಸಾರ್ವಜನಿಕ ಆರೋಗ್ಯದ ದೃಷ್ಟಿಕೋನದಿಂದ ನಿರ್ಣಾಯಕವಾಗಿದೆ ಎಂದು ಸರ್ಕಾರವು ಸಮರ್ಥಿಸಿಕೊಂಡಿದೆ.

ಕೋವಿಡ್‌ನಿಂದ ಸಾವನ್ನಪ್ಪಿದ ಪಾರ್ಸಿ ಸಮುದಾಯದ ಸದಸ್ಯರಿಗೆ ಸಾಂಪ್ರದಾಯಿಕ ಸಮಾಧಿ ಮಾಡುವ ಸಂಬಂಧ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಮನವಿ ಅರ್ಜಿಯೊಂದಕ್ಕೆ ಕೇಂದ್ರ ಅಫಿಡವಿಟ್ ಸಲ್ಲಿಸಿದೆ.

'ಕೋವಿಡ್ ಸೋಂಕಿತ ರೋಗಿಗಳ ಮೃತದೇಹಗಳನ್ನು ಸರಿಯಾಗಿ ಅಂತ್ಯ ಸಂಸ್ಕಾರ ಮಾಡದೆ ತೆರೆದಿಡುವುದರಿಂದ ಸೋಂಕು ವಾತಾವರಣ ಮತ್ತು ಪ್ರಾಣಿಗಳಿಗೆ ಹರಡುವ ಸಾಧ್ಯತೆ ಇದೆ. ಕೊರೊನಾ ಸೋಂಕಿಗೆ ಒಳಗಾಗಿರುವ ಶಂಕಿತ ಅಥವಾ ದೃಢಪಟ್ಟಿರುವ ಜನರು ವನ್ಯಜೀವಿ ಸೇರಿದಂತೆ ಪ್ರಾಣಿಗಳೊಂದಿಗೆ ನೇರ ಸಂಪರ್ಕವನ್ನು ಕಡಿಮೆ ಮಾಡಬೇಕು ಎಂದು ವಿಶ್ವಸಂಸ್ಥೆಯ ಪ್ರಾಣಿ ಆರೋಗ್ಯ ಘಟಕವು (ಒಐಇ) ಸಹ ಹೇಳಿದೆ' ಎಂದು ಕೇಂದ್ರ ಸರ್ಕಾರ ಅಫಿಡವಿಟ್‌ನಲ್ಲಿ ಹೇಳಿದೆ.



ಹರಿಯಾಣದ ಗುರುಗ್ರಾಮದಲ್ಲಿ ಸೋಮವಾರ ಯುವತಿಯೊಬ್ಬರಿಗೆ ಆರೋಗ್ಯ ಕಾರ್ಯಕರ್ತೆ ಕೋವಿಡ್ ಲಸಿಕೆ ಹಾಕಿದರು –ಪಿಟಿಐ ಚಿತ್ರ

ನಿರ್ದೇಶನ ನೀಡುವಂತೆ ಅರ್ಜಿ

ನವದೆಹಲಿ (ಪಿಟಿಐ): 12 ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೋವಿಡ್ ಲಸಿಕೆ ನೀಡಲು ಮಾರ್ಗದರ್ಶಿ ಸೂತ್ರಗಳ ವಿವರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ದೆಹಲಿ ಹೈಕೋರ್ಟ್‌ಗೆ ಸೋಮವಾರ ಮನವಿಯೊಂದು ಸಲ್ಲಿಕೆಯಾಗಿದೆ. ಈ ಅರ್ಜಿಯನ್ನು ಮಾರ್ಚ್ 22 ರಂದು ಆಲಿಸುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ಎನ್.ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರ ಪೀಠ ಹೇಳಿದೆ.

12 ವರ್ಷದ ಒಬ್ಬ ಬಾಲಕಿ ಮತ್ತು ಮತ್ತೊಬ್ಬರು ಈ ಅರ್ಜಿ ಸಲ್ಲಿಸಿದ್ದಾರೆ. ಪ್ರಸ್ತುತ 15-17 ವರ್ಷ ವಯಸ್ಸಿನ ಮಕ್ಕಳಿಗೆ ಮಾತ್ರ ಲಸಿಕೆ ನೀಡಲಾಗುತ್ತಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಅರ್ಜಿದಾರರ ಪರ ವಕೀಲ ಕೈಲಾಶ್ ವಾಸುದೇವ್ ಹೇಳಿದರು. 12 ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಲಸಿಕೆ ನೀಡುವ ಕುರಿತು ಕೇಂದ್ರ ಸರ್ಕಾರ ಯಾವುದೇ ಮಾರ್ಗಸೂಚಿಗಳನ್ನು ನೀಡಿಲ್ಲ. ಆದ್ದರಿಂದ ನ್ಯಾಯಾಲಯ ಈ ಕುರಿತು ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ವಕೀಲ ಕೈಲಾಶ್ ಹೈಕೋರ್ಟ್‌ಗೆ ತಿಳಿಸಿದರು.

ಕೋವಿಡ್‌ನಿಂದ ರಕ್ಷಿಸುವ ವಂಶವಾಹಿ ತಳಿ ಗುರುತಿಸಿದ ಸಂಶೋಧಕರು


ಲಂಡನ್ (ಪಿಟಿಐ): ಕೋವಿಡ್‌ನ ತೀವ್ರ ಸ್ವರೂಪದ ಸೋಂಕಿನಿಂದ ರಕ್ಷಿಸುವ ನಿರ್ದಿಷ್ಟ ಅನುವಂಶಿಕ ತಳಿಯೊಂದನ್ನು ಸಂಶೋಧಕರು ಗುರುತಿಸಿದ್ದಾರೆ.

ಸ್ವೀಡನ್‌ನಲ್ಲಿರುವ ಕರೊಲಿನ್‌ಸ್ಕಾ ಇನ್‌ಸ್ಟಿಟ್ಯೂಟ್‌ನ ಅಂತರರಾಷ್ಟ್ರೀಯ ಸಂಶೋಧಕರ ತಂಡ ವಿವಿಧ ವಂಶಾವಳಿಗಳನ್ನು ಅಧ್ಯಯನ ನಡೆಸಿದ ಬಳಿಕ ಈ ನಿರ್ದಿಷ್ಟ ಅನುವಂಶಿಕ ತಳಿಯನ್ನು ಗುರುತಿಸಿದೆ. 'ನೇಚರ್ ಜಿನೆಟಿಕ್ಸ್' ನಿಯತಕಾಲಿಕದಲ್ಲಿ ಇದನ್ನು ಪ್ರಕಟಿಸಲಾಗಿದೆ.

ಕೋವಿಡ್‌ನಿಂದ ನಾವು ತೀವ್ರವಾಗಿ ತೊಂದರೆಗೆ ಒಳಗಾಗಿದ್ದೇವೆಯೇ ಅಥವಾ ಸೌಮ್ಯ ಸ್ವರೂಪದ ರೋಗ ಲಕ್ಷಣದೊಂದಿಗೆ ಕೋವಿಡ್‌ನಿಂದ ಪಾರಾಗಿದ್ದೇವೆಯೇ ಎಂಬುದರ ಮೇಲೆ ವಂಶವಾಹಿ ತಳಿ ಪ್ರಭಾವ ಬೀರಿರುತ್ತದೆ. ಯುರೋಪ್‌ನ ವಂಶಾವಳಿಯೊಂದಿಗೆ ನಿರ್ದಿಷ್ಟ ಡಿಎನ್‌ಎ ಹೊಂದಿದ್ದ ಜನರು ಕೋವಿಡ್ ಸೋಂಕಿಗೆ ಒಳಗಾಗುವ ಅಪಾಯ ಶೇ 20ರಷ್ಟು ಕಡಿಮೆ ಇರುವುದು ಈ ಹಿಂದಿನ ಅಧ್ಯಯನದಿಂದ ಗೊತ್ತಾಗಿತ್ತು ಎಂದು ತಿಳಿಸಲಾಗಿದೆ.

ಕಥಕ್ ತಕಧಿಮಿತ; ಬಿರ್ಜು ಸಾಧನೆ ಅಪರಿಮಿತ

• ಉಮಾ ಅನಂತ್



ಮಕ್ಕಳೊಂದಿಗೆ ಪಂಡಿತ್ ಬಿರ್ಜು –ಸಂಗ್ರಹ ಚಿತ್ರ

ನುಡಿ ನಮನ

ಬೆಂಗಳೂರು: ನೃತ್ತ, ನೃತ್ಯಗಳನ್ನೊಳಗೊಂಡ, ವಿಶಿಷ್ಟ ಬೋಲ್‌ಗಳ ಮೇಲೆ ಆಧರಿತವಾದ ಆಕರ್ಷಕ ನೃತ್ಯ ಪ್ರಕಾರ ಕಥಕ್. ಈ ನೃತ್ಯದಲ್ಲಿ ವಿಶ್ವವಿಖ್ಯಾತರಾದ ಪಂಡಿತ್ ಬಿರ್ಜು ಮಹಾರಾಜ್ ಅವರು ಹಿಂದೂಸ್ತಾನಿ ಗಾಯನ, ತಬಲಾ ಹಾಗೂ ಡ್ರಮ್ಸ್ ನುಡಿಸಾಣಿಕೆಯಲ್ಲೂ ಅಸಾಧಾರಣ ಸಾಧನೆ ಮಾಡಿದವರು.

ಬ್ರಿಜ್ ಮೋಹನ್‌ದಾಸ್ ಎಂಬುದು ಇವರ ಮೂಲನಾಮ. ಮುಂದೆ ಬಿರ್ಜು ಮಹಾರಾಜ್ ಎಂದೇ ಖ್ಯಾತರಾದವರು. ಉತ್ತರ ಪ್ರದೇಶದ ಹಂಡಿಯಾದಲ್ಲಿ 1937, ಫೆಬ್ರುವರಿ 4ರಂದು ಜನಿಸಿದ ಇವರ ಮನೆತನವೇ ಕಥಕ್ ಹಾಗೂ ಸಂಗೀತದ್ದು. ತಂದೆ ಜಗನ್ನಾಥ (ಅಚ್ಚನ್) ಮಹಾರಾಜ್ ಅವರಿಂದ 13ನೆ ವಯಸ್ಸಿಗೇ ನೃತ್ಯ ಕಲಿಯಲಾರಂಭಿಸಿದ, ಬಿರ್ಜು ಮಹಾರಾಜ್, ಬಹಳ ಬೇಗ ಕಥಕ್ ಕಲೆಯನ್ನು ಕರಗತ ಮಾಡಿಕೊಂಡರು. ಜೊತೆಗೆ ಗಾಯನ, ಅದರಲ್ಲೂ ಠುಮ್ರಿ, ದಾದ್ರಾ, ಭಜನ್ ಮತ್ತು ಗಜಲ್‌ಗಳನ್ನು ಬಹಳ ಸುಂದರವಾಗಿ ಪ್ರಸ್ತುತಪಡಿಸುತ್ತಿದ್ದರು. ಲಖನೌ ಘರಾಣದಲ್ಲಿ ಹೆಸರುವಾಸಿಯಾದ, ಬಿರ್ಜು ಮಹಾರಾಜ್ ಮುಂದೆ ಲಖನೌ ಕಲ್ಕಾ-ಬಿಂದಾದಿನ್ ಘರಾಣೆ ಎಂಬ ಹೊಸ ಶೈಲಿಯ ಗಾಯನದ ಪ್ರತಿಪಾದಕರೂ ಆಗಿದ್ದರು.

ದೆಹಲಿಯ ಭಾರತೀಯ ಕಲಾ ಕೇಂದ್ರ ಹಾಗೂ ಕಥಕ್ ಸಂಸ್ಥೆಯಲ್ಲಿ ನೃತ್ಯ ಗುರುಗಳಾಗಿದ್ದರು. ನೃತ್ಯ ನಿರ್ದೇಶನದಲ್ಲಿಯೂ ಅಪಾರ ಜನಮನ್ನಣೆ ಗಳಿಸಿ, ನೃತ್ಯ ಕಲಾಶ್ರಮ ಕಟ್ಟಿದರು. ನೃತ್ಯ ಕಮ್ಮಟ, ಕಾರ್ಯಾಗಾರಗಳನ್ನೂ ನಡೆಸಿದ್ದಲ್ಲದೆ ದೇಶ ವಿದೇಶಗಳಲ್ಲಿ ಸಾವಿರಾರು ಕಥಕ್ ನೃತ್ಯ ಪ್ರದರ್ಶನ ನೀಡಿ ಜಗದ್ವಿಖ್ಯಾತರಾದರು. ಕಥಕ್‌ನ 'ಚಕ್ಕರ್ಸ್'ಗಳಲ್ಲಿ ಚಮತ್ಕಾರವನ್ನೇ ಸೃಷ್ಟಿಸುತ್ತಿದ್ದ ಬಿರ್ಜು ಮಹಾರಾಜ್, ಕಥಕ್ ನೃತ್ಯ-ನಾಟಕಗಳನ್ನು ನವೀನ ಶೈಲಿಯಲ್ಲಿ ಸಂಯೋಜಿಸುವುದರ ಮೂಲಕ ಕಥಕ್ ನೃತ್ಯಕಲೆ ಮತ್ತು ಶೈಲಿಯನ್ನು ಇನ್ನಷ್ಟು ಉತ್ತುಂಗಕ್ಕೆ ಕೊಂಡೊಯ್ದವರು.

ಬಾಲಿವುಡ್‌ನಲ್ಲೂ...

ಹಿಂದಿ ಸಿನಿಮಾಗಳಿಗೆ ನೃತ್ಯ ಸಂಯೋಜನೆ ಮಾಡಿ, ಹಿನ್ನೆಲೆ ಸಂಗೀತದಲ್ಲೂ ತೊಡಗಿಸಿಕೊಂಡಿದ್ದ, ಈ ಬಹುಶ್ರುತ ವಿದ್ವಾಂಸರು, ಖ್ಯಾತ ನಿರ್ದೇಶಕ ಸತ್ಯಜಿತ್ ರಾಯ್ ಅವರ 'ಶತರಂಜ್ ಕೆ ಖಿಲಾಡಿ' ಸಿನಿಮಾ (1977) ದ ಎರಡು ನೃತ್ಯಗಳನ್ನು ಸಂಯೋಜಿಸಿದವರು. ಇದೇ ಸಿನಿಮಾಕ್ಕೆ ಕಂಠದಾನವನ್ನೂ ಮಾಡಿದರು. 2002ರಲ್ಲಿ ಶಾರುಕ್‌ಖಾನ್ ಅಭಿನಯದ ದೇವದಾಸ್ ಸಿನಿಮಾಕ್ಕೂ ನೃತ್ಯ ಸಂಯೋಜನೆ ಮಾಡಿದರು.

'ಕಥಕ್ ನೃತ್ಯ ಮಾಡುವಾಗ ಯಾವುದೇ ಸನ್ನಿವೇಶ ಇರಲಿ, ಕಂಪೊಸಿಷನ್ ಇರಲಿ, ಅದಕ್ಕೆ ಜೀವ ತುಂಬು, ಮನಸ್ಸು ನೃತ್ಯದಲ್ಲೇ ಕೇಂದ್ರೀಕೃತವಾಗಿರಲಿ, ಆಗ ಅಭಿನಯ, ಭಾವನೆ ಅತ್ಯಂತ ನೈಜವಾಗಿ ಹೊರ ಹೊಮ್ಮುತ್ತದೆ' ಎಂದು ಕಥಕ್ ಕಲಿಸುವಾಗ ಹೇಳುತ್ತಿದ್ದರು. ಇದೇ ನನ್ನ ಕಥಕ್ ನೃತ್ಯ ಸಾಧನೆಗೆ ಸ್ಫೂರ್ತಿಯಾಯಿತು' ಎಂದು ಹೇಳುತ್ತಾರೆ, ಬಿರ್ಜು ಮಹಾರಾಜ್ ಅವರ ಹಿರಿಯ ಶಿಷ್ಯೆ ಬೆಂಗಳೂರಿನ ವಿದುಷಿ ಸಿಮ್ರನ್ ಗೋದ್ವಾನಿ.

ಕೇಂದ್ರ ಸಂಗೀತ, ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪದ್ಮವಿಭೂಷಣ ಗೌರವಗಳಿಗೆ ಭಾಜನರಾಗಿದ್ದಾರೆ.



ಜಲ್ಲಿಕಟ್ಟು ಸ್ಪರ್ಧೆ

ತಮಿಳುನಾಡಿನ ಮದುರೈನಲ್ಲಿ ಸೋಮವಾರ 'ಅಲಂಗನಲ್ಲೂರ್ ಜಲ್ಲಿಕಟ್ಟು' ಸ್ಪರ್ಧೆಯಲ್ಲಿ ಹೋರಿಯನ್ನು ಮಣಿಸಲು ಯತ್ನಿಸಿದ ಯುವಕರು ಪಿಟಿಐ ಚಿತ್ರ

ವಕೀಲರ ಮೊಬೈಲ್ ಬಳಕೆಯಿಂದ ವಿಚಾರಣೆಗೆ ಅಡ್ಡಿ: ಸಿಜೆಐ ಅಸಮಾಧಾನ

ನವದೆಹಲಿ (ಪಿಟಿಐ): ವರ್ಚುವಲ್ ಮೂಲಕ ನಡೆಯುವ ವಿಚಾರಣೆ ವೇಳೆಯಲ್ಲಿ ಹಲವು ವಕೀಲರ ಮೊಬೈಲ್ ಫೋನ್ ಬಳಕೆಯಿಂದ ಪದೇ ಪದೇ ಅಡಚಣೆಯಾಗುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರನ್ನೊಳಗೊಂಡ ಪೀಠವೊಂದು ಸೋಮವಾರ ಅಸಮಾಧಾನ ವ್ಯಕ್ತಪಡಿಸಿದೆ.

ಇದು ಮುಂದುವರಿದರೆ ಮೊಬೈಲ್ ಫೋನ್ ಮೂಲಕ ವರ್ಚುವಲ್ ಮೂಲಕ ನಡೆಸುವ ವಿಚಾರಣೆಯಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗುವುದು ಎಂದೂ ಎಚ್ಚರಿಕೆ ನೀಡಿದೆ.

ವಕೀಲರ ಮೊಬೈಲ್‌ನ ಧ್ವನಿ ಅಥವಾ ದೃಶ್ಯ ಅಥವಾ ಎರಡೂ ಸಂಬಂಧಿತ ಸಮಸ್ಯೆಗಳಿಂದ ಸೋಮವಾರ ಪಟ್ಟಿ ಮಾಡಲಾದ ಸುಮಾರು 10 ಪ್ರಕರಣಗಳ ವಿಚಾರಣೆ ಮುಂದೂಡಬೇಕಾಯಿತು ಎಂಬ ಅಂಶದ ಬಗ್ಗೆ ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರು ಇದ್ದ ಪೀಠ ಅತೃಪ್ತಿ ವ್ಯಕ್ತಪಡಿಸಿತು.

'ಮೊಬೈಲ್ ಮೂಲಕ ವಿಚಾರಣೆಗೆ ಹಾಜರಾಗುವ ವಕೀಲರು ಪದೇ ಪದೇ ಮೊಬೈಲ್ ಬಳಸುವುದರಿಂದ ಸರಿಯಾಗಿ ಕಾಣಿಸುವುದಿಲ್ಲ. ಇದು ಮುಂದುವರಿದರೆ ಮೊಬೈಲ್ ಬಳಕೆ ನಿಷೇಧಿಸುತ್ತೇವೆ. ವಕೀಲರೇ, ನೀವು ಸುಪ್ರೀಂಕೋರ್ಟ್‌ನಲ್ಲಿ ಹಲವು ವರ್ಷಗಳಿಂದ ವಾದಿಸುತ್ತಿದ್ದೀರಿ. ವಿಚಾರಣೆ ವೇಳೆ ನಿಮಗೆ ಒಂದು ಕಂಪ್ಯೂಟರ್ ಬಳಸಲು ಆಗುವುದಿಲ್ಲವೇ' ಎಂದು ಪೀಠ ಪ್ರಕರಣವೊಂದರಲ್ಲಿ ಸೂಚಿಸಿದೆ.

ಮತ್ತೊಂದು ಪ್ರಕರಣದ ವರ್ಚುವಲ್ ವಿಚಾರಣೆ ವೇಳೆ ಅಂತರ್ಜಾಲ ಸಂಪರ್ಕ ಕಡಿತದಿಂದ ಉಂಟಾದ ಅಡಚಣೆಗೆ ಪೀಠ ಬೇಸರ ವ್ಯಕ್ತಪಡಿಸಿತು. ಕೋವಿಡ್ ಹಿನ್ನೆಲೆ 2020ರ ಮಾರ್ಚ್‌ನಿಂದ ಸುಪ್ರೀಂಕೋರ್ಟ್ ವರ್ಚುವಲ್ ವಿಚಾರಣೆ ನಡೆಸುತ್ತಿದೆ.

ಉತ್ತರ ಕೊರಿಯಾ – ಚೀನಾ ರೈಲು ಸರಕು ಸಾಗಣೆ ಪುನರಾರಂಭ

ಬೀಜಿಂಗ್ (ಎಪಿ): ಕೋವಿಡ್ ಕಾರಣಕ್ಕೆ ಸ್ಥಗಿತಗೊಂಡಿದ್ದ ಉತ್ತರ ಕೊರಿಯಾ ಜತೆಗಿನ ರೈಲು ಸರಕು ಸಾಗಣೆ ಸಂಬಂಧವನ್ನು ಚೀನಾ ಸೋಮವಾರದಿಂದ ಪುನರಾರಂಭಿಸಲಾಗಿದೆ. ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಝಾವೊ ಲಿಜಿಯಾನ್ ಈ ವಿಷಯ ತಿಳಿಸಿದ್ದು, ಇನ್ನಷ್ಟು ಮಾಹಿತಿ ನೀಡಲು ನಿರಾಕರಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಚೀನಾ ಜನಸಂಖ್ಯೆ ವರ್ಷದಲ್ಲಿ ಕೇವಲ 4.80 ಲಕ್ಷ ಹೆಚ್ಚಳ!

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಜನಸಂಖ್ಯೆ 2021ರಲ್ಲಿ ಕೇವಲ 4.80 ಲಕ್ಷದಷ್ಟು ಹೆಚ್ಚಳವಾಗಿದ್ದು, ಒಟ್ಟಾರೆ ಜನಸಂಖ್ಯೆಯ ಪ್ರಮಾಣ 141.26 ಕೋಟಿಯಷ್ಟಿದೆ. ಸತತ ಐದನೇ ವರ್ಷ ಜನನ ಪ್ರಮಾಣ ಭಾರಿ ಕುಸಿತ ಕಂಡಿದ್ದು, ಇದರ ಪರಿಣಾಮವಾಗಿ ಆರ್ಥಿಕ ಬೆಳವಣಿಗೆ ಕುಂಠಿತವಾಗುವ ಆತಂಕ ಎದುರಾಗಿದೆ.

2020ರ ಕೊನೆಯಲ್ಲಿ ಚೀನಾದ ಜನಸಂಖ್ಯೆ 141.20 ಕೋಟಿಯಷ್ಟಿತ್ತು. 2021ರ ಡಿಸೆಂಬರ್ ಅಂತ್ಯಕ್ಕೆ ಆ ಸಂಖ್ಯೆ 141.26 ಕೋಟಿ ಆಗಿದೆ. ವರ್ಷದಲ್ಲಿ ಜನಸಂಖ್ಯೆಯಲ್ಲಿ ಆಗಿರುವ ಹೆಚ್ಚಳ ಕೇವಲ 4.80 ಲಕ್ಷ ಎಂದು ರಾಷ್ಟ್ರೀಯ ಅಂಕಿಅಂಶ ಬ್ಯೂರೊ (ಎನ್‌ಬಿಎಸ್) ತಿಳಿಸಿದೆ.

2021ರಲ್ಲಿ ಆಗಿರುವ ಜನನ ಪ್ರಮಾಣ 1.06 ಕೋಟಿ. 2020ರಲ್ಲಿ ಅದು 1.20 ಕೋಟಿಯಾಗಿತ್ತು ಎಂದು ಹಾಂಕಾಂಗ್ ಮೂಲದ 'ಸೌತ್ ಚೀನಾ ಮಾರ್ನಿಂಗ್ ಪೋಸ್ಟ್' ವರದಿ ಮಾಡಿದೆ.

ಆರ್ಥಿಕತೆಗೆ ಹೊರೆ: ಜನನ ಪ್ರಮಾಣ ಕಡಿಮೆಯಾದಂತೆ ಆರ್ಥಿಕತೆಗೆ ಹೊರೆ ಬೀಳುತ್ತದೆ. ದುಡಿಯುವ ವರ್ಗ ಮತ್ತು ಅವಲಂಬಿತರ ವ್ಯಕ್ತಿಗಳ ನಡುವಿನ ಅನುಪಾತದಲ್ಲಿ ಹೆಚ್ಚಳವಾಗಿ ಆರ್ಥಿಕತೆಗೆ ದೊಡ್ಡ ಹೊಡೆತ ಉಂಟಾಗುತ್ತದೆ. ದೇಶದಲ್ಲಿ ಸದ್ಯ 60 ವರ್ಷ ಮೇಲ್ಪಟ್ಟವರ ಸಂಖ್ಯೆ 26.4 ಕೋಟಿಗೆ ತಲುಪಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಇದು ಶೇ 18.7ರಷ್ಟು ಅಧಿಕವಾಗಿದೆ.

ಕೇರಳ: ಸರ್ಕಾರಕ್ಕೆ ₹52 ಕೋಟಿಯ ನೆರವು ಕೋರಿಕೆ

ಅನಂತಪದ್ಮನಾಭ ಸ್ವಾಮಿ ದೇಗುಲಕ್ಕೆ ಆರ್ಥಿಕ ಸಂಕಷ್ಟ?

ಪ್ರಜಾವಾಣಿ ವಾರ್ತೆ

ತಿರುವನಂತಪುರ: ದೇವಸ್ಥಾನದ ಕೋಣೆಗಳಲ್ಲಿ ಒಂದು ಲಕ್ಷ ಕೋಟಿ ಮೌಲ್ಯದ ಹೇರಳ ಸಂಪತ್ತನ್ನು ಹೊಂದಿದ್ದ ಕೇರಳದ ಶ್ರೀ ಅನಂತಪದ್ಮನಾಭ ಸ್ವಾಮಿ ದೇಗುಲವು ಶ್ರೀಮಂತ ದೇವಾಲಯಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಆದರೆ ದೇವಸ್ಥಾನವು ಈಚೆಗೆ ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿರುವುದಾಗಿ ಹೇಳಿದ್ದು ರಾಜ್ಯ ಸರ್ಕಾರದಿಂದ ಹಣಕಾಸಿನ ನೆರವು ಕೋರಿದೆ.

ದೇವಸ್ಥಾನದ ಆಡಳಿತವು ರಾಜ್ಯ ಸರ್ಕಾರಕ್ಕೆ ₹52 ಕೋಟಿಯ ನೆರವು ಕೋರಿವೆ. ಆದರೆ ಸರ್ಕಾರವು ಇದುವರೆಗೆ ಕೇವಲ ಸಾಲದ ರೂಪದಲ್ಲಿ ₹ 2 ಕೋಟಿ ನೀಡಿದೆ. ಹೆಚ್ಚಿನ ನೆರವಿಗಾಗಿ ವಿವಿಧ ಹಿಂದೂ ಸಂಘಟನೆಗಳು ಕೇರಳ ಸರ್ಕಾರವನ್ನು ಒತ್ತಾಯಿಸಲು ಪ್ರಯತ್ನಿಸುತ್ತಿವೆ.

ಸರ್ಕಾರವು ಈಗಾಗಲೇ ಮೊತ್ತವನ್ನು ಜಮಾ ಮಾಡಿದೆ. ಈಗ ಈ ವಿಷಯದ ಬಗ್ಗೆ ಮುಂದಿನ ನಿರ್ಧಾರಗಳನ್ನು ದೇವಾಲಯದ ಟ್ರಸ್ಟ್ ತೆಗೆದುಕೊಳ್ಳುತ್ತದೆ ಎಂದು ದೇವಾಲಯದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕೋವಿಡ್‌ನಿಂದ ಅನಂತಪದ್ಮನಾಭ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆ ಕಡಿಮೆಯಾಗಿದೆ. ಇದರಿಂದ ಆರ್ಥಿಕ ಸಂಕಷ್ಟ ಉಂಟಾಗಿದೆ. ಸುಮಾರು 200 ಉದ್ಯೋಗಿಗಳ ವೇತನ ಮತ್ತು ಇತರ ಧಾರ್ಮಿಕ ವಿಧಿ ವಿಧಾನಗಳ ಖರ್ಚು ವೆಚ್ಚ ನಿರ್ವಹಿಸಲು ಪ್ರತಿ ತಿಂಗಳು ದೇವಾಲಯಕ್ಕೆ ₹1.25 ಕೋಟಿ ಅಗತ್ಯವಿದೆ. ಆದರೆ ಕೋವಿಡ್‌ನಿಂದ ದೇವಸ್ಥಾನದ ತಿಂಗಳ ಆದಾಯದಲ್ಲಿ ಇಳಿಕೆಯಾಗಿದೆ. ಕೋವಿಡ್‌ನಿಂದ ಹಲವಾರು ತಿಂಗಳುಗಳ ಕಾಲ ದೇವಾಲಯವು ಭಕ್ತರಿಗೆ ಮುಚ್ಚಲ್ಪಟ್ಟಿತ್ತು. ಆದ್ದರಿಂದ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಯು ಕೆಲವು ತಿಂಗಳ ಹಿಂದೆ ₹52 ಕೋಟಿ ಆರ್ಥಿಕ ನೆರವು ಕೋರಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು.

ಕಳೆದ ಎರಡು ತಿಂಗಳು ಶಬರಿಮಲೆ ಯಾತ್ರೆಯ ಮಾಸದ ಸಂದರ್ಭದಲ್ಲಿ ಅಪಾರ ಭಕ್ತರ ಭೇಟಿಯಿಂದ ದೇವಸ್ಥಾನದ ಆದಾಯದಲ್ಲಿ ಗಣನೀಯ ಹೆಚ್ಚಳವಾಗಿದೆ ಎಂದು ತಿಳಿದು ಬಂದಿದೆ. ಅಯ್ಯಪ್ಪ ಸ್ವಾಮಿಯ ದರ್ಶನಕ್ಕೆ ವಿವಿಧ ರಾಜ್ಯಗಳಿಂದ ಬಂದ ಭಕ್ತರು ಅನಂತಪದ್ಮನಾಭ ದೇವಾಲಯಕ್ಕೂ ಭೇಟಿ ನೀಡಿದ್ದಾರೆ. ಆದರೆ ಶಬರಿಮಲೆ ಯಾತ್ರೆಯು ಈ ವಾರ ಕೊನೆಗೊಳ್ಳುತ್ತದೆ. ಕೋವಿಡ್ ಸನ್ನಿವೇಶದ ಹದಗೆಟ್ಟ ಪರಿಸ್ಥಿತಿಯಿಂದ ಮತ್ತೆ ಭಕ್ತರ ಸಂಖ್ಯೆ ಕ್ಷೀಣಿಸಬಹುದು ಎಂದು ದೇವಾಲಯದ ಅಧಿಕಾರಿಗಳು ಕಳವಳಗೊಂಡಿದ್ದಾರೆ.

ದೇವಾಲಯಕ್ಕೆ ಆರ್ಥಿಕ ನೆರವಿನ ನಿರಾಕರಣೆಯನ್ನು ರಾಜಕೀಯಗೊಳಿಸಲು ಹಲವು ಹಿಂದೂ ಸಂಘಟನೆಗಳು ಪ್ರಯತ್ನಿಸುತ್ತಿವೆ. ಹಿಂದೂ ಧಾರ್ಮಿಕ ಕೇಂದ್ರಗಳ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಧೋರಣೆ ತೋರುತ್ತಿದೆ ಎಂದು ವಿಶ್ವ ಹಿಂದೂ ಪರಿಷತ್ ನಾಯಕರು ಆರೋಪಿಸಿದ್ದಾರೆ.



ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದ ಸ್ಪ್ಯಾನಿಶ್ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಭಾನುವಾರ ಪ್ರಶಸ್ತಿ ಜಯಿಸಿದ ರಿಯಲ್ ಮ್ಯಾಡ್ರಿಡ್ ಆಟಗಾರರ ಸಂಭ್ರಮ. ಫೈನಲ್‌ನಲ್ಲಿ ತಂಡವು 2–0ಯಿಂದ ಅಟ್ಲೆಟಿಕ್ ಬಿಲ್ಬಾವೊ ತಂಡವನ್ನು ಸೋಲಿಸಿತು –ರಾಯಿಟರ್ಸ್ ಚಿತ್ರ

ಚಾಂಪಿಯನ್ಸ್ ಲೀಗ್: 'ಬಿ' ಗುಂಪಿನಲ್ಲಿ ಮುಂಬೈ ತಂಡ

ಮುಂಬೈ (ಪಿಟಿಐ): ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡ ಈ ವರ್ಷದ ಎಎಫ್‌ಸಿ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ 'ಬಿ' ಗುಂಪಿನಲ್ಲಿ ಸ್ಥಾನ ಗಳಿಸಿದೆ.

ಟೂರ್ನಿಯ ಡ್ರಾ ಕಾರ್ಯಕ್ರಮ ಕ್ವಾಲಾಲಂಪುರದಲ್ಲಿ ಸೋಮವಾರ ನಡೆಯಿತು. ಯುಎಇಯ ಅಲ್ ಜಝಿರಾ, ಸೌದಿ ಅರೆಬಿಯಾದ ಅಲ್ ಶಾಬಬ್ ಮತ್ತು ಇರಾಕ್‌ನ ಏರ್‌ಫೋರ್ಸ್ ಕ್ಲಬ್ ತಂಡಗಳೊಂದಿಗೆ ಮುಂಬೈ ಸಿಟಿ ಎಫ್‌ಸಿ ಗುಂಪು ಹಂತದಲ್ಲಿ ಸೆಣಸಲಿದೆ.

ಐಎಸ್‌ಎಲ್‌ನ ಕಳೆದ ಆವೃತ್ತಿಯ ಲೀಗ್ ಹಂತದ ಚಾಂಪಿಯನ್ ಆಗಿತ್ತು.

ಗಣರಾಜ್ಯೋತ್ಸವ: ದೊಡ್ಡ ಮಟ್ಟದ ವೈಮಾನಿಕ ಪ್ರದರ್ಶನ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ದಿನದಂದು ರಾಜಪಥದಲ್ಲಿ ನಡೆಯುವ ಪಥಸಂಚಲನದಲ್ಲಿ ಈ ಬಾರಿ 75 ವಿಮಾನಗಳ ಅತ್ಯುತ್ತಮ ಮತ್ತು ಅತಿದೊಡ್ಡ ವೈಮಾನಿಕ ಪ್ರದರ್ಶನ ಇರಲಿದೆ ಎಂದು ಭಾರತೀಯ ವಾಯುದಳದ (ಐಎಎಫ್) ಅಧಿಕಾರಿಯೊಬ್ಬರು ಸೋಮವಾರ ಹೇಳಿದ್ದಾರೆ.

ಈ ವೇಳೆ 7 ಜಾಗ್ವಾರ್ ಯುದ್ಧ ವಿಮಾನಗಳು ಹಾರಾಟ ನಡೆಸುವುದರೊಂದಿಗೆ ವೈಮಾನಿಕ ಪ್ರದರ್ಶನವು ಮುಕ್ತಾಯಗೊಳ್ಳಲಿದೆ.

'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭವನ್ನು ಸ್ಮರಣೀಯವಾಗಿಸಲು ಈ ವರ್ಷದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ವಾಯುಪಡೆ, ಸೇನೆ ಮತ್ತು ನೌಕಾಪಡೆಯ 75 ವಿಮಾನಗಳು ಹಾರಾಟ ನಡೆಸಲಿವೆ. ಇದು ಅತಿದೊಡ್ಡ ವೈಮಾನಿಕ ಪ್ರದರ್ಶನವಾಗಲಿದೆ' ಎಂದು ಐಎಎಫ್ ಪಿಆರ್‌ಒ ಘಟಕದ ಕಮಾಂಡರ್ ಇಂದ್ರಾನಿಲ್ ನಂದಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

29 ಮರಿಗಳಿಗೆ ಜನ್ಮ ನೀಡಿದ್ದ 'ಸೂಪರ್ ಮಾಮ್' ಹುಲಿ ಸಾವು

ಶಿವನಿ (ಮಧ್ಯಪ್ರದೇಶ): 29 ಮರಿಗಳಿಗೆ ಜನ್ಮ ನೀಡಿ 'ಸೂಪರ್ ಮಾಮ್' ಎಂದು ಖ್ಯಾತಿಯಾಗಿದ್ದ ಮಧ್ಯಪ್ರದೇಶದ ಪೆಂಚ್ ರಾಷ್ಟ್ರೀಯ ಉದ್ಯಾನದ ಹುಲಿಯೊಂದು ವಯೋ ಸಹಜ ಕಾಯಿಲೆಯಿಂದ ಅಸುನೀಗಿದೆ.

'ಕಾಲರ್‌ವಾಲಿ' ಎಂದು ಹೆಸರಿಸಲಾಗಿದ್ದ ಟಿ15 ಎಂಬ 17 ವರ್ಷದ ಹೆಣ್ಣು ಹುಲಿ ಶನಿವಾರ ಸಂಜೆ ಅನಾರೋಗ್ಯದಿಂದ ಮೃತಪಟ್ಟಿದೆ ಎಂದು ಉದ್ಯಾನದ ಅಧಿಕಾರಿಗಳು ಹೇಳಿದ್ದಾರೆ.

ಕಾಲರ್‌ವಾಲಿ 2008 ರಿಂದ 2018 ರ ಅವಧಿಯಲ್ಲಿ ಒಟ್ಟು 29 ಮರಿಗಳಿಗೆ ಜನ್ಮ ನೀಡಿ 'ಸೂಪರ್ ಮಾಮ್' ಎಂದು ಬಿರುದು ಪಡೆದಿತ್ತು. 2008 ನವೆಂಬರ್‌ನಲ್ಲಿ ಈ ಹುಲಿ ಮೊದಲು ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು. ಕಳೆದ ಒಂದು ವಾರದಿಂದ ಅದರ ಆರೋಗ್ಯದಲ್ಲಿ ವ್ಯತ್ಯಾಸ ಕಂಡು ಬಂದಿತ್ತು. ಸಿಬ್ಬಂದಿ ಚಿಕಿತ್ಸೆ ನೀಡಿದ್ದರು. ಆದರೆ, ವಯೋಸಹಜವಾಗಿ ಮೃತಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೂಪರ್ ಮಾಮ್ ನಿಧನಕ್ಕೆ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಸಂತಾಪ ಸೂಚಿಸಿದ್ದು, 'ಈ ಹುಲಿ ಮಧ್ಯಪ್ರದೇಶದ ಹೆಮ್ಮೆಯಾಗಿತ್ತು' ಎಂದು ಸ್ಮರಿಸಿದ್ದಾರೆ. ಮಧ್ಯಪ್ರದೇಶದ ಅರಣ್ಯ ಇಲಾಖೆ ಮಾಹಿತಿ ಪ್ರಕಾರ ರಾಜ್ಯದಲ್ಲಿ 526 ಹುಲಿಗಳಿವೆ.

ನಿಧನ ವಾರ್ತೆ

ಎಂ.ಕೆ.ಪ್ರಸಾದ್

ಕೊಚ್ಚಿ (ಪಿಟಿಐ): ಕೇರಳದ ಸೈಲೆಂಟ್ ವ್ಯಾಲಿಯಲ್ಲಿ ನಿತ್ಯಹರಿದ್ವರ್ಣ ಮಳೆಕಾಡುಗಳನ್ನು ವಿನಾಶದಿಂದ ರಕ್ಷಿಸಲು ನಡೆಸಿದ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹೆಸರಾಂತ ಪರಿಸರವಾದಿ ಪ್ರೊ.ಎಂ.ಕೆ.ಪ್ರಸಾದ್ (89) ಸೋಮವಾರ ನಿಧನರಾದರು.

ಕೋವಿಡ್ ಸಂಬಂಧಿತ ಸಮಸ್ಯೆಗಳಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಪಡೆಯುತ್ತಿದ್ದ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು ಎಂದು ಅವರ ಸಹೋದ್ಯೋಗಿಗಳು ಹೇಳಿದ್ದಾರೆ.

1970ರ ದಶಕದಲ್ಲಿ ಪಾಲಕ್ಕಾಡ್ ಜಿಲ್ಲೆಯ ಸೈಲೆಂಟ್ ವ್ಯಾಲಿಯಲ್ಲಿ ಜಲವಿದ್ಯುತ್ ಯೋಜನೆಯನ್ನು ಸ್ಥಾಪಿಸುವ ರಾಜ್ಯ ಸರ್ಕಾರದ ಕ್ರಮದ ವಿರುದ್ಧದ ರಾಷ್ಟ್ರೀಯ ಚಳವಳಿಯಲ್ಲಿ ಪ್ರಸಾದ್ ಪ್ರಮುಖ ಪಾತ್ರ ವಹಿಸಿದ್ದರು. ಪರಿಸರವಾದಿಗಳ ನಿರಂತರ ಒತ್ತಡಕ್ಕೆ ಮಣಿದ ಸರ್ಕಾರ ಯೋಜನೆಯನ್ನು ಕೈಬಿಟ್ಟಿತ್ತು. ಸೈಲೆಂಟ್ ವ್ಯಾಲಿ ಅರಣ್ಯಗಳನ್ನು ಸಂರಕ್ಷಿಸಲಾಗುವುದು ಎಂದು ಅಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಭರವಸೆ ನೀಡಿದ ನಂತರ 80 ರ ದಶಕದ ಆರಂಭದಲ್ಲಿ ಹೋರಾಟವನ್ನು ಹಿಂತೆಗೆದುಕೊಳ್ಳಲಾಗಿತ್ತು.

ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಮಾಜಿ ಪರಿಸರ ಸಚಿವ ಜೈರಾಮ್ ರಮೇಶ್ ಮತ್ತು ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಸನ್ ಅವರು ಪ್ರಸಾದ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಮಾಜಿ ಸಚಿವ ಎನ್.ಡಿ.ಪಾಟೀಲ್




ಮುಂಬೈ: ಮಹಾರಾಷ್ಟ್ರದ ಮಾಜಿ ಸಹಕಾರ ಸಚಿವ ಹಾಗೂ ಪೀಸಂಟ್ಸ್ ಆ್ಯಂಡ್ ವರ್ಕರ್ಸ್ ಪಾರ್ಟಿ (ಪಿಡಬ್ಲ್ಯುಪಿ) ನಾಯಕ ಪ್ರೊ. ಎನ್.ಡಿ.ಪಾಟೀಲ್ (93) ಸೋಮವಾರ ನಿಧನರಾದರು.

ಟೋಲ್ ಸಂಗ್ರಹ ವಿರೋಧಿ ಅಭಿಯಾನ ಸಹಿತ ಮಹಾರಾಷ್ಟ್ರದಲ್ಲಿ ಹಲವು ಚಳವಳಿಗಳ ನೇತೃತ್ವ ವಹಿಸಿದ್ದ ಅವರು ಮೂಲತಃ ಶಿಕ್ಷಣ ತಜ್ಞ. ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ವಿಭಾಗದ ಡೀನ್ ಅಗಿದ್ದ ಅವರು, 18 ವರ್ಷಗಳ ಕಾಲ ವಿಧಾನ ಪರಿಷತ್ ಸದಸ್ಯರಾಗಿದ್ದರು.

ಕರ್ನಾಟಕದೊಂದಿಗಿನ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರ ರಚಿಸಿದ್ದ ಕಾನೂನು ಸಮಿತಿಯೊಂದಕ್ಕೆ ಪಾಟೀಲ್ ಅವರು ನೇತೃತ್ವ ವಹಿಸಿದ್ದರು.

ಕಲಾವಿದ ಅಲೆಕೋಸ್ ಫ್ಯಾಸೈನೋಸ್



ಅಥೆನ್ಸ್ (ಎಪಿ): ಗ್ರೀಸ್‌ನ ಆಧುನಿಕ ಚಿತ್ರ ಕಲಾವಿದರಲ್ಲಿ ಒಬ್ಬರಾದ ಅಲೆಕೋಸ್ ಫ್ಯಾಸೈನೋಸ್ (86) ದೀರ್ಘ ಕಾಲದ ಅಸೌಖ್ಯದ ಬಳಿಕ ಭಾನುವಾರ ಇಲ್ಲಿ ನಿಧನರಾದರು.

ಅಲೆಕೋಸ್ ಅವರ ಕೆಲವು ಆರಂಭಿಕ ಪೇಂಟಿಂಗ್‌ಗಳು ಪ್ರಾಚೀನ ಗ್ರೀಕ್ ಪುರಾಣ ಕಥೆಗಳನ್ನು ಆಧರಿಸಿದ್ದವು. ಬೈಜಂಟೈನ್ ಕಥೆಗಳಿಂದಲೂ ಅವರು ಪ್ರಭಾವಿತರಾಗಿದ್ದರು. ಜಗತ್ತಿನ ಹಲವೆಡೆ ಅವರ ಕಲಾಕೃತಿಗಳು ಪ್ರದರ್ಶನ ಕಂಡಿವೆ.

ಐಎಸ್‌ಎಲ್: ಒಡಿಶಾ– ನಾರ್ತ್‌ಈಸ್ಟ್ ಮುಖಾಮುಖಿ

ಮಡಗಾಂವ್ (ಪಿಟಿಐ): ಕೋಚ್ ಕಿಕೊ ರೆಮಿರೆಜ್ ಅವರನ್ನು ಕೈಬಿಟ್ಟಿರುವ ಒಡಿಶಾ ಎಫ್‌ಸಿ ತಂಡವು, ಲಯ ಕಂಡುಕೊಳ್ಳುವ ನಿರೀಕ್ಷೆಯಲ್ಲಿದ್ದು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ಸವಾಲು ಎದುರಿಸಲಿದೆ.

ಕಳೆದ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಎದುರು ನಿರಾಸೆ ಅನುಭವಿಸಿದ ಬಳಿಕ ಒಡಿಶಾ ತಂಡವು ರೆಮಿರೆಜ್ ಅವರೊಂದಿಗಿನ ಒಪ್ಪಂದವನ್ನು ಕೊನೆಗೊಳಿಸಿತ್ತು. ಸದ್ಯ ತಂಡವು 10 ಪಂದ್ಯಗಳಿಂದ 13 ಪಾಯಿಂಟ್ಸ್ ಕಲೆಹಾಕಿದೆ.

ಕಿಕೊ ಬದಲಿಗೆ ಕಿನೊ ಗಾರ್ಸಿಯಾ ಅವರು ಒಡಿಶಾ ತಂಡದ ಹಂಗಾಮಿ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಾರ್ತ್ ಈಸ್ಟ್ ಎದುರಿನ ಪಂದ್ಯದಲ್ಲಿ ತಂಡವನ್ನು ಜಯದ ದಡ ತಲುಪಿಸುವ ಹೊಣೆ ಹೊತ್ತಿದ್ದಾರೆ. ನಾರ್ತ್‌ಈಸ್ಟ್ ತಂಡವು 11 ಪಂದ್ಯಗಳಿಂದ ಒಂಬತ್ತು ಪಾಯಿಂಟ್ಸ್ ಗಳಿಸಿದ್ದು ಜಯಕ್ಕೆ ಕಾತರಿಸುತ್ತಿದೆ.

ಈ ಹಿಂದೆ ಒಡಿಶಾ ತಂಡದಲ್ಲಿ ಆಡಿದ್ದ ಮಾರ್ಸೆಲಿನೊ ಪೆರೇರಾ ಸದ್ಯ ನಾರ್ತ್‌ಈಸ್ಟ್ ತಂಡದ ಪ್ರಮುಖ ಶಕ್ತಿಯಾಗಿದ್ದಾರೆ. ಐಎಸ್‌ಎಲ್ ಟೂರ್ನಿಯಲ್ಲಿ 33 ಗೋಲು ಗಳಿಸಿರುವ ಅವರು 18 ಬಾರಿ 'ಅಸಿಸ್ಟ್' ಮಾಡಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಜಮ್ಷೆಡ್‌ಪುರ– ಹೈದರಾಬಾದ್ ಪಂದ್ಯ ಮುಂದೂಡಿಕೆ

ಬ್ಯಾಂಬೊಲಿಮ್ (ಪಿಟಿಐ): ಕೋವಿಡ್ ಪ್ರಕರಣಗಳ ಹಿನ್ನೆಲೆಯಲ್ಲಿ ಆಟಗಾರರ ಕೊರತೆ ಎದುರಿಸಿದ ಕಾರಣ ಜಮ್ಷೆಡ್‌ಪುರ ಎಫ್‌ಸಿ ತಂಡದ ಹೈದರಾಬಾದ್ ಎಫ್‌ಸಿ ಎದುರಿನ ಸೋಮವಾರದ ಪಂದ್ಯವನ್ನು ಮುಂದೂಡಲಾಗಿದೆ.

ಪಂದ್ಯ ಆರಂಭವಾಗಬೇಕಿದ್ದ ಕೆಲವೇ ಸಮಯದ ಮುನ್ನ ಈ ನಿರ್ಧಾರಕ್ಕೆ ಬರಲಾಯಿತು. ಮುಂದಿನ ಯಾವುದಾದರೂ ದಿನಾಂಕದದಂದು ಈ ಪಂದ್ಯವನ್ನು ನಿಗದಿಪಡಿಸಲಾಗುತ್ತದೆ. 'ಜಮ್ಷೆಡ್‌ಪುರ ತಂಡವು ತಂಡವನ್ನು ಕಣಕ್ಕಿಳಿಸಲು ಸಾಧ್ಯವಾಗುತ್ತಿಲ್ಲ ಎಂಬ ಸಂಗತಿಯನ್ನು ಪರಿಗಣಿಸಿ ಲೀಗ್‌ನ ವೈದ್ಯಕೀಯ ತಂಡದೊಂದಿಗೆ ಸಮಾಲೋಚಿಸಿ ಪಂದ್ಯವನ್ನು ಮುಂದೂಡುವ ನಿರ್ಧಾರಕ್ಕೆ ಬರಲಾಗಿದೆ' ಎಂದು ಐಎಸ್‌ಎಲ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ತಂಡದ ಕನಿಷ್ಠ ಇಬ್ಬರು ಆಟಗಾರರಿಗೆ ಕೋವಿಡ್ ಖಚಿತಪಟ್ಟ ಬಳಿಕ ಜಮ್ಷೆಡ್‌ಪುರದ ಹಲವು ಆಟಗಾರರನ್ನು ಪ್ರಾಥಮಿಕ ಸಂಪರ್ಕಿತರೆಂದು ಪರಿಗಣಿಸಿ ಪ್ರತ್ಯೇಕವಾಸದಲ್ಲಿರಿಸಲಾಗಿದೆ. ಹೀಗಾಗಿ 11 ಆಟಗಾರರ ತಂಡವನ್ನು ಕಣಕ್ಕಿಳಿಸಲು ಸಾಧ್ಯವಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

ಈ ಬಾರಿ ಐಪಿಎಲ್‌ಗೆ ಸ್ಟೋಕ್ಸ್ ಇಲ್ಲ

ಲಂಡನ್: ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ಈ ಬಾರಿ ಐಪಿಎಲ್‌ನಲ್ಲಿ ಆಡದೇ ಇರಲು ನಿರ್ಧರಿಸಿದ್ದಾರೆ. ಒತ್ತಡದಿಂದ ಮುಕ್ತನಾಗಲು ಮತ್ತು ರಾಷ್ಟ್ರೀಯ ತಂಡದಲ್ಲಿ ಮುಂದಿನ ಋತುವಿನಲ್ಲಿ ಸ್ಥಿರ ಪ್ರದರ್ಶನ ನೀಡುವ ಉದ್ದೇಶದಿಂದ ಈ ನಿರ್ಧಾರ ಮಾಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಆ್ಯಷಸ್ ಸರಣಿಯ ಐದು ಪಂದ್ಯಗಳಲ್ಲಿ ಸ್ಟೋಕ್ಸ್ 236 ರನ್ ಗಳಿಸಿದ್ದು 4 ವಿಕೆಟ್ ಮಾತ್ರ ಉರುಳಿಸಿದ್ದಾರೆ. ಕಳೆದ ವರ್ಷದ ಆವೃತ್ತಿ ಯಲ್ಲಿ ಸ್ಟೋಕ್ಸ್ ರಾಜಸ್ಥಾನ್ ರಾಯಲ್ಸ್ ಪರ ಆಡಿದ್ದರು. ಆದರೆ ಕೋವಿಡ್‌ನಿಂದಾಗಿ ಟೂರ್ನಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿದಾಗ ಅವರು ಕೈಬೆರಳಿಗೆ ಗಾಯ ಮಾಡಿಕೊಂಡಿದ್ದರು. ಪುನರಾರಂಭಗೊಂಡ ನಂತರ ಆಡಲು ಆಗಲಿಲ್ಲ.

ಬೆಂಗಳೂರು ರೇಸ್

ಆಬ್ಸಿಡಿಯನ್ ಗೆಲ್ಲುವ ನಿರೀಕ್ಷೆ

ಇಂಡಿಯನ್ ಆರ್ಮಿ ಡೇ ಟ್ರೋಫಿ ಮಂಗಳವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಬ್ಸಿಡಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಐಕಾನಿಕ್ ಪ್ರಿನ್ಸೆಸ್ 11, ಫ್ಲೇಯಿಂಗ್ ಬೋಲ್ಟ್ 1, ಆಲ್ಟೇರ್ 7
2ನೇ ರೇಸ್: ಜ್ಯಾಕ್ ರಿಯಾನ್ 1, ಹೋಪ್ ಐಲ್ಯಾಂಡ್ 8, ತೆನಾಲಿ 6
3ನೇ ರೇಸ್: ಡಿಸ್ರಪ್ಟರ್ 3, ಫ್ಲೆಮಿಂಗ್ ಫಾಲ್ಕನ್ 4, ಲಾಸ್ಟ್ ವಿಷ್ 5
4ನೇ ರೇಸ್: ಸಿಂಕೊ ಡೆ ಮೇಯೊ 6, ಫ್ಲೆಮಿಂಗ್ ಆರೇಂಜ್ 8, ಏರೋಸ್ಪೀಡ್ 5
5ನೇ ರೇಸ್: ಡೀನ್ಸ್ ಡೆನ್ 7, ಟ್ಯಾಕ್ಟಿಕಲ್ ಕಮಾಂಡ್ 2, ಸ್ಟಾರ್ ಕ್ಯಾವಲ್ರಿ 4
6ನೇ ರೇಸ್: ಆಬ್ಸಿಡಿಯನ್ 2, ಡಿ ವಿಲ್ಲೀಯರ್ಸ್ 4, ರೂಲ್ ಆಫ್ ಎಂಗೇಜ್‌ಮೆಂಟ್ 6
7ನೇ ರೇಸ್: ಲಾರ್ಡ್ಸ್ ಆಫ್ ಲೆಜೆಂಡ್ 8, ರೆಮೆಂಟಾಯರ್ 10, ಓನ್ ಲೆಗಸಿ 1
8ನೇ ರೇಸ್: ಫನ್ ಅಂಡ್ ಲಾಫ್ಟರ್ 4, ಡಿಫೈನಿಂಗ್ ಪವರ್ 7, ದಿ ಇನ್‌ಹೆರಿಟರ್ 9

ಉತ್ತಮ ಬೆಟ್: ಲಾರ್ಡ್ಸ್ ಆಫ್ ಲೆಜೆಂಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಕೋವಿಡ್: ಚೇತರಿಸಿಕೊಂಡ ಪಂಕಜ್ ಅಡ್ವಾಣಿ



ಪಂಕಜ್

ಮುಂಬೈ (ಪಿಟಿಐ): ಹಲವು ಬಾರಿ ವಿಶ್ವ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್ ಆಗಿರುವ ಪಂಕಜ್ ಅಡ್ವಾಣಿ ಅವರು ಕೋವಿಡ್‌ನಿಂದ ಚೇತರಿಸಿಕೊಂಡಿದ್ದಾರೆ.

'ಕೋವಿಡ್ ಖಚಿತಪಟ್ಟ ಬಳಿಕ ಏಳು ದಿನಗಳ ಕ್ವಾರಂಟೈನ್‌ನಲ್ಲಿ ಇದ್ದೆ. ಕೊನೆಗೂ ಸಂಪೂರ್ಣ ಗುಣಮುಖನಾಗಿದ್ದೇನೆ' ಎಂದು ಪಂಕಜ್ ಹೇಳಿದ್ದಾರೆ.

'ನನಗೆ ತೀವ್ರ ಜ್ವರವಿತ್ತು. ಹಬೆ ತೆಗೆದುಕೊಂಡೆ; ಸಾಧ್ಯವಾದಷ್ಟು ಹೆಚ್ಚು ವಿಶ್ರಾಂತಿ ಪಡೆದೆ' ಎಂದು ಪಂಕಜ್ ಅವರು ಹೇಳಿದ್ದಾರೆ.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಅಮೆರಿಕದ ಯುವ ಆಟಗಾರ್ತಿ ಕೊಕೊ ಗಫ್‌ಗೆ ಆಘಾತ

ಒಸಾಕ, ನಡಾಲ್ ಶುಭಾರಂಭ

ಮೆಲ್ಬರ್ನ್ (ರಾಯಿಟರ್ಸ್): ಸ್ಪೇನ್‌ನ ರಫೆಲ್ ನಡಾಲ್ ಮತ್ತು ಜಪಾನ್‌ನ ನವೊಮಿ ಒಸಾಕ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮೊದಲ ಸವಾಲನ್ನು ಸುಲಭವಾಗಿ ಮೀರಿದ್ದಾರೆ. ಸೋಮವಾರ ಆರಂಭಗೊಂಡ ಟೂರ್ನಿಯ ಆರಂಭಿಕ ಸುತ್ತಿನ ಪಂದ್ಯಗಳಲ್ಲಿ ಇವರಿಬ್ಬರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಗೆಲುವು ಸಾಧಿಸಿದ್ದಾರೆ.

ಮಹಿಳಾ ವಿಭಾಗದ ಹಾಲಿ ಚಾಂಪಿಯನ್ ಒಸಾಕ 6-3, 6-3ರಲ್ಲಿ ಕೊಲಂಬಿಯಾದ ಕಮಿಲಾ ಒಸೋರಿಯೊ ವಿರುದ್ಧ ಜಯ ಗಳಿಸಿದರು. ರಫೆಲ್ ನಡಾಲ್ 6-1, 6-4, 6-2ರಲ್ಲಿ ಅಮೆರಿಕದ ಮಾರ್ಕೋಸ್ ಗಿರಾನ್ ಅವರನ್ನು ಮಣಿಸಿದರು.

ಮೆಲ್ಬರ್ನ್ ಪಾರ್ಕ್‌ನಲ್ಲಿ 2019ರಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದ ಒಸಾಕ ಇತ್ತೀಚೆಗೆ ವಿವಾದ ಮತ್ತು ಗಾಯದ ಸಮಸ್ಯೆಯಿಂದಾಗಿ ಪ್ರಮುಖ ಟೂರ್ನಿಗಳಿಂದ ಹೊರಗುಳಿದಿದ್ದರು. ಸೋಮವಾರ ರಾಡ್ ಲೇವರ್‌ನಲ್ಲಿ ನಡೆದ ಪಂದ್ಯದಲ್ಲಿ 24 ವರ್ಷದ ಆಟಗಾರ್ತಿ ಆರಂಭದಲ್ಲೇ ಸತತ ಐದು ಗೇಮ್‌ಗಳನ್ನು ಗೆದ್ದುಕೊಂಡು ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು. ಮೊದಲ ಸೆಟ್‌ನಲ್ಲಿ ಸುಲಭ ಜಯ ಸಾಧಿಸಿದ ಅವರು ಮುಂದಿನ ಸೆಟ್‌ನಲ್ಲೂ ಅದೇ ಲಯವನ್ನು ಮುಂದುವರಿಸಿದರು.

ದಾಖಲೆಯ 21ನೇ ಗ್ರ್ಯಾಂಡ್‌ಸ್ಲಾಂ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ನಡಾಲ್ ಸುಲಭವಾಗಿ ಎದುರಾಳಿಯನ್ನು ಮಣಿಸಿದರು. ಲಸಿಕೆ ಮತ್ತು ವೀಸಾ ಪ್ರಕರಣದಿಂದಾಗಿ ನೊವಾಕ್ ಜೊಕೊವಿಚ್ ತವರಿಗೆ ವಾಪಸಾಗಿದ್ದು ರೋಜರ್ ಫೆಡರರ್ ಈ ಟೂರ್ನಿಯಲ್ಲಿ ಆಡದೇ ಇರಲು ನಿರ್ಧರಿಸಿದ್ದಾರೆ. ಆರನೇ ಶ್ರೇಯಾಂಕಿತ ನಡಾಲ್ 34 'ವಿನ್ನರ್'ಗಳ ಮೂಲಕ ಎದುರಾಳಿಯನ್ನು ನಿರುತ್ತರರಾಗಿಸಿದರು. ಮಹಿಳೆಯರ ವಿಭಾಗದ ವಿಶ್ವದ ಅಗ್ರ ಕ್ರಮಾಂಕದ ಆಟಗಾರ್ತಿ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಉಕ್ರೇನ್‌ನ ಲೇಸಿಯಾ ಸುರೆಂಕೊ ವಿರುದ್ಧ 6-0, 6-1ರಲ್ಲಿ ಜಯ ಸಾಧಿಸುವ ಮೂಲಕ ಪ್ರಶಸ್ತಿ ಕನಸಿಗೆ ಜೀವ ತುಂಬಿದ್ದಾರೆ. ಮುಂದಿನ ಸುತ್ತಿನಲ್ಲಿ ಅವರಿಗೆ ಇಟಲಿಯ ಲೂಸಿಯಾ ಬ್ರಾನ್ಜೆಟಿ ಎದುರಾಳಿ.



ಚೆಂಡು ರಿಟರ್ನ್ ಮಾಡಲು ಮುಂದಾದ ನವೊಮಿ ಒಸಾಕ –ರಾಯಿಟರ್ಸ್ ಚಿತ್ರ



ರಫೆಲ್ ನಡಾಲ್ ಅವರು ಚೆಂಡನ್ನು ರಿಟರ್ನ್ ಮಾಡಿದ ವಿಧಾನ

ಕೊಕೊ ಗಫ್‌ಗೆ ನಿರಾಶೆ: ಅಮೆರಿಕದ ಯುವ ಆಟಗಾರ್ತಿ ಕೊಕೊ ಗಫ್ ಮೊದಲ ಸುತ್ತಿನಲ್ಲೇ ಆಘಾತಕ್ಕೆ ಒಳಗಾದರು. ಮಹಿಳೆಯರ ವಿಭಾಗದಲ್ಲಿ ಅವರು ಚೀನಾದ ವಾಂಗ್ ಕಿಯಾಂಗ್ ವಿರುದ್ಧ ಸೋಲನುಭವಿಸಿದರು.

2 ವರ್ಷಗಳ ಹಿಂದೆ ಅಮೆರಿಕದ ಸೆರೆನಾ ವಿಲಿಯಮ್ಸ್ ವಿರುದ್ಧ ಗೆದ್ದು ಗಮನ ಸೆಳೆದಿದ್ದ ವಾಂಗ್ ಕಿಯಾಂಗ್ 6-4, 6-2ರಲ್ಲಿ 18ನೇ ಶ್ರೇಯಾಂಕಿತ ಕೊಕೊ ಎದುರು ಜಯ ಸಾಧಿಸಿದರು. 0–5ರ ಹಿನ್ನಡೆಯಲ್ಲಿದ್ದ ಸಂದರ್ಭದಲ್ಲಿ ಕೊಕೊ ನಾಲ್ಕು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿ ನಿರೀಕ್ಷೆ ಮೂಡಿಸಿದ್ದರು. ಆದರೆ ವಾಂಗ್ ಅವರ ಅಮೋಘ ಆಟದ ಮುಂದೆ ಅಮೆರಿಕ ಆಟಗಾರ್ತಿ 38 ಬಾರಿ ಸ್ವಯಂ ತಪ್ಪುಗಳನ್ನು ಎಸಗಿ ಸುಲಭವಾಗಿ ಸೋಲೊಪ್ಪಿಕೊಂಡರು. ಫ್ರೆಂಚ್ ಓಪನ್ ಚಾಂಪಿಯನ್ ಹಾಗೂ ನಾಲ್ಕನೇ ಶ್ರೇಯಾಂಕದ ಜೆಕ್ ಗಣರಾಜ್ಯದ ಆಟಗಾರ್ತಿ ಬಾರ್ಬೊರಾ ಕ್ರೆಸಿಕೋವಾ 6-2, 6-0ರಲ್ಲಿ ಜರ್ಮನಿಯ ಆ್ಯಂಡ್ರಿ ಪೆಟ್ಕೊವಿಚ್ ವಿರುದ್ಧ, ಅಮೆರಿಕದ ಮ್ಯಾಡಿಸನ್ ಕೀಸ್ 7-6(2), 7-5ರಲ್ಲಿ ಅಮೆರಿಕದ ಸೋಫಿಯಾ ಕೆನಿನ್ ವಿರುದ್ಧ ಜಯ ಸಾಧಿಸಿದರು.

ಕೋವಿಡ್ ಲಸಿಕೆ: ಜೊಕೊವಿಚ್‌ಗೆ ಫ್ರಾನ್ಸ್ ಎಚ್ಚರಿಕೆ

ಲಸಿಕೆ ಹಾಕಿಸಿಕೊಳ್ಳಲು ಮುಂದಾಗದೇ ಇದ್ದರೆ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಆಡಲು ಅವಕಾಶ ನೀಡುವುದಿಲ್ಲ ಎಂದು ಫ್ರಾನ್ಸ್‌ನ ಕ್ರೀಡಾ ಸಚಿವರು ಸೋಮವಾರ ನೊವಾಕ್ ಜೊಕೊವಿಚ್ ಅವರಿಗೆ ಎಚ್ಚರಿಕೆ ನೀಡಿದ್ದಾರೆ. ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸಿ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಲು ಬಂದಿದ್ದ ಜೊಕೊವಿಚ್ ಅವರನ್ನು ವಶಕ್ಕೆ ಪಡೆದುಕೊಂಡು ಎರಡು ಬಾರಿ ವೀಸಾ ರದ್ದು ಮಾಡಿ ವಾಪಸ್ ಕಳುಹಿಸಲಾಗಿತ್ತು.

ಫ್ರಾನ್ಸ್‌ನಲ್ಲಿ ಲಸಿಕೆ ನಿಯಮಕ್ಕೆ ಸಂಸತ್ತು ಭಾನುವಾರ ಒಪ್ಪಿಗೆ ನೀಡಿದೆ. ಹೊಸ ನಿಯಮದ ಪ್ರಕಾರ ಸಾರ್ವಜನಿಕ ಪ್ರದೇಶಗಳ ಪ್ರವೇಶಕ್ಕೆ ಲಸಿಕೆ ಕಡ್ಡಾಯ. ಈ ಹಿನ್ನೆಲೆಯಲ್ಲಿ ಸಚಿವಾಲಯದ ಪ್ರಕಟಣೆ ಹೊರಬಿದ್ದಿದೆ.

ಮುಂದಿನ ವರ್ಷ ಅವಕಾಶ: ಮುಂದಿನ ವರ್ಷದ ಆಸ್ಟ್ರೇಲಿಯನ್ ಓಪನ್‌ನಲ್ಲಿ ಆಡಲು ನೊವಾಕ್ ಜೊಕೊವಿಚ್‌ಗೆ ಅವಕಾಶ ಸಿಗಲಿದೆ ಎಂದು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ತಿಳಿಸಿದ್ದಾರೆ. ಸಮರ್ಪಕ ರೀತಿಯಲ್ಲಿ, ಸರಿಯಾದ ಸಮಯದಲ್ಲಿ ವ್ಯಕ್ತಿಗಳು ದೇಶ ಪ್ರವೇಶಿಸಲು ಯಾವ ಅಭ್ಯಂತರವೂ ಇಲ್ಲ. ಆದರೆ ಅದನ್ನು ಕಾಲ ನಿರ್ಣಯಿಸುತ್ತದೆ ಎಂದು ಮಾರಿಸನ್ ಅವರು ಅಭಿಪ್ರಾಯಪಟ್ಟಿದ್ದಾರೆ.



ಸರ್ಬಿಯಾದ ಬೆಲ್‌ಗ್ರೇಡ್ ತಲುಪಿದ ನೊವಾಕ್ ಜೊಕೊವಿಚ್ (ಬಲ) ಅವರಿಗೆ ತವರಿನಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು. ಈ ವೇಳೆ ಅಭಿಮಾನಿಯೊಬ್ಬರು ಅವರೊಡನೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು– ರಾಯಿಟರ್ಸ್ ಚಿತ್ರ

ಬಿಸಿಸಿಐ ಮಾಜಿ ಕಾರ್ಯದರ್ಶಿ ಸಂಜಯ್ ಅಭಿಮತ

ಟೆಸ್ಟ್: ರಾಹುಲ್ ನಾಯಕನಾಗಲಿ

ಇಂದೋರ್ (ಪಿಟಿಐ): ಆರಂಭಿಕ ಬ್ಯಾಟರ್ ಕೆ.ಎಲ್.ರಾಹುಲ್ ಅವರಿಗೆ ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಪಟ್ಟ ಅಲಂಕರಿಸುವ ಅರ್ಹತೆ ಇದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮಾಜಿ ಕಾರ್ಯದರ್ಶಿ ಸಂಜಯ್ ಜಗದಾಳೆ ಅಭಿಪ್ರಾಯಪಟ್ಟಿದ್ದಾರೆ.

ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಯಾಗಿರುವ ಸಂಜಯ್ ಸೋಮವಾರ ಸುದ್ದಿಸಂಸ್ಥೆಯ ಜೊತೆ ಮಾತನಾಡಿ ತಂಡವನ್ನು ದೀರ್ಘ ಕಾಲ ಯಶಸ್ವಿಯಾಗಿ ಮುನ್ನಡೆಸಲು ರಾಹುಲ್ ಅವರಿಗೆ ಸಾಧ್ಯವಿದೆ ಎಂದು ಹೇಳಿದರು.

ಏಳು ವರ್ಷ ಭಾರತ ತಂಡದ ನಾಯಕತ್ವವನ್ನು ನಿರ್ವಹಿಸಿದ ವಿರಾಟ್ ಕೊಹ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯ ಸೋಲಿನ ನಂತರ ಕಳೆದ ಶನಿವಾರ ದಿಢೀರ್ ಆಗಿ ನಾಯಕತ್ವ ತೊರೆದಿದ್ದರು. ಒಟ್ಟು 68 ಪಂದ್ಯಗಳಲ್ಲಿ 40 ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿರುವ ಕೊಹ್ಲಿ ಅತ್ಯಂತ ಯಶಸ್ವಿ ನಾಯಕ ಎಂಬ ಶ್ರೇಯ ಹೊಂದಿದ್ದಾರೆ. 2014ರಲ್ಲಿ ಆಸ್ಟ್ರೇಲಿಯಾ ಸರಣಿಯ ಮಧ್ಯದಲ್ಲಿ ಮಹೇಂದ್ರ ಸಿಂಗ್ ಧೋನಿ ನಾಯಕತ್ವಕ್ಕೆ ವಿದಾಯ ಹೇಳಿದ್ದಾಗ ಕೊಹ್ಲಿ ಆ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.


'ದೀರ್ಘಕಾಲದವರೆಗೆ ತಂಡವನ್ನು ಮುನ್ನಡೆಸಬಲ್ಲ ಜವಾಬ್ದಾರಿ ಹೊರಲು ಸಾಧ್ಯ ಇರುವವರಿಗೆ ಮಾತ್ರ ಮುಂದಿನ ನಾಯಕತ್ವದ ಹೊಣೆ ನೀಡಬೇಕು. ಈ ದೃಷ್ಟಿಯಲ್ಲಿ ಯೋಚಿಸಿದರೆ ಕೆ.ಎಲ್. ರಾಹುಲ್ ಸೂಕ್ತ ಆಯ್ಕೆ' ಎಂದು ಜಗದಾಳೆ ಹೇಳಿದರು.

ಮುಂದಿನ ನಾಯಕ ಯಾರು ಎಂದು ಬಿಸಿಸಿಐ ಇನ್ನೂ ಘೋಷಣೆ ಮಾಡಿಲ್ಲ. ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳುವ ಮುನ್ನ ರೋಹಿತ್ ಶರ್ಮಾ ಅವರನ್ನು ಉಪನಾಯಕನನ್ನಾಗಿ ಮಾಡಲಾಗಿತ್ತು. ಆದರೆ ಅವರು ಗಾಯದ ಸಮಸ್ಯೆಯಿಂದಾಗಿ ದಕ್ಷಿಣ ಆಫ್ರಿಕಾಕ್ಕೆ ಹೋಗಿರಲಿಲ್ಲ. ಎರಡನೇ ಪಂದ್ಯದ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ವಿಶ್ರಾಂತಿ ಪಡೆದಿದ್ದಾಗ ರಾಹುಲ್ ತಂಡವನ್ನು ಮುನ್ನಡೆಸಿದ್ದರು.



ಕೆ.ಎಲ್‌.ರಾಹುಲ್ –ರಾಯಿಟರ್ಸ್ ಚಿತ್ರ

ಏಕದಿನ ಸರಣಿಗೆ ಸಜ್ಜಾಗುತ್ತಿರುವ ರೋಹಿತ್



ರೋಹಿತ್ ಶರ್ಮಾ

ನವದೆಹಲಿ: ಮಂಡಿರಜ್ಜು ನೋವಿನಿಂದ ಬಳಲುತ್ತಿದ್ದ ಭಾರತ ಏಕದಿನ ತಂಡದ ನಾಯಕ ರೋಹಿತ್ ಶರ್ಮಾ ಬಹುತೇಕ ಚೇತರಿಸಿಕೊಂಡಿದ್ದು ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಆಡುವ ಸಾಧ್ಯತೆ ಇದೆ. ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಬೆಳೆಸುವ ಕೆಲವೇ ದಿನಗಳಿಗೆ ಮೊದಲು ಅಭ್ಯಾಸದ ವೇಳೆ ರೋಹಿತ್ ಶರ್ಮಾ ಗಾಯಗೊಂಡಿದ್ದರು. ಆದ್ದರಿಂದ ತಂಡದೊಂದಿಗೆ ತೆರಳಲು ಸಾಧ್ಯವಾಗಿರಲಿಲ್ಲ.

ಇದೇ 19ರಂದು ಆರಂಭವಾಗಲಿರುವ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯಲ್ಲೂ ಅವರು ಆಡುವುದಿಲ್ಲ. ಸದ್ಯ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಚಿಕಿತ್ಸೆಯಲ್ಲಿರುವ ಅವರ ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದಿದೆ. ಫೆಬ್ರುವರಿ ಆರರಂದು ಅಹಮದಾಬಾದ್‌ನಲ್ಲಿ ನಡೆಯಲಿರುವ ಮೊದಲ ಪಂದ್ಯದ ವೇಳೆ ಸಂಪೂರ್ಣ ಫಿಟ್ ಆಗಲಿದ್ದಾರೆ ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ. ವೆಸ್ಟ್ ಇಂಡೀಸ್ ವಿರುದ್ಧ ಭಾರತ ತಲಾ ಮೂರು ಏಕದಿನ ಮತ್ತು ಟ್ವೆಂಟಿ20 ಪಂದ್ಯಗಳನ್ನು ಆಡಲಿದೆ. ಆರರಿಂದ 12ರ ವರೆಗೆ ಏಕದಿನ ಸರಣಿ, 15ರಿಂದ 20ರ ವರೆಗೆ ಟ್ವೆಂಟಿ20 ಸರಣಿ ನಡೆಯಲಿದೆ.

ನಾಯಕತ್ವಕ್ಕೆ ನಾನು ಸಿದ್ಧ: ಬೂಮ್ರಾ

ಪರ್ಲ್, ದಕ್ಷಿಣ ಆಫ್ರಿಕಾ: ತಂಡವನ್ನು ಮುನ್ನಡೆಸುವ ಅವಕಾಶ ನೀಡಿದರೆ ನಿರಾಕರಿಸಲಾರೆ. ಭಾರತ ತಂಡದ ನಾಯಕನಾಗುವುದೆಂದರೆ ಅದೃಷ್ಟವೇ ಸರಿ ಎಂದು ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯ ಹಿನ್ನೆಲೆಯಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ನಾಯಕತ್ವದ ಹೊಣೆ ವಹಿಸಿದರೆ ಬೇಡ ಎನ್ನಲು ಯಾವ ಆಟಗಾರನಿಗೂ ಸಾಧ್ಯವಿಲ್ಲ. ಅದರಿಂದ ನಾನೇನು ಭಿನ್ನವಲ್ಲ. ಅವಕಾಶ ಲಭಿಸಿದರೆ ತಂಡದ ಶ್ರೇಯಸ್ಸಿಗಾಗಿ ಶಕ್ತಿಮೀರಿ ಪ್ರಯತ್ನಿಸುವೆ' ಎಂದರು.

ಕೆಎಸ್‌ಎಫ್‌ಎ ಮಹಿಳಾ ಫುಟ್‌ಬಾಲ್ ಲೀಗ್

ಕಿಕ್‌ಸ್ಟಾರ್ಟ್ ಎಫ್‌ಸಿ ಚಾಂಪಿಯನ್

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ರಾಜ್ಯ ಮಹಿಳಾ ಲೀಗ್‌ನ ಚಾಂಪಿಯನ್ ಆಗಿ ಹೊರಹೊಮ್ಮಿತು. ಮಿಸಾಕ ಯುನೈಟೆಡ್ ಎಫ್‌ಸಿ ರನ್ನರ್ ಅಪ್ ಆಯಿತು.

ಸೋಮವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಮಾತೃ ಪ್ರತಿಷ್ಠಾನ ವಿರುದ್ಧ ಜಯ ಗಳಿಸುವ ಮೂಲಕ ತಂಡವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿತು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ಕಿಕ್‌ಸ್ಟಾರ್ಟ್ 5–1ರಿಂದ ಗೆಲುವು ದಾಖಲಿಸಿತು. ಕಿಕ್‌ಸ್ಟಾರ್ಟ್‌ಗಾಗಿ ಕಾವ್ಯ (3 ಮತ್ತು 26ನೇ ನಿಮಿಷ), ಸುಷ್ಮಿತ ಲೇಪ್ಚ (27ನೇ ನಿ), ಆರುಷಿ ಸಂತೋಷ್ (45+1) ಮತ್ತು ಫನ್ಜೊ ನಿರ್ಮಲಾ ದೇವಿ (68ನೇ ನಿ) ಗೋಲು ಗಳಿಸಿದರೆ ಎದುರಾಳಿ ತಂಡದ ಗೋಲು ಅಂಕುಶ್ (73ನೇ ನಿ) ಅರಿಂದ ಮೂಡಿ ಬಂತು.



ಕಿಕ್‌ಸ್ಟಾರ್ಟ್ ಎಫ್‌ಸಿಯ ಕಾವ್ಯ (ಬಲ) ಮತ್ತು ಮಾತೃಪ್ರತಿಷ್ಠಾನದ ಖುಷ್ಬೂ ಚೆಂಡಿಗಾಗಿ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ

ದಿನದ ಮತ್ತೊಂದು ಪಂದ್ಯದಲ್ಲಿ ಮಿಸಾಕ ಯುನೈಟೆಡ್ ಎಫ್‌ಸಿ 2–0ಯಿಂದ ಪರಿಕ್ರಮ ಎಫ್‌ಸಿಯನ್ನು ಮಣಿಸಿತು. ಬೆಂಗಳೂರು ಯುನೈಟೆಡ್ ಎಫ್‌ಸಿ ಮತ್ತು ಬೆಂಗಳೂರು ಬ್ರೇವ್ಸ್ 3–3ರಲ್ಲಿ ಡ್ರಾ ಸಾಧಿಸಿದವು.



ಯು.ಪಿ.ಯೋಧಾದ ರೇಡರ್ ಸುರೇಂದರ್ ಗಿಲ್ ಎದುರಾಳಿ ತಂಡದ ಟ್ಯಾಕ್ಲರ್‌ಗಳಿಂದ ತಪ್ಪಿಸಿಕೊಂಡ ಕ್ಷಣ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	11	7	3	1	39
ಪಟ್ನಾ ಪೈರೇಟ್ಸ್	10	7	2	1	39
ದಬಂಗ್ ಡೆಲ್ಲಿ	10	6	2	2	37
ಯುಪಿ ಯೋಧಾ	11	4	4	3	33
ಜೈಪುರ್ ಪಿಂಕ್ ಪ್ಯಾಂಥರ್ಸ್	10	5	4	1	31
ತಮಿಳ್ ತಲೈವಾಸ್	10	3	2	5	30
ಬೆಂಗಾಲ್ ವಾರಿಯರ್ಸ್	11	5	5	1	30
ಯು ಮುಂಬಾ	10	3	3	4	28
ಹರಿಯಾಣ ಸ್ಟೀಲರ್ಸ್	10	3	5	2	24
ಪುಣೇರಿ ಪಲ್ಟನ್	10	4	6	-	21
ಗುಜರಾತ್ ಜೈಂಟ್ಸ್	9	2	5	2	20
ತೆಲುಗು ಟೈಟನ್ಸ್	10	-	8	2	12

(ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಕಬಡ್ಡಿ: ಯೋಧಾ, ವಾರಿಯರ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಡಿಂಗ್ ಜೋಡಿ ಸುರೇಂದರ್ ಗಿಲ್ ಮತ್ತು ಪ್ರದೀಪ್ ನರ್ವಾಲ್ ಅವರ 'ಸೂಪರ್' ಆಟದ ನೆರವಿನಿಂದ ಯು.ಪಿ.ಯೋಧಾ ತಂಡ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿತು. ಸೋಮವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಪುಣೇರಿ ಪಲ್ಟನ್ ತಂಡವನ್ನು ಯೋಧಾ 50–40ರಲ್ಲಿ ಮಣಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಿರ್ಮಿಸಿರುವ ಮ್ಯಾಟ್‌ನಲ್ಲಿ ಸುರೇಂದರ್ ಗಿಲ್ ಮತ್ತು ಪ್ರದೀಪ್ ನರ್ವಾಲ್ ಮಿಂಚಿದರು. ಇಬ್ಬರೂ ಕ್ರಮವಾಗಿ 21 ಮತ್ತು 10 ಪಾಯಿಂಟ್ ಕಲೆ ಹಾಕಿದರು. ಪುಣೇರಿ ಪಲ್ಟನ್ ತಂಡಕ್ಕಾಗಿ ಅಸ್ಲಾಂ ಇನಾಮದಾರ್ ಮತ್ತು ಮೋಹಿತ್ ಗೋಯತ್ ಸೂಪರ್ ಟೆನ್ ಸಾಧನೆ ಮಾಡಿದರು. ಆದರೆ ಟ್ಯಾಕ್ಲಿಂಗ್‌ನಲ್ಲಿ ಆದ ವೈಫಲ್ಯಗಳಿಂದಾಗಿ ತಂಡ ಸೋಲಿನ ಬಲೆಯಲ್ಲಿ ಸಿಲುಕಿತು.

ಇಂದಿನ ಪಂದ್ಯ (ರಾತ್ರಿ)
ದಬಂಗ್ ಡೆಲ್ಲಿ – ಪಟ್ನಾ ಪೈರೇಟ್ಸ್ Vs 7.30
ಗುಜರಾತ್ ಜೈಂಟ್ಸ್ – ಯು ಮುಂಬಾ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಂದ್ಯದ ಮೊದಲಾರ್ಧದಲ್ಲಿ ಉಭಯ ತಂಡಗಳೂ ಧಾರಾಳ ಪಾಯಿಂಟ್‌ಗಳನ್ನು ಕಲೆ ಹಾಕಿದವು. ಮೂರು ಪಾಯಿಂಟ್‌ಗಳೊಂದಿಗೆ ಪ್ರದೀಪ್ ನರ್ವಾಲ್ ಮೊದಲ ರೇಡ್‌ನಲ್ಲೇ ಮಿಂಚಿದರು. ಅಸ್ಲಾಂ ಮತ್ತು ಮೋಹಿತ್ ಅವರ ಸಾಧನೆಯಿಂದಾಗಿ ಯು.ಪಿ.ಯೋಧಾ ಆಲೌಟಾಯಿತು. ಮೊದಲಾರ್ಧ 20–20ರಲ್ಲಿ ಸಮ ಆಯಿತು. ಆದರೆ ದ್ವಿತೀಯಾರ್ಧದಲ್ಲಿ ಯೋಧಾ ಭರ್ಜರಿ ಆಟವಾಡಿ 30 ಪಾಯಿಂಟ್ ಕಲೆ ಹಾಕಿತು.

ಎರಡನೇ ಹಂತ 20ರಿಂದ : ಟೂರ್ನಿಯ ಎರಡನೇ ಹಂತದ ಪಂದ್ಯಗಳು ಇದೇ 20ರಂದು ಆರಂಭವಾಗಲಿವೆ ಎಂದು ಆಯೋಜಕರಾದ ಮಶಾಲ್ ಸ್ಪೋರ್ಟ್ಸ್ ಸಂಸ್ಥೆಯವರು ಸೋಮವಾರ ತಿಳಿಸಿದ್ದಾರೆ. ಈ ಹಂತದಲ್ಲಿ ಒಟ್ಟು 33 ಪಂದ್ಯಗಳು ನಡೆಯಲಿದ್ದು ಮೊದಲ ಹಣಾಹಣಿಯಲ್ಲಿ ತಮಿಳ್ ತಲೈವಾಸ್ ಮತ್ತು ಗುಜರಾತ್ ಜೈಂಟ್ಸ್ ಮುಖಾಮುಖಿಯಾಗಲಿವೆ. ಅದೇ ದಿನ ನಡೆಯಲಿರುವ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಮತ್ತು ಪಟ್ನಾ ಪೈರೇಟ್ಸ್ ಸೆಣಸಲಿವೆ. ಫೆಬ್ರವರಿ ನಾಲ್ಕರಂದು ಕೊನೆಯ ಪಂದ್ಯ ನಡೆಯಲಿದೆ.

ಕೊನೆಯ ಹಂತದಲ್ಲಿ ಮತ್ತೆ 33 ಪಂದ್ಯಗಳು ನಡೆಯಲಿವೆ. ಅಲ್ಲಿಗೆ ರೌಂಡ್ ರಾಬಿನ್ ಹಂತದ ಎಲ್ಲ 132 ಪಂದ್ಯಗಳು ಮುಕ್ತಾಯಗೊಳ್ಳಲಿವೆ. ನಂತರ ಪ್ಲೇ ಆಫ್ ಹಾಗೂ ಫೈನಲ್ ಇರುತ್ತದೆ ಎಂದು ತಿಳಿಸಲಾಗಿದೆ.

ಕ್ರಿಕೆಟ್: ಐರ್ಲೆಂಡ್ ತಂಡಕ್ಕೆ ಐತಿಹಾಸಿಕ ಸರಣಿ ವಿಜಯ

ಕಿಂಗ್‌ಸ್ಟನ್ (ಎಪಿ): ಐರ್ಲೆಂಡ್ ತಂಡವು ವೆಸ್ಟ್ ಇಂಡೀಸ್ ಎದುರಿನ ಮೂರನೇ ಹಾಗೂ ನಿರ್ಣಾಯಕ ಏಕದಿನ ಪಂದ್ಯದಲ್ಲಿ ಎರಡು ವಿಕೆಟ್‌ಗಳಿಂದ ಜಯಿಸುವ ಮೂಲಕ 2–1ರಿಂದ ಸರಣಿ ಗೆದ್ದು ಐತಿಹಾಸಿಕ ಸಾಧನೆ ಮಾಡಿತು.

ಐಸಿಸಿ ಪೂರ್ಣ ಸದಸ್ಯತ್ವ ಹೊಂದಿದ ತಂಡದ ಎದುರು ತವರಿನ ಹೊರಗೆ ಐರ್ಲೆಂಡ್ ತಂಡಕ್ಕೆ ಒಲಿದ ಮೊದಲ ಸರಣಿ ಗೆಲುವು ಇದು. 2019ರಲ್ಲಿ ಜಿಂಬಾಂಬ್ವೆ ವಿರುದ್ಧ ತವರಿನಲ್ಲಿ ನಡೆದ ಸರಣಿಯನ್ನು ಜಯಿಸಿತ್ತು. ಒಟ್ಟಾರೆ ಪೂರ್ಣ ಸದಸ್ಯತ್ವದ ತಂಡದ ಎದುರು ಐರ್ಲೆಂಡ್‌ಗೆ ಎರಡನೇ ಸರಣಿ ಜಯ.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ವೆಸ್ಟ್ ಇಂಡೀಸ್ 212ಕ್ಕೆ ಎಲ್ಲ ವಿಕೆಟ್ ಒಪ್ಪಿಸಿತ್ತು. ಐರ್ಲೆಂಡ್ 45ನೇ ಓವರ್‌ನಲ್ಲಿ 8 ವಿಕೆಟ್ ಕಳೆದುಕೊಂಡು ಜಯಿಸಿತು.

ಸಂಕ್ಷಿಪ್ತ ಸ್ಕೋರ್: ವೆಸ್ಟ್ ಇಂಡೀಸ್ 44.4 ಓವರ್‌ಗಳಲ್ಲಿ 212 (ಶಾಯ್ ಹೋಪ್ 53, ಜೇಸನ್ ಹೋಲ್ಡರ್ 44; ಕ್ರೇಗ್ ಯಂಗ್ 43ಕ್ಕೆ 3, ಆ್ಯಂಡಿ ಮೆಕ್‌ಬ್ರಯನ್ 28ಕ್ಕೆ 4). ಐರ್ಲೆಂಡ್: 44.5 ಓವರ್‌ಗಳಲ್ಲಿ 8ಕ್ಕೆ 214 (ಪಾಲ್ ಸ್ಟರ್ಲಿಂಗ್ 44, ಆ್ಯಂಡಿ ಮೆಕ್‌ಬ್ರಯನ್ 59, ಹ್ಯಾರಿ ಟೆಕ್ಟರ್ 52; ಅಕೀಲ್ ಹೊಸೇನ್ 59ಕ್ಕೆ 3, ರಾಸ್ಟನ್ ಚೇಸ್ 44ಕ್ಕೆ 3). ಫಲಿತಾಂಶ: ಐರ್ಲೆಂಡ್ ತಂಡಕ್ಕೆ ಎರಡು ವಿಕೆಟ್‌ಗಳ ಜಯ, 2–1ರಿಂದ ಸರಣಿ ಗೆಲುವು.

ಪ್ರಶಸ್ತಿ ಬರ ನೀಗುವ ನಿರೀಕ್ಷೆಯಲ್ಲಿ ಸಿಂಧು

ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ: ಸೈನಾ ನೆಹ್ವಾಲ್ ಅಲಭ್ಯ

ಲಖನೌ (ಪಿಟಿಐ): ಇಂಡಿಯಾ ಓಪನ್ ಟೂರ್ನಿಯ ಅನಿರೀಕ್ಷಿತ ಸೆಮಿಫೈನಲ್ ಸೋಲು ಮರೆಯುವ ಸನ್ನಾಹದಲ್ಲಿರುವ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಭಾರತದ ಪಿ.ವಿ.ಸಿಂಧು ಅವರು ಮಂಗಳವಾರ ಆರಂಭವಾಗುವ ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಮೇಲೆ ಚಿತ್ತ ನೆಟ್ಟಿದ್ದಾರೆ.

ಇಲ್ಲಿನ ಬಾಬು ಬನಾರಸಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

2019ರ ಮಹಿಳಾ ಸಿಂಗಲ್ಸ್ ವಿಶ್ವ ಚಾಂಪಿಯನ್‌ಷಿಪ್ ಗೆಲುವಿನ ನಂತರ ಪ್ರಶಸ್ತಿ ಬರ ಎದುರಿಸುತ್ತಿರುವ ಸಿಂಧು, ಇಂಡಿಯಾ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸುವ ಉತ್ಸಾಹದಲ್ಲಿದ್ದರು. ಆದರೆ ನಾಲ್ಕರ ಘಟ್ಟದ ಪಂದ್ಯದಲ್ಲಿ ಥಾಯ್ಲೆಂಡ್ ಆಟಗಾರ್ತಿ ಸುಪನಿದಾ ಕೇಟ್‌ಥೊಂಗ್ ಎದುರು ಎಡವಿದ್ದರು. ಕಳೆದ ವರ್ಷ ಸ್ವಿಸ್ ಓಪನ್ ಮತ್ತು ವಿಶ್ವ ಟೂರ್ ಫೈನಲ್ಸ್‌ನಲ್ಲಿ ರನ್ನರ್ ಅಪ್ ಸ್ಥಾನ ಗಳಿಸಿದ್ದ ಸಿಂಧು, ಸೈಯದ್ ಮೋದಿ ಟೂರ್ನಿಯಲ್ಲಿ ಭಾರತದವರೇ ಆದ ತಾನ್ಯಾ ಹೇಮಂತ್ ವಿರುದ್ಧ ಅಭಿಯಾನವನ್ನು ಪ್ರಾರಂಭಿಸ ಲಿದ್ದಾರೆ. ಸೆಮಿಫೈನಲ್‌ನಲ್ಲಿ ಮತ್ತೆ ಅವರಿಗೆ ಸುಪನಿದಾ ಸವಾಲು ಎದುರಾಗುವ ಸಾಧ್ಯತೆಯಿದೆ.

ಲಂಡನ್ ಒಲಿಂಪಿಕ್ಸ್ ಕಂಚಿನ ವಿಜೇತೆ ಸೈನಾ ನೆಹ್ವಾಲ್ ಗಾಯದಿಂದ ಇನ್ನೂ ಸಂಪೂರ್ಣ ಫಿಟ್ ಆಗದ ಕಾರಣ ಟೂರ್ನಿಯಲ್ಲಿ ಆಡುತ್ತಿಲ್ಲ.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಆಕರ್ಷಿ ಕಶ್ಯಪ್, ಮಾಳವಿಕಾ ಬಾನ್ಸೋದ್ ಕೂಡ ಅದೃಷ್ಟ ಪರೀಕ್ಷಿಸಲಿದ್ದಾರೆ. ಕೆನಡಾದ ಮಿಚೆಲ್ಲೆ ಲೀ, ಪೋಲೆಂಡ್‌ನ ಜೋರ್ಡಾನ್ ಹಾರ್ಟ್, ಅಮೆರಿಕದ ಐರಿಸ್ ವಾಂಗ್ ಮತ್ತು ರಷ್ಯಾದ ಇವ್‌ಜೆನಿಯಾ ಕೊಸೆತ್ಸಕಯಾ ಕೂಡ ಪ್ರಬಲ ಸ್ಪರ್ಧಿಗಳಾಗಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎಚ್.ಎಸ್. ಪ್ರಣಯ್, ಸೌರಭ್ ವರ್ಮಾ, ಸಮೀರ್ ವರ್ಮಾ, ಶುಭಂಕರ್ ಡೇ, ಕಿರಣ್ ಜಾರ್ಜ್, ಮಿಥುನ್ ಮಂಜುನಾಥ್ ಮತ್ತು ಪ್ರಿಯಾಂಶು ರಾಜಾವತ್ ಕಣಕ್ಕಿಳಿಯಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಭಟ್ ಕೆ.- ಶಿಖಾ ಗೌತಮ್ ಆಡಲಿದ್ದಾರೆ.



ಪಿ.ವಿ.ಸಿಂಧು– ಪಿಟಿಐ ಚಿತ್ರ

ಹಿಂದೆ ಸರಿದ ಲಕ್ಷ್ಯ, ಸಾತ್ವಿಕ್ –ಚಿರಾಗ್

ಇಂಡಿಯಾ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ಮತ್ತು ಪುರುಷರ ಡಬಲ್ಸ್ ವಿಭಾಗಗಳಲ್ಲಿ ಚಾಂಪಿಯನ್‌ಗಳಾದ ಕ್ರಮವಾಗಿ ಲಕ್ಷ್ಯ ಸೇನ್ ಮತ್ತು ಚಿರಾಗ್ ಶೆಟ್ಟಿ- ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಜೋಡಿಯು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಕಳೆದ ವರ್ಷದ ಅಕ್ಟೋಬರ್‌ನಿಂದ ಬೆನ್ನುಬೆನ್ನಿಗೆ ಟೂರ್ನಿಗಳಲ್ಲಿ ಆಡುತ್ತಿದ್ದು 'ದಣಿವಾಗಿದೆ' ಎಂಬ ಕಾರಣವನ್ನು ಲಕ್ಷ್ಯ ನೀಡಿದ್ದಾರೆ. ಈ ಅವಧಿಯಲ್ಲಿ ಅವರು ಒಂಬತ್ತು ಟೂರ್ನಿಗಳಲ್ಲಿ ಆಡಿದ್ದಾರೆ.

ಕಿದಂಬಿ ಶ್ರೀಕಾಂತ್, ಕರ್ನಾಟಕದ ಆಟಗಾರ್ತಿ ಅಶ್ವಿನಿ ಪೊನ್ನಪ್ಪ, ಮನು ಅತ್ರಿ ಕೂಡ ಕಣಕ್ಕಿಳಿಯುತ್ತಿಲ್ಲ. ಕಳೆದ ವಾರ ಕೋವಿಡ್ ಖಚಿತಪಟ್ಟ ಕಾರಣ ಈ ಮೂವರು ಇಂಡಿಯಾ ಓಪನ್ ಟೂರ್ನಿಯಲ್ಲೂ ಆಡಿರಲಿಲ್ಲ.